بِسْمِ اللّٰهِ الرَّحْمٰنِ الرَّحِيْمِ    نَحْمَدُهٗ وَنُصَلِّىْ عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 11–12

ವಾರ್ಷಿಕ ಶುಲ್ಕ ರೂ.500/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

18,25 ಮಾರ್ಚ್ 2021, 18,25 ಅಮಾನ್ 1400 ತಬ್‌ಲೀಗ್ ಹಿಜರಿ ಶಮ್‌ಸಿ, 04,11 ಶಅ್‌ಬಾನ್ 1442 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

**اَللّٰهُمَّ اَيِّدْ اِمَامَنَا بِرُوْحِ الْقُدُسِ وَبَارِكْ لَنَا فِىْ عُمُرِهٖ وَاَمْرِهٖ**

## ಅಲ್ಲಾಹನ ಉಪದೇಶ

يٰۤاَيُّهَا النَّاسُ قَدْ جَآءَكُمُ الرَّسُوْلُ بِالْحَقِّ مِنْ رَّبِّكُمْ فَاٰمِنُوْا خَيْرًا لَّكُمْ ؕ وَاِنْ تَكْفُرُوْا فَاِنَّ لِلّٰهِ مَا فِى السَّمٰوٰتِ وَالْاَرْضِ (ಅನ್ನಿಸಾಅ್:*171*)

ಅಂದರೆ: ಎಲೈ ಜನರೇ, ಈ ಸಂದೇಶವಾಹಕನು ನಿಮ್ಮ ಪ್ರಭುವಿನ ಕಡೆಯಿಂದ ಸತ್ಯದೊಂದಿಗೆ ನಿಮ್ಮ ಬಳಿಗೆ ಬಂದಿರುವನು. ನೀವು ವಿಶ್ವಾಸವನ್ನು ಹೊಂದಿರಿ; ಅದು ನಿಮಗೆ ಗುಣಕರವಾಗುವುದು. ನೀವು ನಂಬದಿದ್ದರೆ (ನೆನಪಿಡಿರಿ), ನಿಸ್ಸಂದೇಹವಾಗಿಯೂ ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ಎಲ್ಲವೂ ಅಲ್ಲಾಹನದ್ದಾಗಿವೆ. ಅಲ್ಲಾಹನು ಸರ್ವಜ್ಞನೂ ವಿವೇಕಶಾಲಿಯೂ ಆಗಿದ್ದಾನೆ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಮನುಷ್ಯನು ಅನೇಕ ಮಾತುಗಳಲ್ಲಿ ಜಗಳಗಂಟಿಯಾಗಿರುತ್ತಾನೆ.

(1127) ಹಝ್‌ರತ್ ಅಲಿ(ರ) ವರದಿ ಮಾಡುತ್ತಾರೆ: ರಸೂಲುಲ್ಲಾಹ್(ಸ) ಒಂದು ರಾತ್ರಿ ನನ್ನ ಹಾಗೂ ಹಝ್‌ರತ್ ಫಾತಿಮಾ (ಅವರು ನಬಿ(ಸ) ರವರ ಪುತ್ರಿಯಾಗಿದ್ದರು) ಅವರ ಬಳಿ ಬಂದು ಹೀಗೆ ಹೇಳಿದರು: ನೀವಿಬ್ಬರೂ (ತಹಜ್ಜುದ್) ನಮಾಝ್ ನಿರ್ವಹಿಸುವುದಿಲ್ಲವೇ? ನಾನು ಹೇಳಿದೆ: ಓ ನಬಿವರ್ಯರೇ! ನಮ್ಮ ಜೀವಗಳು ಅಲ್ಲಾಹನ ಕೈಯಲ್ಲಿವೆ, ಆತನು ಎಬ್ಬಿಸಬಯಸುವಾಗ ಎಬ್ಬಿಸುತ್ತಾನೆ. ನಾನು ಇಷ್ಟು ಹೇಳಿದ ಮೇಲೆ ಅವರು(ಸ) ಮರಳಿ ಹೋದರು. ನನಗೆ ಏನೂ ಉತ್ತರ ನೀಡಲಿಲ್ಲ. ಮರಳಿ ಹೋಗುವಾಗ ಅವರು(ಸ) ತಮ್ಮ ತೊಡೆಯ ಮೇಲೆ ಕೈಯನ್ನು ಬಾರಿಸುತ್ತಿದ್ದರು ಮತ್ತು ಹೀಗೆ ಹೇಳುತ್ತ ಹೋಗುವುದನ್ನು ನಾನು ಕೇಳಿದೆ. ಮನುಷ್ಯನು ಹಲವು ಮಾತುಗಳಲ್ಲಿ ಜಗಳಗಂಟಿಯಾಗಿದ್ದಾನೆ.

### ರಮಝಾನಿನಲ್ಲಿ ನಫಲ್ ನಮಾಝ್ ಜಮಾತಾಗಿ ನಿರ್ವಹಿಸುವುದು

(1129) ಹಝ್‌ರತ್ ಆಯಿಶಾ ಉಮ್ಮುಲ್ ಮುಮಿನೀನ್(ರ) ವರದಿ ಮಾಡುತ್ತಾರೆ: ರಸೂಲುಲ್ಲಾಹ್(ಸ) ಒಂದು ರಾತ್ರಿ ಮಸೀದಿಯಲ್ಲಿ ನಮಾಝ್ ನಿರ್ವಹಿಸಿದರು. ಜನರು ಸಹ ಅವರ ನೇತೃತ್ವದಲ್ಲಿ ನಮಾಝ್ ನಿರ್ವಹಿಸಿದರು. ಅದೇ ರೀತಿ ಅವರು(ಸ) ಎರಡನೆಯ ರಾತ್ರಿಯಲ್ಲೂ ನಿರ್ವಹಿಸಿದರು. ಇನ್ನಷ್ಟು ಜನರು ಬಂದು ಸೇರಿದರು. ಹೀಗೆ ಮೂರನೇ ಹಾಗೂ ನಾಲ್ಕನೇ ರಾತ್ರಿಯೂ ಸೇರಿದರು ರಸೂಲುಲ್ಲಾಹ್(ಸ) ಅವರನ್ನು ಅಗಲಿ ಹೋಗಲಿಲ್ಲ. ಮುಂಜಾನೆ ಆದಾಗ ಅವರು(ಸ) ನುಡಿದರು: ನಾನು ನೀವು ಮಾಡುತ್ತಿದ್ದನ್ನು ನೋಡುತ್ತಿದ್ದೆ. ಅದಕ್ಕಾಗಿಯೇ ನಾನು ನಿಮ್ಮಿಂದ ಅಗಲಿ ಹೋಗಲಿಲ್ಲ. ನೀವು (ತಹಜ್ಜುದ್) ನಮಾಝ್ ಫರ್ಜ್ (ಕಡ್ಡಾಯ) ಎಂದು ಭಾವಿಸಕೂಡದು ಎಂದು ಹೀಗೆ ಮಾಡಿದೆ. ಈ ಘಟನೆ ರಂಝಾನಿನಲ್ಲಿ ಘಟಿಸಿದೆ.

**(ಸಹೀ ಬುಖಾರಿ ಸಂಪುಟ 2, ಕಿತಾಬುತ್ತಹಜ್ಜದ್, ಮುದ್ರಣ ಖಾದಿಯಾನ್ 2006)**

## ಮನುಷ್ಯ ಎಂದೂ ವ್ಯರ್ಥವಾಗದಂತಹ ದೊಡ್ಡ ಸಂತೋಷ ಮತ್ತು ಅಪಾಯಗಳ ವೇಳೆ ಅಲ್ಲಾಹನನ್ನು ಆಶ್ರಯಿಸುವುದೆಂದರೆ ಅದು ಅಲ್ಲಾಹನ ಮೇಲೆ ಭರವಸೆ ಹೊಂದುವುದಾಗಿದೆ.

**ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ಅಲ್ಲಾಹನ ಮೇಲೆ ಭರವಸೆ

ಇಸ್ಲಾಂ ಧರ್ಮದ ವಿಶೇಷ ಕೊಡುಗೆ ಎಂದರೆ ಅಲ್ಲಾಹನ ಮೇಲೆ ಭರವಸೆ ಹೊಂದುವುದಾಗಿರುತ್ತದೆ. ಸದಖಾತ್ (ದಾನ) ಮತ್ತು ದುಆ (ಪ್ರಾರ್ಥನೆ) ಅನುಸರಿಸಿದವನೇ ಮುಸಲ್ಮಾನ. ಕ್ರೈಸ್ತರಿಗೆ ಈ ಮಾತಿನ ಮೇಲೆ ಭರವಸೆ ಇಲ್ಲ ಏಕೆಂದರೆ ಅವರು ಬಾಹ್ಯವಾಗಿ ದೇವನನ್ನು ಸೃಷ್ಟಿಸಿದ್ದಾರೆ. ಮನುಷ್ಯ ಎಂದೂ ವ್ಯರ್ಥವಾಗದಂತಹ ದೊಡ್ಡ ಸಂತೋಷ ಮತ್ತು ಅಪಾಯಗಳ ವೇಳೆ ಅಲ್ಲಾಹನನ್ನು ಆಶ್ರಯಿಸುವುದೆಂದರೆ ಅದು ಅಲ್ಲಾಹನ ಮೇಲೆ ಭರವಸೆ ಹೊಂದುವುದಾಗಿದೆ. ಅಲ್ಲಾಹನ ಮೇಲೆ ಭರವಸೆ ಹೊಂದಿರಿ ಎಂಬುದು ಕೇವಲ ಇಸ್ಲಾಂ ಧರ್ಮದ ಶಿಕ್ಷಣವಾಗಿದೆ.

### ತಾಯಿಯ ಸೇವೆ

ಮನುಷ್ಯನ ಮೊದಲ ಸುಯೊಗ ಎಂದರೆ ತಾಯಿಯನ್ನು ಆದರಿಸುವುದು. ಅವೇಸ್ ಖರ್‌ನಿ(ರ) ಅವರ ಬಗ್ಗೆ ಕೆಲವೊಮ್ಮೆ ರಸೂಲುಲ್ಲಾಹ್(ಸ) ಎದುರಿನ ಕಡೆ ಮುಖ ಮಾಡಿ ಹೇಳುತ್ತಿದ್ದರು. ನನಗೆ ಯಮನ್‌ನ ಕಡೆಯಿಂದ ದೈವಿಕ ಪರಿಮಳ ಬರುತ್ತದೆ. ಅವರು ಹೀಗೂ ನುಡಿಯುತ್ತಿದ್ದರು. ಅವೇಸ್ ಖರ್‌ನಿ(ರ) ಅವರು ತಾಯಿಯ ಸೇವೆಯಲ್ಲಿ ಯಾವಾಗಲೂ ತೊಡಗಿಸಿಕೊಂಡಿರುತ್ತಾರೆ. ಅದೇ ಕಾರಣದಿಂದ ನನ್ನ ಬಳಿ ಬರಲು ಅವರಿಗೆ ಸಾಧ್ಯವಾಗುತ್ತಿಲ್ಲ. ಅಂದರೆ ನಬಿವರ್ಯರು ಉಪಸ್ಥಿತರಿದ್ದರೂ ತನ್ನ ತಾಯಿಯ ಸೇವೆ ಮತ್ತು ವಿಧೇಯತೆ ಕಾರಣದಿಂದಾಗಿ ಅವರಿಗೆ ದರ್ಶನ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಆದರೂ ಗಮನಿಸುವ ವಿಷಯವೆಂದರೆ ರಸೂಲುಲ್ಲಾಹ್(ಸ) ಇಬ್ಬರು ವ್ಯಕ್ತಿಗಳಿಗೆ ಮಾತ್ರ "ಅಸ್ಸಲಾಮುಅಲೈಕುಂ" ಎಂದು ತಿಳಿಸಲು ವಿಶೇಷಾಜ್ಞೆ ಹೊರಡಿಸುವರು. ಒಂದು ಅವೇಸರಿಗೆ(ರ) ಇನ್ನೊಂದು ಮಸೀಹ್(ಅ) ಅವರಿಗೆ. ಇದೊಂದು ಆಶ್ಚರ್ಯಕರ ಮಾತಾಗಿದೆ ಈ ವಿಶೇಷತೆ ಬೇರೆ ಯಾರಿಗೂ ದೊರಕಲಿಲ್ಲ. ಅಂದ ಹಾಗೆ ತಿಳಿದು ಬರುವುದೇನೆಂದರೆ, ಹಝ್‌ರತ್ ಉಮರ್(ರ) ಅವೇಸರನ್ನು ಭೇಟಿ ಮಾಡಲು ಹೋದಾಗ, ಅವೇಸರು ಹೇಳಿದರು ನಾನು ತಾಯಿಯ ಸೇವೆಯಲ್ಲಿ ತೊಡಗಿಸಿಕೊಂಡಿರುತ್ತೇನೆ. ನನ್ನ ಒಂಟೆಗಳನ್ನು ದೇವದೂತರು ಮೇಯಿಸುತ್ತಾರೆ. ತನ್ನ ತಾಯಿಯ ಸೇವೆ ಮಾಡಿದ ಪರಿಣಾಮವಾಗಿ ಅಷ್ಟೊಂದು ಗೌರವ ಹಾಗೂ ಖ್ಯಾತಿ ದೊರೆತ ಜನರಿದ್ದಾರೆ. ಇನ್ನೊಂದೆಡೆ ಒಂದೆರಡು ಕಾಸಿಗೊಸ್ಕರ ಮೊಕದ್ದಮೆಗಳನ್ನು ಹೂಡುವವರು, ತನ್ನ ತಾಯಿಯ ಹೆಸರನ್ನು ನೀಚ ಮನುಷ್ಯರು ಸಹ ಹೇಳಲಿಕ್ಕಾಗದ ರೀತಿಯಲ್ಲಿ ಉಪಯೋಗಿಸುತ್ತಾರೆ. ನಮ್ಮ ಶಿಕ್ಷಣವೇನು? ಕೇವಲ ಅಲ್ಲಾಹ್ ಮತ್ತು ಅವನ ಪ್ರವಾದಿ(ಸ) ರವರ ಪವಿತ್ರ ಉಪದೇಶಗಳನ್ನು ತಿಳಿಸುವುದಾಗಿದೆ. ಯಾರಿಗೆಲ್ಲ ನನ್ನೊಂದಿಗೆ ಸಂಬಂಧವಿದೆಯೋ ಅವರೆಲ್ಲ ಈ ಮತುಗಳನ್ನು ಒಪ್ಪದಿದ್ದರೆ ಏಕಾದರೂ ನನ್ನ ಜಮಾಅತಿಗೆ ಸೇರಬೇಕು? ಇಂತಹವರಿಂದ ಇತರರು ಎಡವುತ್ತಾರೆ, ನಿಮ್ಮಲ್ಲಿ ಮಾತಪಿತರ ಮಾನ ಕೆಡಿಸುವಂತಹ ಜನರಿದ್ದಾರೆಂದು ಆಕ್ಷೇಪ ಎತ್ತುತ್ತಾರೆ.

**(ಮಲ್ಫೂಝಾತ್ ಸಂಪುಟ–1, ಪುಟ–269–270, ಮುದ್ರಣ ಖಾದಿಯಾನ್)**

## ನಮ್ಮ ಜಮಾಅತಿನ ಜನರ ಮೇಲೆ ಒಂದು ಮಿತಿಯೊಳಗೆ ಒತ್ತಾಯ ಹೇರಬಹುದಾಗಿದೆ, ಉದಾಹರಣೆಗೆ ಅಹ್ಮದಿ ಒಬ್ಬನು ನಮಾಝ್ ನಿರ್ವಹಿಸದಿದ್ದರೆ ಅದರಿಂದ ಇಡೀ ಜಮಾಅತ್‌ನ ಹೆಸರು ಕೆಡುತ್ತದೆ. ಆದುದರಿಂದ ನಮ್ಮ ಹಕ್ಕಿದೆ. ಆ ವ್ಯಕ್ತಿಗೆ ಸುಧಾರಿಸಿಕೊಳ್ಳಲು ಒತ್ತಾಯ ಹೇರಬಹುದು.

**ವ ಇನ್ ಕಝ್ಝುಬೂಕ ಫಕುಲ್ಲೀ ಅಮಲೀ ವಲಕುಮ್ ಅಮಲಕುಮ್, ಅನ್ತುಮ್ ಬರೀಐನ ಮಿಮಗಮಾ ಅಅ್‌ಮಲು ಡ ಅನಾ ಬರೀಯಮ್ಮಿಮ್ಮಾ ತಅ್‌ಮಲೂನ್** ಸೂರಃ ಯೂನುಸ್ ವಚನ 42ರ ವ್ಯಾಖ್ಯಾನ ಮಾಡುತ್ತ ಸಯ್ಯದನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ನುಡಿದರು:

"ಮತ್ತು ಅವರು ನಿನ್ನನ್ನು ಸುಳ್ಳಾಗಿಸುವುದಾದರೆ ಹೇಳು. ನನಗೆ ನನ್ನ ಕರ್ಮಫಲವಿದೆ. ನಿಮಗೆ ನಿಮ್ಮ ಕರ್ಮಫಲವಿದೆ. ನನ್ನ ಕೃತ್ಯಕ್ಕೆ ನೀವು ಹೊಣೆಗಾರರಲ್ಲ. ನಿಮ್ಮ ಕೃತ್ಯಕ್ಕೆ ನಾನು ಸಹ ಹೊಣೆಗಾರನಲ್ಲ. (10:42).

ಮೊದಲ ವಚನದಲ್ಲಿ **"ಅಅ್‌ಲಮು ಬಿಲ್ ಮುಫ್‌ಸಿದೀನ"** ಎಂದೇನು ಹೇಳಲಾಗಿದೆಯೋ ಅದು ಈ ವಚನದ ಕಡೆ ಸೂಚಿಸುತ್ತಾ ಇದೆ ಅಂದರೆ ನಿಮ್ಮ ಜಮಾಅತ್ ಬೇರೆ ಮತ್ತು ನಮ್ಮ ಜಮಾಅತ್ ಬೇರೆ ಅಥವಾ ನಿಮ್ಮ ಕರ್ಮಫಲಗಳು ಬೇರೆ ನಮ್ಮ ಕರ್ಮಫಲಗಳು ಬೇರೆ ಎಂದು ಎಲ್ಲರು ಅರಿತಿದ್ದರು ಸಹ ಮತ್ತೇಕೆ ಪಿತೂರಿತನಕ್ಕೆ, ಬಲವಂತಕ್ಕೆ ಮತ್ತು ದೌರ್ಜನ್ಯಕ್ಕೆ ಇಳಿಯುತ್ತಾರೆ? ಅದಕ್ಕೆ ಕಾರಣ ಒಬ್ಬರಿಂದ ಇನ್ನೊಬ್ಬರ ಮೇಲೆ ಅಪವಾದ ಬರುವಂತಾದರೆ ಬಲವಂತ ಮಾಡಬಹುದಾಗಿದೆ ಆದರೆ ಇಲ್ಲಿ ನನ್ನಿಂದ ಅಥವಾ ನನ್ನ ಜಮಾಅತಿನ ಕರ್ಮಫಲದಿಂದಾಗಿ ನಿಮ್ಮ ಮೇಲೆ ಯಾವ ಅಪವಾದವು ಬರುವುದಿಲ್ಲ ಮತ್ತು ನಿಮ್ಮ ಕರ್ಮಫಲದಿಂದಾಗಿ ನಮ್ಮ ಮೇಲೆ ಯಾವ ಅಪವಾದ ಬರುವುದಿಲ್ಲ. ಆದುದರಿಂದ ಬಲವಂತವು ಅಸಂಭವವಾಗಿದೆ.

*(ಪುಟ ಸಂಖೆ 08 ರಲ್ಲಿ ಮುಂದುವರಿಸಲಾಗಿದೆ)*

لَآ اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ۞ شَرَّ السُّمُوْمِ عَدَاوَۃُ الصُّلَحَاءِ

## ಮುಹಮ್ಮದ್ ಹುಸೇನ್ ಬಟಾಲ್ವಿ ಅವರಿಗೆ "ಕರಾಮಾತುಸ್ಸಾದಿಖೀನ್"ನಿಂದ ನ್ಯೂನತೆಗಳನ್ನು ಹುಡುಕಿ ತೋರಿಸಿದರೆ ಪ್ರತಿ ನ್ಯೂನತೆಗೆ ಐದು ರೂಪಾಯಿಯ ಬಹುಮಾನ.

ಹಿಂದಿನ ಎರಡು ಸಂಚಿಕೆಗಳಲ್ಲಿ ನಾವು “ಕರಾಮತುಸ್ಸಾದಿಖೀನ್” ಗ್ರಂಥದ ಬಗ್ಗೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ವೈಭವಪೂರ್ಣ ಪಂಥಾಹ್ವಾನಗಳ ಕುರಿತು ವಿವರಿಸಿದೆವು. ಆ ಗ್ರಂಥದ ಪ್ರತಿರೂಪ ತರಲು ಅವರು ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಅವರಿಗೆ ಒಂದು ಸಾವಿರ ರೂಪಾಯಿಗಳ ಬಹುಮಾನವನ್ನು ನಿಗದಿಪಡಿಸಿದ್ದರು. ಆದರೆ ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಜನರಲ್ಲಿ ಪ್ರಚಾರಗೊಳಿಸುತ್ತಿದ್ದರು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಖುರ್‌ಆನ್ ಮತ್ತು ಅರಬಿ ಜ್ಞಾನದಲ್ಲಿ ಅಜ್ಞಾನಿಗಳಾಗಿದ್ದಾರೆ ಮತ್ತು ಅವರು ಸುಳ್ಳುಗಾರರು ಹಾಗೂ ಮಿಥ್ಯವಾದಿಗಳಾಗಿದ್ದಾರೆ ಎಂದು. ಅದೇ ಕಾರಣಕ್ಕೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಅವರಿಗೆ ಪವಿತ್ರ ಖುರ್‌ಆನ್‌ನ ತಫ್ಸೀರ್ ಬರೆಯಲು ಆಹ್ವಾನಿಸಿದರು. ಅದರಿಂದ ಅವರ ಸುಳ್ಳಿನಿಂದಾಗಿ ತನ್ನ ಮೇಲೆ ಅನುಮಾನ ಪಡುವ ಜನರಿಗೆ ವಾಸ್ತವ ತಿಳಿಯುವಂತಾಗಲಿ ಎಂದು. ಮತ್ತು ಅಲ್ಲಾಹನು ಯಾರಿಗೆ ಖುರ್‌ಆನ್‌ನ ಜ್ಞಾನ ನೀಡಿರುವನು ಮತ್ತು ಯಾರು ಖುರ್‌ಆನ್‌ನ ಜ್ಞಾನದಿಂದ (ಅರಬಿಯಿಂದ) ಆಜ್ಞಾನಿಯಾಗಿದ್ದಾರೆಂದು ತಿಳಿಯಲು.

ಮೊದಲು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಪವಿತ್ರ ಖುರ್‌ಆನ್ ಯಾವುದೇ ಸೂರದ ತಫ್ಸೀರ್ ಮತ್ತು ಹಝ್ರತ್ ರಸೂಲುಲ್ಲಾಹ್(ಸ) ರವರ ಗುಣಗಾನದಲ್ಲಿ ಒಂದು ನೂರು ಸಾಲುಗಳ ಕವನ ಸಾಹಿತ್ಯಕ ಅರಬಿಯಲ್ಲಿ ಬರೆಯಲು ಆಹ್ವಾನ ನೀಡಿದರು. ಹಾಗೂ ಯಾರು ಸ್ಪರ್ಧೆಯಿಂದ ಪಳಾಯನ ಮಾಡುವನೋ ಅವನ ಮೇಲೆ ಅಲ್ಲಾಹನ ಶಾಪವಿರಲಿ ಎಂದು. ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಸ್ಪರ್ಧೆ ಸ್ವೀಕರಿಸಲು ಮೈದಾನಕ್ಕೆ ಬರದೆ ಶಾಪಗಳನ್ನು(ಲಅನತ್) ಸ್ವೀಕರಿಸಿಕೊಂಡರು. ಮೌಲ್ವಿ ಮುಹಮ್ಮದ್ ಹುಸೇನ್ ಸ್ಪರ್ಧೆಯಿಂದ ಪಲಾಯನ ಮಾಡಲು ಈ ನೆವನಗಳನ್ನು ಮುಂದಿಟ್ಟರು.

“ಮೊದಲು ನಾವು ನಿಮ್ಮ ಅರಬಿ ಲೇಖನಗಳನ್ನು ಪರೀಕ್ಷಿಸುವ ದೃಷ್ಟಿಯಿಂದ ನೋಡುವೆವು. ಅವು ತಪ್ಪು ಒಪ್ಪುಗಳಿಂದ ಮುಕ್ತವಾಗಿದೆಯೋ ಅಥವಾ ಇಲ್ಲವೋ, ಅದರಲ್ಲಿ ಯಾವುದೇ ವ್ಯಾಕರಣದ ತಪ್ಪುಗಳು ಇವೆಯೋ ಇಲ್ಲವೋ, ತಪ್ಪುಗಳಿಲ್ಲ ಎಂದಾದರೆ ಅದರ ಎದುರಾಗಿ ತಫ್ಸೀರ್ ಮತ್ತು ನೂರು ಸಾಲುಗಳ ಖಸೀದ ಬರೆಯಲು ಯಾವುದೇ ನೆಪ ಇರಲಿಕ್ಕಿಲ್ಲ.” (ಕರಾಮತ್ತುಸ್ಸಾದಿಖೀನ್ ರೂಹಾನಿ ಖಝಾಇನ್, ಸಂಪುಟ–7, ಪುಟ–46).

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ)ರವರು, ಮೌಲ್ವಿ ಮುಹಮ್ಮದ್ ಹುಸೇನ್ ಅವರ ಪಲಾಯನ ಮಾಡುವ ಪರಿ ನೋಡಿ ಬರೆದರು.

“ವಿವೇಕಯುಳ್ಳವರು ಸರಿಯಾಗಿ ತಿಳಿದುಕೊಂಡಿದ್ದಾರೆ. ಬಟೌಲ್ವಿ ಸಾಹಿಬ್ ತಮ್ಮ ರಕ್ಷಣೆಗೋಸ್ಕರ ಈ ನೆಪವನ್ನು ಹುಡುಕಿಕೊಂಡಿದ್ದಾರೆ. ಏಕೆಂದರೆ ಅವರಿಗೆ ಚೆನ್ನಾಗಿ ಗೊತ್ತು. ಅರಬಿಯಲ್ಲಿ ಅಥವಾ ಫಾರ್ಸಿಯಲ್ಲಿ ಸುಧೀರ್ಘ ರಚನೆಯೊಂದು ಯಾವುದೇ ತಪ್ಪಿನಿಂದ ಮುಕ್ತವಾಗಿರುವುದಿಲ್ಲ. ನೆಪ ಒಡ್ಡುವವರಿಗೆ ಯಾವುದಾದರೊಂದು ಪದ ಅದು ಮುದ್ರಣದಲ್ಲೇ ಆಗಿರಲಿ ಸಿಕ್ಕಿದರೆ ಅದೇ ಅವರಿಗೆ ವಾದಿಸಲು ಒಂದು ಆಶ್ರಯ ಒದಗಿದಂತಾಗುತ್ತದೆ. ಅವರು ಬಹಳಷ್ಟು ಕಸರತ್ತು ಮಾಡಿ “ಮರಣ ಹೊಂದುವವನು ಏನು ಮಾಡಲು ಸಾಧ್ಯವಿಲ್ಲವೆಂಬಂತೆ ಕಾರ್ಯರೂಪದಲ್ಲಿ ಈ ನಾಚಿಕೆಗೇಡಿನ ನೆಪ ಮುಂದಿಟ್ಟರು ಮತ್ತು ತಮ್ಮ ಮನಸ್ಸನ್ನು ಕುತಂತ್ರಗಳಿಂದ ಸಂತೋಷಪಡಿಸಿಕೊಂಡರು. ಒಂದೇ ಒಂದು ತಪ್ಪು ಅದು ಮುದ್ರಣದಿಂದಾದರೂ ಆಕಸ್ಮತ್ತಾಗಿ ಸಿಕ್ಕಿಬಿದ್ದರೆ ಅದೇ ವಾದಿಸಲು ಎಡೆಮಾಡಿ ಕೊಡಬಹುದು ಎಂದು ಎಣಿಸಿಕೊಂಡರು. ಈಗ ನಿಮ್ಮ ನಿಮ್ಮ ಯಾವುದೇ ಗ್ರಂಥದಿಂದ ಒಂದು ತಪ್ಪು ಸಿಕ್ಕಿದರೆ ನನಗೆ ಚರ್ಚೆ ಅವಶ್ಯಕತೆ ಇರುವುದಿಲ್ಲ. (ಅದೇ ಪುಟ–47).

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ತುಂಬ ಒಳ್ಳೆಯ ರೀತಿಯಲ್ಲಿ ನ್ಯಾಯ ಪೂರ್ತಿಕರಣದ ಉದ್ದೇಶದಿಂದ ಈ ಗ್ರಂಥವನ್ನು ಬರೆದರು. ಅದರಲ್ಲಿ ಸಾಹಿತ್ಯಾತ್ಮಕ ಅರಬಿಯಲ್ಲಿ ಮತ್ತು ಸೂರ ಫಾತಿಹದ ತಫ್ಸೀರ್ ಬರೆದರು. ನಾಲ್ಕು ಖಸೀದಗಳು ಹಝ್ರತ್ ರಸೂಲುಲ್ಲಳಾಹ್(ಸ) ರವರ ಗುಣಗಾನದಲ್ಲಿ ಬರೆದರು. ಮತ್ತು ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಅವರಿಗೆ ಅವರ ಪ್ರತಿಯಾಗಿ ಬರೆಯಲು ಕರೆ ನೀಡಿದರು. ಸ್ಪರ್ಧೆಯಲ್ಲಿ ಮೇಲಗೈ ಸಾಧಿಸಿದರೆ ಅವರಿಗೆ ಒಂದು ಸಾವಿರ ರೂಪಾಯಿಗಳ ಬಹುಮಾನವನ್ನು ನಿಗದಿಪಡಿಸಿದರು. ಅದಾಗ್ಯೂ ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಸ್ಪರ್ಧೆಯಿಂದ ಪಲಾಯನ ಮಾಡುವ ದೃಷ್ಟಿಯಿಂದ ಈ ನೆಪ ಹುಡುಕಿದ್ದರು. ಮೊದಲು ನಾವು ನಿಮ್ಮ ಅರಬಿ ಗ್ರಂಥಗಳನ್ನು ಪರಿಕ್ಷೆಯ ದೃಷ್ಟಿಯಿಂದ ನೋಡುವೆವು. ಅವು ನ್ಯೂನತೆಗಳಿಂದ ಮುಕ್ತವಾಗಿವೆಯೇ ಇಲ್ಲವೋ ಎಂದು, ಅವು ತಪ್ಪುಗಳಿಂದ ಮುಕ್ತವಾಗಿದ್ದಲ್ಲಿ ಮಾತ್ರ ಸ್ಪರ್ಧೆಗೆ ಬರುವೆನು. ಇಲ್ಲವಾದರೆ ಇಲ್ಲ. ಆ ಕಾರಣ ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಅವಶ್ಯವೆಂದು ಭಾವಿಸಿದರು. ಅವರು ತಮ್ಮ ಡಂಭಾಚಾರದ ಗುರುವಿನ ಸ್ಥಾನ ತೋರ್ಪಡಿಸುತ್ತಿದ್ದಾರೆ. ಅದು ಸಹ ನಾಶವಾಗಬೇಕೆಂಬ ದೃಷ್ಟಿಯಿಂದ ಕರಾಮತುಸಾದಿಖೀನ್‌ನ ಪ್ರತಿರೂಪ ತರಲು ಒಂದು ಸಾವಿರ ರೂಪಾಯಿಗಳ ಬಹುಮಾನವನ್ನು ನಿಗದಿಪಡಿಸಿದರು. ಅಲ್ಲದೇ ಅವರು ಕರಾಮತುಸ್ಸಾದಿಖೀನ್‌ನಲ್ಲಿ ನ್ಯೂನತೆಗಳನ್ನು ಕಂಡು ಹಿಡಿದರೆ ಪ್ರತಿ ನ್ಯೂನತೆಗೆ ಐದು ರೂಪಾಯಿ ಕೊಡುವುದಾಗಿ ವಾಗ್ದಾನ ಮಾಡಿದರು.

ಅವರು ಬರೆದರು: “ಅಲ್ಲದೇ ಸ್ಪಷ್ಟಪಡಿಸುವುದೇನೆಂದರೆ ಸ್ಪರ್ಧೆಯ ನಂತರ ಬರೆಯಲಾದ ಖಸೀದಗಳು ಮತ್ತು ತಫ್ಸೀರ್ ಪ್ರಕಟಣೆ ಹೊರಡಿಸಿದಾಗ ಆ ಖಸೀದಗಳಲ್ಲಿ ಮತ್ತು ತಫ್ಸೀರ್‌ಗಳ ವ್ಯಾಕರಣದಲ್ಲಿ ಸಾಹಿತ್ಯ ಮಟ್ಟದಲ್ಲಿ ಏನೂ ನ್ಯೂನತೆ ಕಂಡುಬಾರದಿದ್ದಲ್ಲಿ, ನನ್ನ ಖಸೀದ ಮತ್ತು ತಫ್ಸೀರಿಗಿಂತ ಉತ್ತಮ ಎಂದಾದರೆ ತಮ್ಮ ಈ ಸಾಧನೆಯ ಮೇರೆಗೆ ನನ್ನ ಖಸೀದ ಮತ್ತು ತಫ್ಸೀರ್ ತಾಳೆ ಹಾಕಿ ನೋಡಿ. ಯಾವುದಾದರೂ ನ್ಯೂನತೆ ಕಂಡು ಹಿಡಿದರೆ ಪ್ರತಿಯೊಂದು ನ್ಯೂನತೆಗೆ ಐದು ರೂಪಾಯಿಗಳ ಬಹುಮಾನವು ನೀಡುವೆನು. ಆದರೆ ನೆನಪಿರಲಿ. ಟೀಕೆ ಮಾಡುವುದು ಬಹಳ ಸುಲಭವಾಗಿದೆ. ಅದು ಒಬ್ಬ ಅಜ್ಞಾನಿಯೂ ಮಾಡಬಹುದಾಗಿದೆ. ಆದರೆ ನ್ಯೂನತೆಗಳನ್ನು ಎತ್ತಿ ತೋರಿಸುವುದು ಕಷ್ಟ ಸಾಧ್ಯ.” (ಅದೇ ಪುಟ 49).

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಮುಹಮ್ಮದ್ ಹುಸೇನ್ ಬಟೌಲ್ವಿ ಅವರಿಗೆ ನ್ಯೂನತೆಗಳನ್ನು ತೆಗೆಯಲು ಅನುಮತಿ ನೀಡಿದರು ಅವರು ತಮ್ಮ ಸಮ್ಮುಖದಲ್ಲಿ ಕುಳಿತುಕೊಂಡು ತಫ್ಸೀರ್ ಬರೆದಾಗ ಮಾತ್ರ ಎಂದು ಶರತ್ತು ಹಾಕಿದ್ದರು. ಇಲ್ಲ ಪುಕ್ಕಟೆಯಾಗಿ ಬೇಕು ಬೇಡ ಎಂಬ ನೆಲೆಯಲ್ಲಿ ನ್ಯೂನತೆ ತೆಗೆಯಲು ಅಲ್ಲ. ಅಹಂಕಾರಿಯನ್ನು ಅಲ್ಲಾಹನು ಅವಮಾನಿಸುವನು. ಅದಾಗ್ಯೂ ಮುಹಮ್ಮದ್ ಹುಸೇನ್ ಬಟೌಲ್ವಿ ಅಲ್ಲಾಹನ ಓರ್ವ ಪ್ರವಾದಿಯ ಎದುರಿನಲ್ಲಿ ನಿಂತಿದ್ದರು. ಆದುದರಿಂದ ಅಲ್ಲಾಹನು ಅವರಿಂದ ಆಧ್ಯಾತ್ಮಿಕತೆ ಕಸಿದುಕೊಂಡಿದ್ದನು. ಮತ್ತು ಅವರು ಬುದ್ಧಿಶೂನ್ಯರಾಗಿದ್ದರು. ಅವರ ಜ್ಞಾನವು ಅಜ್ಞಾನದಲ್ಲಿ ಪರಿವರ್ತಿತಗೊಂಡಿತ್ತು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಇದೀಗ ಇದು ಸಹ ನೆನಪಿರಲಿ. ಶೇಖ್ ಬಟೌಲ್ವಿ ಅವರು ಈ ವಿನೀತನ ಕೆಲವು ಅರಬಿ ಬರಹಗಳಿಂದ ಎಷ್ಟೆಲ್ಲ ನ್ಯೂನತೆಗಳನ್ನು ಕಂಡು ಹಿಡಿದಿದ್ದಾರೆ. ಅದರಿಂದ ಏನಾದರೂ ಸಾಬೀತಾಗುವುದಿದ್ದರೆ ಸಾಬೀತಾಗುವುದು ಇಷ್ಟೇ. ಈಗ ಶೇಖ್‌ರ ಒಳಿತು ಮತ್ತು ನಾಚಿಕೆ ಎಷ್ಟೊಂದು ಹದಗೆಟ್ಟಿವೆ ಎಂದರೆ ಅವರ ದೃಷ್ಟಿಯಲ್ಲಿ ತಪ್ಪು ಮತ್ತು ಸಾಹಿತ್ಯ ಅವರ ದೃಷ್ಟಿಯಲ್ಲಿ ಅಸಾಹಿತ್ಯವಾಗಿದೆ. ಈ ಮೂಡನಾದ ಶೇಖ್ ಎಲ್ಲಿಯತನಕ ತನ್ನ ನೀಚತನ ತೋರಿಸುವನು ಎಂದು ಮತ್ತು ಏನೇನೆಲ್ಲ ಅವಮಾನಗಳು ಅವನ ನಸೀಬಿನಲ್ಲಿದೆ ಎಂದು ತಿಳಿಯದು. ಕೆಲವು ಅರಬಿ ವಿದ್ವಾಂಸರು ಸಾಹಿತಿಗಳು ಅವರ ಈ ಮಾತುಗಳನ್ನು ಕೇಳಿ ಮತ್ತು ಅವರ ಈ ರೀತಿಯ ಟೀಕಾ ಪ್ರಹಾರವನ್ನು ನೋಡಿ ಅವರ ಮೇಲೆ ನಗುವುದೋ ಅಳುವುದೋ ಎನ್ನುತ್ತಿದ್ದಾರೆ. ಏಕಾದರೂ ಈ ವ್ಯಕ್ತಿ ಅಷ್ಟೊಂದು ಕೀಳುಮಟ್ಟದ ಕೆಸರಿನಲ್ಲಿ ಇಳಿದಿದ್ದಾನೆ ತಿಳಿಯದು. (ಅದೇ ಪುಟ 63).

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಶೇಖ್ ಸಾಹಿಬರ “ಪಾಂಡಿತ್ಯ” ದ ಸ್ಥಿತಿ ವಿವರಿಸುತ್ತ ಹೇಳುತ್ತಾರೆ. ನಾನು ದರ್ಶಕರಿಗೆ ಈ ದೃಢಪಡಿಸ ಬಯಸುತ್ತೇನೆ. ಶೇಖ್ ಬಟೌಲ್ವಿ ಅವರು ಅರಬಿ ಜ್ಞಾನದಿಂದ ವಂಚಿತರಾಗಿದ್ದಾರೆ. ನ್ಯೂನತೆಗಳನ್ನು ಕಂಡು ಹಿಡಿಯುವುದು ಎಂದರೆ ಸಾಮಾನ್ಯವಾದ ಕೆಲಸವಲ್ಲ. ಅದು ಆಧುನಿಕ ದೃಷ್ಟಿಯುಳ್ಳವರ ಮತ್ತು ಪುರಾತನ ಅರಬಿ ಅನುಭವಸ್ತರ ಕಾರ್ಯವಾಗಿದೆ. ನುಡಿಗಟ್ಟುಗಳು, ಅದರ ಉಪಯೋಗ ಸಾಮರ್ಥ್ಯ ಅವರುಗಳು ಹೊಂದಿರಬೇಕಾಗಿರುತ್ತದೆ. ಸಾವಿರಾರು ಅರಬಿ ಪದ ಸಾಲುಗಳು ಅವರ ಮುಂದಿರಿಸಬೇಕಾಗುತ್ತದೆ. ಅನುಸರಣೆ ಮತ್ತು ಸೃಷ್ಟಿ ಸಾಮರ್ಥ್ಯ ಅವರಿಗೆ ಇರಬೇಕಾಗುತ್ತದೆ. ಆದರೆ ಈ ಬಡಪಾಯಿ ಶೇಖನಿಗೆ ಉರ್ದುವಿನಲ್ಲೆ ತಮ್ಮ ಕೂದಲುಗಳನ್ನು ಬಿಳಿ ಮಾಡಿಕೊಂಡಿದ್ದಾನೆ. ಅವರಿಗೆ ಸಾಹಿತ್ಯ ಮತ್ತು

*(ಪುಟ ಸಂಖೆ 14 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹಝ್ರತ್ ಉಸ್ಮಾನ್(ರ) ಹೇಳಿದರು: 'ಹಝ್ರತ್ ಪೈಗಂಬರರನ್ನು(ಸ) ಮಕ್ಕದ ಹೊರಗೆ ತಡೆದು ನಿಲ್ಲಿಸಿ ನಾನು ಹೇಗೆ ತವಾಫ್ ಮಾಡಲಿ!**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಧುನ್ನೂರೈನ್ ಹಝ್ರತ್ ಉಸ್ಮಾನ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಗತ್ಫಾನ್ ಯುದ್ಧ, ಉಹುದ್ ಯುದ್ಧ, ಬೈತೆ ರಿಝ್ವಾನ್ ಹಾಗೂ ಸುಲಹ್ ಹುದೈಬಿಯದ ಬಗ್ಗೆ ವಿವರಾತ್ಮಕವಾದ ಪ್ರಸ್ತಾವನೆ**

**ಈ ವಾರ್ತೆ ಸರಿಯೆಂದಾದರೆ, ಅಲ್ಲಾಹನಾಣೆ, ಉಸ್ಮಾನ್‌ರ ಕೊಲೆಯ ಪ್ರತಿಕಾರವನ್ನು ತೀರಿಸುವ ವರೆಗೆ ನಾವು ಇಲ್ಲಿಂದ ಸರಿಯುವುದಿಲ್ಲ. ಅನಂತರ ಹಝ್ರತ್ ಪೈಗಂಬರ್(ಸ) ಸಹಾಬರೊಡನೆ ಹೇಳಿದರು: ಬನ್ನಿರಿ ಮತ್ತು ನನ್ನ ಕೈಯ ಮೇಲೆ ಕೈಗಳನ್ನು ಇಟ್ಟುಕೊಂಡು ಹೀಗೆ ಪ್ರತಿಜ್ಞೆ ಮಾಡಿರಿ: ನಿಮ್ಮಲ್ಲಿ ಯಾರೂ ಹಿಮ್ಮೆಟ್ಟಲಾರೆವು ಮತ್ತು ಜೀವ ತ್ಯಾಗ ಮಾಡಲು ತಯಾರಾಗುವೆವು, ಆದರೆ ತನ್ನ ಜಾಗವನ್ನು ಬಿಟ್ಟುಹೋಗಲಾರೆವು.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **29-01-2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ ۔ اَلرَّحْمٰنِ الرَّحِيمِ ۔ مٰلِكِ يَوْمِ الدِّينِ ۔

إِيَّاكَ نَعْبُدُ وَإِيَّاكَ نَسْتَعِينُ ۔ اِهْدِنَا الصِّرَاطَ الْمُسْتَقِيمَ ۔

صِرَاطَ الَّذِينَ أَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّالِّينَ ۔

ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ಯುದ್ಧಗಳಲ್ಲಿ ಭಾಗವಹಿಸುವಿಕೆಯ ಬಗ್ಗೆ ಪ್ರಸ್ತಾಪಿಸುತ್ತೇನೆ. ಬದ್ರ್ ಯುದ್ಧದ ಬಗ್ಗೆ ನಾನು ಕಳೆದ ಬಾರಿ ಹೇಳಿದಂತೆ ಹಝ್ರತ್ ಉಸ್ಮಾನ್‌ರಿಗೆ(ರ) ಬದ್ರ್ ಯುದ್ಧದಲ್ಲಿ ಭಾಗವಹಿಸಲು ಸಾಧ್ಯವಾಗಿರಲಿಲ್ಲ. ಏಕೆಂದರೆ ಅವರು ಪತ್ನಿಯಾದ ಹಝ್ರತ್ ರುಖಿಯ(ರ) ತೀವ್ರವಾಗಿ ರೋಗಗ್ರಸ್ತರಾಗಿದ್ದರು. ಆದ್ದರಿಂದ ಅವರ ಶುಶ್ರೂಷೆಗಾಗಿ ಮದೀನದಲ್ಲೇ ಇರಲು ಹಝ್ರತ್ ಪೈಗಂಬರ್(ಸ) ನಿರ್ದೇಶಿಸಿದ್ದರು ಮತ್ತು ಅವರನ್ನು ಬದ್ರ್ ಯುದ್ಧದಲ್ಲಿ ಭಾಗಿಯನ್ನಾಗಿ ಗಣಿಸಲಾಗಿತ್ತು. ಆದ್ದರಿಂದಲೇ ಯುದ್ಧದಲ್ಲಿ ಭಾಗಿಯಾದವರಿಗೆ ಕೊಡುವ ರೀತಿಯಲ್ಲಿ ಯುದ್ಧ ಸಂಪತ್ತಿನಿಂದ ಮತ್ತು ಪ್ರತಿಫಲದಿಂದ ಒಂದು ಭಾಗವನ್ನು ಅವರಿಗಾಗಿ ಹಝ್ರತ್ ಪೈಗಂಬರ್(ಸ) ನಿಶ್ಚಯಿಸಿದ್ದರು. (ಶರಹ್ ಅಲ್‌ಅಲಾಮ ಝುರ್‌ಖಾನಿ ಅಲಲ್ ಮವಾಹಿಬ್ ಲಿದ್ದುನಿಯ, ಭಾಗ-2, ಪುಟ-334, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1996)

ಗ಼ತ್‌ಫಾನ್ ಯುದ್ಧ ಮುಹರ್ರಂ ಅಥವಾ ಸಫರ್ ಹಿಜರೀ 3ರಲ್ಲಿ ನಡೆದಿತ್ತು. ಗ಼ತ್‌ಫಾನ್‌ಗೆ ಹೋಗಲಿಕ್ಕಾಗಿ ನಜದ್ ಪ್ರದೇಶದ ಕಡೆಗೆ ಹೊರಡುವಾಗ ಹಝ್ರತ್ ಪೈಗಂಬರ್(ಸ) ಹಝ್ರತ್ ಉಸ್ಮಾನ್‌ರನ್ನು(ರ) ಮದೀನದ ಅಮೀರರನ್ನಾಗಿ ನಿಶ್ಚಯಿಸಿದ್ದರು. ಈ ರೀತಿಯಲ್ಲಿ ಇದರಲ್ಲಿಯೂ ಅವರು ಭಾಗವಹಿಸಿರಲಿಲ್ಲ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-3, ಪುಟ-41, ದಾರುಲ್ ಕುತುಬ್ ಬೈರೂತ್ 1990)

ಈ ಯುದ್ಧದ ವಿಶದ ವಿವರಣೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಹೀಗೆ ಹೇಳಿದ್ದಾರೆ:

"ಬನೂ ಗ಼ತ್‌ಫಾನನ ಕೆಲವು ಗೋತ್ರಗಳು ಎಂದರೆ, ಬನೂ ಸಅ್‌ಲಬ ಮತ್ತು ಬನೂ ಮಹಾರಿಬ್‌ರ ಜನರು ತಮ್ಮ ಒಬ್ಬ ಪ್ರಮುಖ ಯೋಧನಾದ ಅಸೂರ್ ಬಿನ್ ಹಾರಿಸ್‌ನ ಪ್ರೇರಣೆಯ ಕಾರಣದಿಂದ ಮದೀನದ ಮೇಲೆ ಪುನಃ ಅಚಾನಕ್ಕಾಗಿ ಆಕ್ರಮಣ ನಡೆಸುವ ಉದ್ದೇಶದಿಂದ ನಜದಿನ ಒಂದು ಪ್ರದೇಶವಾದ ಧೀಅಮ್ರ್‌ನಲ್ಲಿ ಒಟ್ಟುಗೂಡಲು ಶುರುಮಾಡಿದರು. ಆದರೆ ಹಝ್ರತ್ ಪೈಗಂಬರ್(ಸ) ತಮ್ಮ ಶತ್ರುಗಳ ಚಟುವಟಿಕೆಗಳ ಕುರಿತು ಸರಿಯಾಗಿ ಎಚ್ಚರ ವಿಡುತ್ತಿದ್ದರು. ಹಝ್ರತ್ ಪೈಗಂಬರರಿಗೆ(ಸ) ಅವರ ಈ ಘೋರ ಉದ್ದೇಶದ ಬಗ್ಗೆ ತಕ್ಕ ಸಮಯದಲ್ಲೇ ಗೊತ್ತಾಯಿತು. ಒಬ್ಬ ಬುದ್ಧಿವಂತ ಸೇನಾಧಿಪತಿಯ ಹಾಗೆ ಮುನ್ನೆಚ್ಚರಿಕಾ ಕ್ರಮವೆಂಬಂತೆ ಹಝ್ರತ್ ಪೈಗಂಬರ್(ಸ) ನಾನ್ನೂರು ಸಹಾಬಿಯರ ಒಂದು ಸಂಘವನ್ನು ತನ್ನೊಂದಿಗೆ ಸೇರಿಸಿ ಹಿಜರೀ 3ರಲ್ಲಿ ಮುಹರ್ರಮ್‌ನ ಕೊನೆಯ ಅಥವಾ ಸಫರ್ ತಿಂಗಳ ಆರಂಭದಲ್ಲಿ ಮದೀನದಿಂದ ತೆರಳಿದರು ಮತ್ತು ತ್ವರಿತವಾಗಿ ಮುನ್ನಡೆಯುತ್ತಾ ಧೀಅಮ್ರ್‌ನಲ್ಲಿ ತಲುಪಿದರು. ಶತ್ರುಗಳಿಗೆ ಹಝ್ರತ್ ಪೈಗಂಬರರ(ಸ) ಆಗಮನದ ಬಗ್ಗೆ ಗೊತ್ತಾದಾಗ ಅವರು ಬೇಗನೇ ಸಮೀಪದ ಪರ್ವತಗಳನ್ನೇರಿ ಅಡಗಿಕೊಂಡರು. ಮುಸ್ಲಿಮರು ಧೀಅಮ್ರ್‌ಗೆ ತಲುಪಿದಾಗ ಮೈದಾನ ಖಾಲಿಯಾಗಿತ್ತು. ಆದರೆ ಬನೂ ಸಅ್‌ಲಬದ ಜಬ್ಬಾರ್ ಎಂಬ ಹೆಸರಿನ ಒಬ್ಬ ಗ್ರಾಮವಾಸಿಯನ್ನು ಸಹಾಬರು ಸೆರೆಹಿಡಿದುಕೊಂಡು ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾದರು. ಹಝ್ರತ್ ಪೈಗಂಬರ್(ಸ) ಅವನಿಂದ ಸ್ಥಿತಿಗತಿಗಳ ಬಗ್ಗೆ ಅನ್ವೇಷಿಸಿದಾಗ, ಬನೂ ಸಅ್‌ಲಬ ಮತ್ತು ಬನೂ ಮುಹಾರಿಬದ ಎಲ್ಲ ಜನರು ಪರ್ವತಗಳಲ್ಲಿ ಅಡಗಿಕೊಂಡಿರುವರು ಮತ್ತು ತೆರೆದ ಮೈದಾನದಲ್ಲಿ ಮುಸ್ಲಿಮರ ಮುಂದೆ ಬರಲಿಕ್ಕಿಲ್ಲವೆಂದು ಎಂದು ಗೊತ್ತಾಯಿತು. ಹೀಗೆ ಸೈನ್ಯದೊಡನೆ ಮರಳಿಬರಲು ಹಝ್ರತ್ ಪೈಗಂಬರ್(ಸ) ಆದೇಶಿಸಿದರು. ಆದರೆ ಈ ಯುದ್ಧದಿಂದ ಆದ ಪ್ರಯೋಜನವೇನೆಂದರೆ, ಬನೂ ಗ಼ತ್‌ಫಾನಿನ ಕಡೆಯಿಂದ ಉಂಟಾದ ಅಪಾಯ ತಾತ್ಕಾಲಿಕವಾಗಿ ದೂರವಾಯಿತು. (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-463)

ಉಹದ್ ಯುದ್ಧ ಶವ್ವಾಲ್ ಹಿಜರೀ 3ರಲ್ಲಿ ನಡೆದಿತ್ತು. ಹಝ್ರತ್ ಉಸ್ಮಾನ್(ರ) ಉಹದ್ ಯುದ್ಧದಲ್ಲಿ ಭಾಗವಹಿಸಿದ್ದರು. ಯುದ್ಧದ ವೇಳೆ ಅಚಾನಕ್ಕಾದ ಆಕ್ರಮಣ ಮತ್ತು ಹಝ್ರತ್ ಪೈಗಂಬರ್(ಸ) ಶಹೀದ್ ಆದರು ಎಂಬ ವದಂತಿಯನ್ನು ಕೇಳಿಕೊಂಡು ಸಹಾಬಿಯರಲ್ಲಿ ಕೆಲವರು ಮೈದಾನದಿಂದ ಆಚೆ ಈಚೆಯಾದರು. ಈ ಯುದ್ಧದ ಒಂದು ಸಂದರ್ಭದಲ್ಲಿ ಹಝ್ರತ್ ಪೈಗಂಬರರೊಂದಿಗೆ(ಸ) ಕೇವಲ 12 ಸಹಾಬರ ಒಂದು ಸಣ್ಣ ಸಂಘ ಬಾಕಿಯಾಗಿ ಉಳಿದಿತ್ತು. ಚದುರಿಹೋದ ಸಹಾಬಿಯರಲ್ಲಿ ಹಝ್ರತ್ ಉಸ್ಮಾನ್(ರ) ಸಹ ಇದ್ದರು. (ಶರಹ್ ಅಲ್‌ಅಲಾಮ ಝುರ್‌ಖಾನಿ ಅಲಲ್ ಮವಾಹಿಬುದ್ದುನಿಯಾ, ಭಾಗ-2, ಪುಟ-418-419, ದಆರುಲ್ ಕುತುಬ್ ಇಲ್‌ಮಿಯ ಬೈರೂತ್ 1996)

ತಮ್ಮ ಸ್ಥಳವನ್ನು ಬಿಟ್ಟುಹೋಗದಿರಲು 50 ಬಿಲ್ಲುಗಾರರೊಡನೆ ಹಝ್ರತ್ ಪೈಗಂಬರ್(ಸ) ನಿರ್ದೇಶಿಸಿದ್ದರು. ಆದರೆ ಮುಸ್ಲಿಮರು ಖುರೈಶಿಗಳ ಮೇಲೆ ವಿಜಯ ಸಾಧಿಸಿದಾಗ ಮತ್ತು ಅವರು ಯುದ್ಧ ಸಂಪತ್ತನ್ನು ಒಟ್ಟುಗೂಡಿಸಲು ತೊಡಗಿದಾಗ, ಈ ವಾರ್ತೆಯನ್ನು ಅರಿತ ಈ 50 ಬಿಲ್ಲುಗಾರರ ಸಂಘ ತಮ್ಮ ಸ್ಥಳವನ್ನು ಬಿಟ್ಟರು. ಸತ್ಯದಲ್ಲಿ ಹಝ್ರತ್ ಪೈಗಂಬರ್(ಸ) ಅವರೊಡನೆ ಸ್ಥಳವನ್ನು ಬಿಡದಿರಲು ಶಕ್ತವಾಗಿ ತಾಕೀತು ಮಾಡಿದ್ದರು. ಆ ಕಾಲದಲ್ಲಿ ಮುಸ್ಲಿಮಾಗಿರದ ಖ಼ಾಲಿದ್ ಬಿನ್ ವಲೀದ್ ಈ ದೃಶ್ಯವನ್ನು ಕಂಡು ಅಲ್ಲಿಂದ ಹಲ್ಲೆ ನಡೆಸಿದರು. ಈ ಹಲ್ಲೆ ಅಪ್ರತೀಕ್ಷಿತ, ಶಕ್ತ ಮತ್ತು ಅಚಾನಕ್ಕಾದ ಕಾರಣದಿಂದ ಮುಸ್ಲಿಮರು ಚದುರಿ ಹೋದರು. ಈ ಚದುರಿದ ಹೋದ ಸಹಾಬಿಯರಲ್ಲಿ ಹಝ್ರತ್ ಉಸ್ಮಾನ್‌ರ ಹೆಸರು ಸಹ ಹೇಳಲಾಗುತ್ತದೆ.

ಆ ಸಮಯದ ವಿಶೇಷವಾದ ಸ್ಥಿತಿ ಮತ್ತು ಆ ಜನರ ಹೃದಯದ ವಿಶ್ವಾಸ ಹಾಗೂ ನಿಷ್ಠೆಯನ್ನು ದೃಷ್ಟಿಯಲ್ಲಿರುಸುತ್ತಾ ಅಲ್ಲಾಹನು ಅವರನ್ನು ಕ್ಷಮಿಸಿದನು ಎಂದು ಆ ಜನರಿಗೆ ಸಂಬಂಧಿಸಿ ಪವಿತ್ರ ಖುರ್‌ಆನಿನಲ್ಲಿ ಬರುತ್ತದೆ: **ಇನ್ನಲ್ಲಝೀನ ತವಲ್ಲೌ ಮಿನ್‌ಕುಮ್ ಯೌಮಲ್‌ತಖಲ್ ಜಮ್‌ಆನಿ ಇನ್ನಮಸ್ತಝಲ್ಲಹುಮುಶ್ಶೈತಾನು ಬಿಬಅಝಿ ಮಾ ಕಸಬೂ ವಲಖದ್ ಅಫಾಅಲ್ಲಾಹು ಅನ್ಹುಮ್ ಇನ್ನಲ್ಲಾಹ ಗಫೂರುರ್ರಹೀಮ್**. (ಆಲಿ ಇಮ್ರಾನ್:156)

ಆ ಎರಡು ಸೈನ್ಯಗಳು ಮುಖಾಮುಖಿ ನಿಂತ ದಿನದಂದು ನಿಮ್ಮ ಪೈಕಿ ಹಿಮ್ಮೆಟ್ಟಿದವರನ್ನು ಅವರು ಮಾಡಿದ ಕೆಲವು ಕೃತ್ಯಗಳ ನಿಮಿತ್ತದಿಂದ ಶೈತಾನನು ವಿಮುಖರಾಗುವಂತೆ ಮಾಡಿದ್ದನು. ಅಲ್ಲಾಹನು ನಿಶ್ಚಯವಾಗಿಯೂ ಅವರಿಗೆ ಕ್ಷಮೆ ನೀಡಿದ್ದಾನೆ. ಅಲ್ಲಾಹನು ಕ್ಷಮೆದೋರುವವನೂ ಸಹನಶೀಲನೂ ಆಗಿದ್ದಾನೆ. (3:156)

ಈ ಯುದ್ಧದ ಸಮಯದಲ್ಲಿ ಮುಸ್ಲಿಮರ ಅವಸ್ಥೆಯನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸೀರತ್ ಖ಼ಾತಮುನ್ನಬಿಯ್ಯೀನನಲ್ಲಿ ಬರೆಯುತ್ತಾರೆ:

ಖುರೈಶಿಗಳ ಸೈನ್ಯ ನಾಲ್ಕು ಕಡೆಯಿಂದ ಸುತ್ತುವರೆದಿತ್ತು. ಒಂದರ ನಂತರ ಇನ್ನೊಂದು ಎಂಬಂತೆ ಆಕ್ರಮಣ ನಡೆಸುತ್ತಾ ಪ್ರತಿ ಕ್ಷಣ ಮುಸ್ಲಿಮರನ್ನು ಒತ್ತಡದಲ್ಲಿ ಹಾಕುತ್ತಾ ಹೋಗುತ್ತಿತ್ತು. ಹೀಗಿದ್ದರೂ ಮುಸ್ಲಿಮರು ಬಹುಶಃ ಸ್ವಲ್ಪ ಸಮಯದಲ್ಲಿ ಚೇತರಗೊಳ್ಳುತ್ತಿದ್ದರು. ಆದರೆ ಭಯಾನಕವಾದ ಇನ್ನೊಂದು ಸಂಗತಿ ಏನಾಯಿತು ಎಂದರೆ  ಖುರೈಶಿಯರ ಒಬ್ಬ ಬಲಾಢ್ಯ ಸೈನಿಕನಾದ ಅಬ್ದುಲ್ಲಾಹ್ ಬಿನ್ ಖುಮಿಅ ಎಂಬವನು ಮುಸ್ಲಿಮರ ಧ್ವಜವಾಹಕನಾದ ಮುಸ್‌ಅಬ್ ಬಿನ್ ಉಮೈರರ ಮೇಲೆ ಹಲ್ಲೆ ನಡೆಸಿ ತನ್ನ ಖಡ್ಗದಿಂದ ಅವರ ಬಲಗೈಯನ್ನು ತುಂಡರಿಸಿದನು. ಮುಸ್‌ಅಬ್ ಬೇಗನೇ ಎಡಗೈಯಲ್ಲಿ ಧ್ವಜವನ್ನು ಹಿಡಿದರು ಮತ್ತು ಇಬ್ನು ಖಮಿಅರನ್ನು ಎದುರಿಸಲು ಮುಂದಕ್ಕೆ ಧಾವಿಸಿದರು. ಆದರೆ ಅವನು ಖಡ್ಗದಿಂದ ಪುನಃ ಹಲ್ಲೆ ಮಾಡಿ ಅವರ ಎಡಗೈಯನ್ನು ಸಹ ಕತ್ತರಿಸಿದನು. ಆಗ ಮುಸ್‌ಅಬ್ ತನ್ನ ತುಂಡಾದ ಎರಡು ಮೊಣಕೈಯನ್ನು ಜೋಡಿಸಿಟ್ಟು ಬೀಳುತ್ತಿರುವ ಇಸ್ಲಾಮಿಕ ಬಾವುಟವನ್ನು ನೇರವಾಗಿ ಇರಿಸಲು ಪ್ರಯತ್ನಿಸಿದರು ಮತ್ತು ಅದನ್ನು ಎದೆಯೊಂದಿಗೆ ಸೇರಿಸಿದರು. ಆಗ ಇಬ್ನು ಖುಮಿಅ ಅವರ ಮೇಲೆ ಮೂರನೇ ಬಾರಿ ಖಡ್ಗವನ್ನು ಚಲಾಯಿಸಿದನು. ಹೀಗೆ ಮುಸ್‌ಅಬ್ ಶಹೀದ್ ಆಗಿ ಕೆಳಗೆ ಬಿದ್ದರು. ಧ್ವಜವನ್ನು ಬೇಗನೇ ಬೇರೊಬ್ಬ ಮುಸ್ಲಿಮನು ಹಿಡಿದನು. ಮುಸ್‌ಅಬ್‌ನ ದೇಹಪ್ರಕೃತ ಪೈಗಂಬರರೊಂದಿಗೆ(ಸ) ಸಾಮ್ಯತೆ ಹೊಂದಿತ್ತು. ಹಝ್ರತ್ ಪೈಗಂಬರರನ್ನು(ಸ) ಶಹೀದ್ ಮಾಡಿದ್ದಾಗಿ ಮುಸ್‌ಅಬ್ ಭಾವಿಸಿದನು ಅಥವಾ ಮೋಸಮಾಡುವ ಉದ್ದೇಶದಿಂದ ಹೀಗೆ ವದಂತಿ ಹಬ್ಬಿಸಿರಲೂ ಬಹುದು. ಹೇಗಿದ್ದರೂ ಮುಸ್‌ಅಬ್ ಶಹೀದ್ ಆಗಿ ಬಿದ್ದಾಗ, “ನಾನು ಮುಹಮ್ಮದನ್ನು (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಕೊಂದಿದ್ದೇನೆ ಎಂದು ಬೊಬ್ಬೆ ಹಾಕಿದನು. ಈ ವಾರ್ತೆಯಿಂದ ಮುಸ್ಲಿಮರ ಅಲ್ಪ ಸ್ವಲ್ಪ ಧೈರ್ಯವೂ ಕುಂದಿ ಹೋಯಿತು. ಮುಸ್ಲಿಮರ ಸಂಘ ಸಂಪೂರ್ಣವಾಗಿ ಚದುರಿಹೋಯಿತು. ಹಲವಾರು ಸಹಾಬಿಯರು ಗಾಬರಿಗೊಂಡು ಮೈದಾನದಿಂದ ಓಡಿಹೋದರು. ಆ ಸಮಯದಲ್ಲಿ ಮುಸ್ಲಿಮರು ಮೂರು ಭಾಗಗಳಾಗಿ ವಿಭಜಿಸಲ್ಪಟ್ಟಿದ್ದರು. ಅವುಗಳಲ್ಲಿ ಒಂದು ವಿಭಾಗ ಹಝ್ರತ್ ಪೈಗಂಬರರ(ಸ) ಶಹಾದತಿನ ವಾರ್ತೆ ಕೇಳಿ ಚದುರಿಹೋಗಿತ್ತು. ಆದರೆ ಈ ವಿಭಾಗದವರು ಬಹಳ ಕಡಿಮೆಯಾಗಿದ್ದರು. ನಿರಾಶೆರಾಗಿ ಚದುರಿಹೋಗಿದ್ದರು ಎಂದು ಹೇಳಬಹುದು. ಆ ಜನರಲ್ಲಿ ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್ ಸಹ ಇದ್ದರು. ಆದರೆ ಆ ಸಮಯದ ವಿಶೇಷವಾದ ಸ್ಥಿತಿ ಮತ್ತು ಆ ಜನರ ಹೃದಯದ ವಿಶ್ವಾಸ ಹಾಗೂ ನಿಷ್ಠೆಯನ್ನು ದೃಷ್ಟಿಯಲ್ಲಿರುಸುತ್ತಾ ಅಲ್ಲಾಹನು ಅವರನ್ನು ಕ್ಷಮಿಸಿದನು ಎಂದು ಆ ಜನರಿಗೆ ಸಂಬಂಧಿಸಿ ಪವಿತ್ರ ಖುರ್‌ಆನಿನಲ್ಲಿ ಪ್ರಸ್ತಾಪಿಸಲಾಗಿದೆ. ಇವರಲ್ಲಿ ಕೆಲವರು ಹೋಗಿ ಮದೀನಕ್ಕೆ ತಲುಪಿದರು. ಈ ರೀತಿಯಲ್ಲಿ ಮದೀನದಲ್ಲೂ ಹಝ್ರತ್ ಪೈಗಂಬರ್(ಸ) ಶಹೀದ್ ಆದರು ಮತ್ತು ಮುಸ್ಲಿಮರ ಸೈನ್ಯ ಪರಾಜಯಗೊಂಡಿದೆ ಎಂಬ ವದಂತಿ ತಲುಪಿತು. ಇದರಿಂದ ಸಂಪೂರ್ಣ ಪಟ್ಟಣದಲ್ಲಿ ಒಂದು ದುಃಖದ ಸ್ಥಿತಿಯುಂಟಾಯಿತು. ಮುಸ್ಲಿಮರಾದ ಪುರುಷರು, ಸ್ತ್ರೀಯರು, ಮಕ್ಕಳು, ವೃದ್ಧರು ಅತ್ಯಂತ ಗಾಬರಿಯಸ್ಥಿತಿಯಲ್ಲಿ ಪಟ್ಟಣದಿಂದ ಹೊರಟು ಉಹದಿನ ದಿಕ್ಕಿಗೆ ರವಾನೆಯಾದರು. ಕೆಲವರು ಬೇಗನೇ ಓಡುತ್ತಾ ರಣರಂಗಕ್ಕೆ ತಲುಪಿದರು. ಅಲ್ಲಾಹನ ಹೆಸರು ಉಚ್ಚರಿಸುತ್ತಾ ಶತ್ರುಗಳ ಪಂಕ್ತಿಗಳಲ್ಲಿ ನುಗ್ಗಿದರು. ಎರಡನೇ ವಿಭಾಗದಲ್ಲಿ ಇದ್ದವರು ಚದುರಿಹೋಗಿರಲಿಲ್ಲ. ಆದರೆ ಹಝ್ರತ್ ಪೈಗಂಬರರ(ಸ) ಶಹಾದತಿನ ವಾರ್ತೆಯನ್ನು ಕೇಳಿ ಧೈರ್ಯಗುಂದಿದ್ದರು ಅಥವಾ ಈ ಸ್ಥಿತಿಯಲ್ಲಿ ಹೋರಾಡುವುದನ್ನು ವ್ಯರ್ಥವೆಂದು ಭಾವಿಸುತ್ತಿದ್ದರು. ಆದ್ದರಿಂದ ಯುದ್ಧ ಮೈದಾನದ ಒಂದು ಬದಿಗೆ ಸರಿಯುತ್ತಾ ತಲೆತಗ್ಗಿಸಿ ಕುಳಿತುಕೊಂಡಿದ್ದರು. ಮೂರನೇ ವಿಭಾಗದವರು ಹೋರಾಟವನ್ನು ಜಾರಿಯಲ್ಲಿರಿಸಿದ್ದರು. ಅವರಲ್ಲಿ ಕೆಲವರು ಹಝ್ರತ್ ಪೈಗಂಬರರ(ಸ) ಸುತ್ತಮುತ್ತ ಇದ್ದರು ಮತ್ತು ಅತುಲ್ಯವಾದ ತ್ಯಾಗದ ಕೌಶಲವನ್ನು ಪ್ರಕಟಿಸುತ್ತಿದ್ದರು ಹಾಗೂ ಈ ವಿಭಾಗದ ಹೆಚ್ಚಿನವರು ರಣರಂಗದಲ್ಲಿ ಬೇರೆಬೇರೆಯಾಗಿ ಹೋರಾಡುತ್ತಿದ್ದರು. ಹಝ್ರತ್ ಪೈಗಂಬರ್(ಸ) ಜೀವಂತವಾಗಿದ್ದಾರೆ ಎಂಬ ವಾರ್ತೆ ಈ ಜನರಿಗೆ ಮತ್ತು ಎರಡನೇ ಸಂಘದವರಿಗೆ ಲಭಿಸಿದಾಗ, ಈ ಜನರು ಆವೇಶಭರಿತರಾಗಿ ಹೋರಾಡುತ್ತಾ ಹಝ್ರತ್ ಪೈಗಂಬರರ(ಸ) ಸುತ್ತಮುತ್ತ ಬಂದು ಸೇರಿದರು. ಆ ಸಮಯದಲ್ಲಿ ಯುದ್ಧದ ಸ್ಥಿತಿ ಹೇಗಿತ್ತೆಂದರೆ, ಖುರೈಶಿಗಳ ಸೈನ್ಯ ಸಮುದ್ರದ ಭಯಾನಕ ಅಲೆಗಳ ಹಾಗೆ ನಾಲ್ಕೂ ಕಡೆಯಿಂದ ಮುಂದಕ್ಕೆ ಧಾವಿಸುತ್ತಿತ್ತು. ರಣರಂಗದಲ್ಲಿ ಎಲ್ಲ ಕಡೆಯಿಂದ ಬಾಣಗಳ ಮತ್ತು ಕಲ್ಲುಗಳ ಮಳೆ ಸುರಿಯುತ್ತಿತ್ತು. ತ್ಯಾಗಶಾಲಿಗಳು ಈ ಅಪಾಯದ ಸ್ಥಿತಿಯನ್ನು ಕಂಡು ಹಝ್ರತ್ ಪೈಗಂಬರರ(ಸ) ಸುತ್ತಮುತ್ತ ನಿಂತುಕೊಂಡು ಹಝ್ರತ್ ಪೈಗಂಬರರ(ಸ) ಶರೀರವನ್ನು ತಮ್ಮ ದೇಹಗಳಿಂದ ಸಂರಕ್ಷಿಸುತ್ತಿದ್ದರು. ಆದರೂ ಹಲ್ಲೆ ತೀವ್ರಗೊಳ್ಳುವಾಗ, ಬೆರಳೆಣಿಕೆಯಷ್ಟು ಮಾತ್ರ ಇರುವ ಈ ವ್ಯಕ್ತಿಗಳು ಆಚೆ ಈಚೆ ನೂಕಲ್ಪಡುತ್ತಿದ್ದರು. ಇಂತಹ ಸ್ಥಿತಿಗಳಲ್ಲಿ ಕೆಲವು ವೇಳೆ ಹಝ್ರತ್ ಪೈಗಂಬರ್(ಸ) ಒಬ್ಬಂಟಿಯಾಗುತ್ತಿದ್ದರು. (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಎಂ.ಎ, ಪುಟ–493–494)

ಹೇಗಿದ್ದರೂ ಹಝ್ರತ್ ಉಸ್ಮಾನ್(ರ) ನಿರಾಶೆಗೊಂಡು ಅಥವಾ ಬೇರೆ ಯಾವುದೋ ಕಾರಣದಿಂದ ಹಝ್ರತ್ ಪೈಗಂಬರರ(ಸ) ಶಹಾದತಿನ ವಾರ್ತೆಯನ್ನು ಕೇಳಿ ಅಲ್ಲಿಂದ ಹೊರಟುಬಿಟ್ಟಿದ್ದರು ಎಂದು ಹೇಳಲಾಗುತ್ತದೆ. ಈ ರೀತಿಯಲ್ಲಿ ನಿರಾಶೆಗೊಂಡು ಕುಳಿತವರಲ್ಲಿ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಹೆಸರು ಸಹ ಬರುತ್ತದೆ. ಅದರ ಬಗ್ಗೆ ಯಥಾಸಮಯದಲ್ಲಿ ವಿವರಿಸಲಾಗುವುದು.

ಹುದೈಬಿಯ ಸಂಧಿಯ ವೇಳೆ ನಡೆದ ಸಮಾಲೋಚನೆ ಮತ್ತು ಬೈಅತೇ ರಿಝ್ವಾನಿನಲ್ಲಿ ಹಝ್ರತ್ ಉಸ್ಮಾನ್(ರ) ವಹಿಸಿದ ಪಾತ್ರದ ಬಗ್ಗೆ ಮತ್ತು ಅವರ ಕುರಿತು ಲಭಿಸುವ ಘಟನೆಗಳನ್ನು ನಾನೀಗ ಹೇಳುತ್ತೇನೆ. ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬಿಯರು ತಮ್ಮ ತಲೆಗಳನ್ನು ಬೋಳಿಸಿ ಮತ್ತು ಕೂದಲುಗಳನ್ನು ಚಿಕ್ಕದು ಮಾಡಿಕೊಂಡು ಕಅ್‌ಬ ಪ್ರವೇಶಿಸುತ್ತಿರುವುದಾಗಿ ಹಝ್ರತ್ ಪೈಗಂಬರ್(ಸ) ಕನಸಿನಲ್ಲಿ ಕಂಡರು. ಈ ಸ್ವಪ್ನದ ಆಧಾರದಲ್ಲಿ ಹಝ್ರತ್ ಪೈಗಂಬರ್(ಸ) ಧುಲ್‌ಖಅದ ಹಿಜರೀ 6ರಲ್ಲಿ ತಮ್ಮ 1400 ಸಹಾಬಿಯರ ಜೊತೆ ಉಮ್ರ ಮಾಡಲು ಮದೀನದಿಂದ ತೆರಳಿದರು. ಹುದೈಬಿಯಾ ಎಂಬ ಸ್ಥಳದಲ್ಲಿ ಅವರು ತಂಗಿದರು. ಖುರೈಶಿಗಳು ಹಝ್ರತ್ ಪೈಗಂಬರರನ್ನು(ಸ) ಉಮ್ರ ಮಾಡುವುದರಿಂದ ತಡೆದರು. ಉಭಯ ಪಕ್ಷಗಳ ನಡುವೆ ಸಮಾಲೋಚನೆಯ ಮಾತುಕತೆಯ ಆರಂಭವಾಯಿತು. ಹಝ್ರತ್ ಪೈಗಂಬರ್(ಸ) ಮಕ್ಕದ ಜನರ ಆವೇಶದ ಸ್ಥಿತಿಯ ಬಗ್ಗೆ ಕೇಳಿದಾಗ, ಮಕ್ಕಾ ನಿವಾಸಿಯಾದ, ಖುರೈಶಿಗಳ ಯಾವುದಾದರೂ ಗೌರವಾನ್ವಿತ ಗೋತ್ರದವರಾದ ಮತ್ತು ಪ್ರಭಾವಶಾಲಿಯಾದ ಯಾರನ್ನಾದರೂ ಮಕ್ಕದ ಕಡೆಗೆ ಕಳುಹಿಸುವುದಾಗಿ ಹಝ್ರತ್ ಪೈಗಂಬರ್(ಸ) ಹೇಳಿದರು. (ಶರಹ್ ಅಲ್‌ಅಲ್ಲಮ ಝುರ್‌ಖಾನಿ ಅಲಲ್ ಮವಾಹಿಬುದ್ದುನಿಯಾ, ಭಾಗ–3, ಪುಟ–169,170,222, ಅಮ್ರುಲ್ ಹುದೈಬಿಯ, ದಆರುಲ್ ಕುತುಬ್ ಇಲ್‌ಮಿಯ ಬೈರೂತ್ 1996)

ಹೀಗೆ ಹಝ್ರತ್ ಉಸ್ಮಾನ್‌ರನ್ನು(ರ) ಈ ಉದ್ದೇಶಕ್ಕಾಗಿ ಕಳುಹಿಸಲಾಯಿತು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಇದರ ಬಗ್ಗೆ ವಿವರಿಸಿದರಲ್ಲಿ ಕೆಲವನ್ನು ನಾನು ಇಲ್ಲಿ ಹೇಳುತ್ತೇನೆ. ಅವರು ಬರೆಯುತ್ತಾರೆ:

ಹಝ್ರತ್ ಪೈಗಂಬರ್(ಸ) ತಮ್ಮ ಸಹಾಬರೊಂದಿಗೆ ಬೈತುಲ್ಲಾಹ್ ಎಂದರೆ ಕಅ್‌ಬವನ್ನು ತವಾಫ್ ಮಾಡುತ್ತಿರುವುದಾಗಿ ಹಝ್ರತ್ ಪೈಗಂಬರ್(ಸ) ಕನಸಿನಲ್ಲಿ ಕಂಡರು. ಆಗ ಧುಲ್‌ಖಅದದ ತಿಂಗಳು ಸಮೀಪವಾಗುತ್ತಿತ್ತು. ಎಲ್ಲ ರೀತಿಯ ಯುದ್ಧಗಳು ನಿಷಿದ್ಧವೆಂದು ಜಾಹಿಲಿಯ್ಯ ಕಾಲದಿಂದಲೇ ಭಾವಿಸಲಾಗುತ್ತಿದ್ದ ಅನುಗ್ರಹೀತ 4 ತಿಂಗಳುಗಳಲ್ಲಿ ಧುಲ್‌ಖಅದ ತಿಂಗಳು ಸಹ ಒಳಪಟ್ಟಿದೆ. ಒಂದು ಕಡೆ ಹಝ್ರತ್ ಪೈಗಂಬರ್(ಸ) ಈ ಕನಸನ್ನು ಕಂಡರು ಮತ್ತೊಂದೆಡೆ ಆ ಸಮಯದಲ್ಲಿ ಅರೇಬಿಯದ ಎಲ್ಲ ಪ್ರದೇಶಗಳಲ್ಲಿ ಯುದ್ಧಗಳು ಸ್ಥಗಿತಗೊಂಡು ಶಾಂತಿ ಸಮಾಧಾನದ ಸೃಷ್ಟಿಯಾಗಿತ್ತು. ಅದು ಹಜ್ಜಿನ ಸಮಯವೂ ಆಗಿರಲಿಲ್ಲ. ಮಾತ್ರವಲ್ಲ, ಇಸ್ಲಾಮಿನಲ್ಲಿ ಹಜ್ಜ್ ಕರಾರುವಕ್ಕಾಗಿ ನಿಶ್ಚಯಿಸಪಟ್ಟಿರಲಿಲ್ಲ. ಆದರೆ ಕಅ್‌ಬದ ತವಾಫ್ ಎಲ್ಲ ಸಮಯದಲ್ಲೂ ಮಾಡಬಹುದಾಗಿತ್ತು. ಆದ್ದರಿಂದ ಈ ಸ್ವಪ್ನವನ್ನು ಕಂಡ ನಂತರ, ಉಮ್ರದ ತಯಾರಿ ನಡೆಸಲು ಸಹಾಬರೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು. ಈ ಯಾತ್ರೆಯಲ್ಲಿ ಯಾವುದೇ ರೀತಿಯ ಯುದ್ಧ ಮಾಡುವ ಉದ್ದೇಶವಿರಲಿಲ್ಲ. ಒಂದು ಶಾಂತಿಪೂರ್ಣವಾದ ಆರಾಧನೆಯ ಅನುಷ್ಠಾನ ಮಾಡಲು ಮಾತ್ರ ಉದ್ದೇಶಿಸಲಾಗಿತ್ತು. ಆದ್ದರಿಂದ ಮುಸ್ಲಿಮರು ಈ ಯಾತ್ರೆಯಲ್ಲಿ ತಮ್ಮೊಂದಿಗೆ ಆಯುಧಗಳನ್ನು ಕೊಂಡುಹೋಗಬಾರದು. ಆದರೆ ಅರೇಬಿಯದ ಪದ್ಧತಿಯ ಪ್ರಕಾರ ಯಾತ್ರಿಕನ ರೀತಿಯಲ್ಲಿ ಕೇವಲ ತಮ್ಮ ಖಡ್ಗಗಳನ್ನು ಕವಚದಲ್ಲಿ ಹಾಕಿಕೊಂಡು ಕೊಂಡು ಹೋಗಬಹುದು ಎಂದು ಹಝ್ರತ್ ಪೈಗಂಬರ್(ಸ) ಘೋಷಿಸಿದ್ದರು. ಅದೇ ರೀತಿಯಲ್ಲಿ ಮದೀನದ ಆಸುಪಾಸಿನಲ್ಲಿ ಇದ್ದ ಮತ್ತು ಬಾಹ್ಯವಾಗಿ ಮುಸ್ಲಿಮರ ಜೊತೆಗೆ ಇದ್ದ ಗ್ರಾಮ ವಾಸಿಗಳೊಡನೆ ಸಹ ಉಮ್ರ ಮಾಡಲು ಬರುವಂತೆ ಹಝ್ರತ್ ಪೈಗಂಬರ್(ಸ) ಹೇಳಿದರು. ಆದರೆ ದುಃಖಕರವಾದ ಸಂಗತಿಯೇನೆಂದರೆ, ಕೆಲವೇ ಕೆಲವು ಜನರ ಹೊರತು, ಮುಸ್ಲಿಮರೆಂದು ಕರೆಯಲ್ಪಡುತ್ತಿದ್ದ ಈ ದುರ್ಬಲ ವಿಶ್ವಾಸಿಗಳು ಮತ್ತು ಮದೀನದ ಆಸುಪಾಸಿನ ಗ್ರಾಮವಾಸಿಗಳಲ್ಲಿ ಹೆಚ್ಚಿನವರು ಹಝ್ರತ್ ಪೈಗಂಬರರೊಡನೆ(ಸ) ಹೊರಡಲು ತಯಾರಾಗಲಿಲ್ಲ. ಏಕೆಂದರೆ, ಮುಸ್ಲಿಮರ ಉದ್ದೇಶ ಉಮ್ರ

ಮಾಡುವುದು ಮಾತ್ರವಾದರೂ ಖುರೈಶಿಗಳು ಮುಸ್ಲಿಮರನ್ನು ತಡೆಯುವರು ಮತ್ತು ಈ ರೀತಿಯಲ್ಲಿ ಯುದ್ಧದ ಪರಿಸ್ಥಿತಿ ಉಂಟಾಗುವುದು ಎಂದು ಅವರು ಭಾವಿಸುತ್ತಿದ್ದರು. ಮಾತ್ರವಲ್ಲ, ಈ ಯುದ್ಧ ಮಕ್ಕದ ಸಮೀಪ ಮತ್ತು ಮದೀನದ ದೂರ ನಡೆಯಬಹುದಾದ ಕಾರಣ ಮುಸ್ಲಿಮರಲ್ಲಿ ಯಾರೂ ಬಚಾವಾಗಲಾರರು ಎಂದು ಅವರು ಭಾವಿಸುತ್ತಿದ್ದರು. ಆದ್ದರಿಂದ ಅವರು ಹೆದರಿಕೊಂಡು ಈ ಯಾತ್ರೆಯಲ್ಲಿ ಭಾಗವಹಿಸಲಿಲ್ಲ. ಹೇಗಿದ್ದರೂ ಹಝ್ರತ್ ಪೈಗಂಬರ್(ಸ) 1400ಗಿಂತ ಸ್ವಲ್ಪ ಹೆಚ್ಚು ಸಹಾಬಿಯರೊಂದಿಗೆ ಧುಲ್‌ಖಅದ ಹಿಜರೀ 6ರ ಆರಂಭದಲ್ಲೇ ಸೋಮವಾರದಂದು ಬೆಳಿಗ್ಗೆ ಮದೀನದಿಂದ ರವಾನೆಯಾದರು. ಈ ಯಾತ್ರೆಯಲ್ಲಿ ಹಝ್ರತ್ ಪೈಗಂಬರರ(ಸ) ಪತ್ನಿಯಾದ ಹಝ್ರತ್ ಉಮ್ಮೇ ಸಲ್ಮಾ ಅವರ ಸಹಯಾತ್ರಿಕರಾಗಿದ್ದರು. ನುಮೈಲ ಬಿನ್ ಅಬ್ದುಲ್ಲಾಹ್‌ರನ್ನು ಮದೀನದ ಅಮೀರರನ್ನಾಗಿ ಮತ್ತು ಕುರುಡರಾಗಿದ್ದ ಅಬ್ದುಲ್ಲಾಹ್ ಬಿನ್ ಉಮ್ಮೇ ಮಕ್ತೂಮ್‌ರನ್ನು ಇಮಾಮುಸ್ಸಲಾತ್ ಆಗಿ ನಿಶ್ಚಯಿಸಲಾಗಿತ್ತು.

ಮದೀನದಿಂದ 6 ಮೈಲುಗಳ ದೂರದಲ್ಲಿರುವ ಮತ್ತು ಮಕ್ಕದ ಮಾರ್ಗದಲ್ಲಿರುವ ಧುಲ್‌ಹಲೀಫ ಎಂಬ ಸ್ಥಳವನ್ನು ಹಝ್ರತ್ ಪೈಗಂಬರ್(ಸ) ತಲುಪಿದಾಗ, ಎಲ್ಲರೊಡನೆ ನಿಲ್ಲಲು ಹೇಳಿದರು ಮತ್ತು ಝುಹರ್ ಮತ್ತು ಅಸರ್ ನಮಾಝ್ ನಿರ್ವಹಿಸಿದ ನಂತರ ಎಪ್ಪತ್ತರಷ್ಟು ಇದ್ದ ಖುರ್ಬಾನಿಯ ಒಂಟೆಗಳ ಮೇಲೆ ಗುರುತು ಹಾಕಲು ನಿರ್ದೇಶಿಸಿದರು ಹಾಗೂ ಹಾಜಿಗಳು ಧರಿಸುವ ವಿಶೇಷವಾದ ವಸ್ತ್ರವಾದ ಇಹ್ರಾಂ ಧರಿಸಲು ಸಹಾಬರೊಡನೆ ಹೇಳಿದರು. ಹಝ್ರತ್ ಪೈಗಂಬರ್(ಸ) ಸ್ವತಃ ಇಹ್ರಾಂ ಧರಿಸಿದರು. ಖುರೈಶಿಯರು ಏನಾದರೂ ತುಂಟತನ ಮಾಡುವರೋ ಎಂದು ಅರಿಯಲು ಮಕ್ಕದ ಸಮೀಪ ನೆಲೆಸಿದ್ದ ಖುಝಾಅ ಗೋತ್ರದವನಾದ ಬಸರ್ ಬಿನ್ ಸುಫ್‌ಯಾನ್ ಎಂಬ ಹೆಸರಿನ ವ್ಯಕ್ತಿಯನ್ನು ಹಝ್ರತ್ ಪೈಗಂಬರ್‌ರನ್ನು(ಸ) ಕಳುಹಿಸಿದರು ಮತ್ತು ಹಝ್ರತ್ ಪೈಗಂಬರ್(ಸ) ಸಹಾಬರೊಡನೆ ಮೆಲ್ಲಮೆಲ್ಲನೆ ಮಕ್ಕದ ಕಡೆಗೆ ರವಾನೆಯಾದರು. ಹೆಚ್ಚಿನ ಮುನ್ನೆಚ್ಚರಿಕಾ ಕ್ರಮವೆಂಬಂತೆ, ಮುಸ್ಲಿಮರ ದೊಡ್ಡ ಸಂಘದ ಮುಂದೆ ಮುಂದೆ ಹೋಗಲು 20 ಯಾತ್ರಿಕರ ಒಂದು ಸಣ್ಣ ಸಂಘವನ್ನು ಉಬಾದ ಬಿನ್ ಬಶರಿನ ನೇತೃತ್ವದಲ್ಲಿ ನಿಶ್ಚಯಿಸಿದರು. ಕೆಲವು ದಿನಗಳ ಯಾತ್ರೆಯ ನಂತರ ಮಕ್ಕದಿಂದ 18 ಮೈಲುಗಳಷ್ಟು ದೂರವಿರುವ ಉಸ್‌ಫಾನ್ ಎಂಬ ಪ್ರದೇಶದ ಸಮೀಪಕ್ಕೆ ತಲುಪಿದಾಗ, ಹಝ್ರತ್ ಪೈಗಂಬರ್(ಸ) ಕಳುಹಿಸಿದ್ದ ಮಾಹಿತಿಗಾರ ಮರಳಿಬಂದು ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹೀಗೆ ಹೇಳಿದರು: "ಮಕ್ಕದ ಖುರೈಶಿಗಳು ಬಹಳ ಆವೇಶದಲ್ಲಿದ್ದಾರೆ. ನಿಮ್ಮನ್ನು ತಡೆಯಲು ಅವರು ದೃಢನಿರ್ಧಾರ ಮಾಡಿಕೊಂಡಿರುವರು. ಕೆಲವರು ತಮ್ಮ ಆವೇಶವನ್ನು ಪ್ರಕಟಿಸಲು ಚಿರತೆಯ ಚರ್ಮವನ್ನು ಧರಿಸಿರುವರು ಮತ್ತು ಯುದ್ಧ ಮಾಡುವ ದೃಢನಿರ್ಧಾರದೊಂದಿಗೆ ಹೇಗಿದ್ದರೂ ಮುಸ್ಲಿಮರನ್ನು ತಡೆಯಲು ಉದ್ದೇಶಿಸಿದ್ದಾರೆ. ಮಾತ್ರವಲ್ಲ ತಮ್ಮ ಕೆಲವು ಸಾಹಸಿಗರಾದ ಸವಾರರೊಂದಿಗೆ, ಆ ಸಮಯದಲ್ಲಿ ಮುಸ್ಲಿಮ್ ಆಗಿರದ ಖಾಲಿದ್ ಬಿನ್ ವಲೀದ್‌ರ ನೇತೃತ್ವದಲ್ಲಿ ಒಂದು ಸೈನ್ಯವನ್ನು ಖುರೈಶಿಗಳು ಮುಂದಕ್ಕೆ ಕಳುಹಿಸಿದ್ದಾರೆ. ಆ ಸೈನ್ಯದಲ್ಲಿ ಇಕ್ರಿಮ ಬಿನ್ ಅಬೂಜಹಲ್ ಸಹ ಇದ್ದಾರೆ." ಈ ಸುದ್ದಿಯನ್ನು ಕೇಳಿದಾಗ, ಯುದ್ಧ ಆಗುವುದನ್ನು ತಡೆಯುವ ಉದ್ದೇಶದಿಂದ ಹಝ್ರತ್ ಪೈಗಂಬರ್(ಸ) ಸಹಾಬರೊಡನೆ ಮಕ್ಕದ ಸಾರ್ವಜನಿಕ ರಸ್ತೆಯನ್ನು ಬಿಟ್ಟು ಬಲಗಡೆ ರಸ್ತೆಯಿಂದ ಯಾತ್ರೆಯನ್ನು ಮುಂದುವರೆಸಲು ಆದೇಶಿಸಿದರು. ಹೀಗೆ ಮುಸ್ಲಿಮರು ಕಠಿಣವಾದ ಮತ್ತು ಯಾತ್ರೆ ಮಾಡಲು ಕಷ್ಟಕರವಾದ ಒಂದು ರಸ್ತೆಯ ಮೂಲಕ ಸಮುದ್ರದ ಸಮೀಪವಾಗಿ ಮುಂದಕ್ಕೆ ಧಾವಿಸಲು ಶುರುಮಾಡಿದರು. ಹಝ್ರತ್ ಪೈಗಂಬರ್(ಸ) ಈ ಹೊಸ ರಸ್ತೆಯ ಮೂಲಕ ಮಕ್ಕದಿಂದ ಕೇವಲ 9 ಮೈಲುಗಳಷ್ಟು ದೂರವಿದ್ದ ಹುದೈಬಿಯದ ಸಮೀಪ ತಲುಪಿದಾಗ, ಯುದ್ಧಗಳಲ್ಲಿ ಹಝ್ರತ್ ಪೈಗಂಬರ್(ಸ) ಸವಾರರಾಗುತ್ತಿದ್ದ ಅಲ್‌ಖುಸ್ವ ಎಂಬ ಪ್ರಸಿದ್ಧ ಒಂಟೆ ಒಂದೇ ಸವನೆ ಕಾಲುಗಳನ್ನು ಹರಡಿಕೊಂಡು ಕುಳಿತುಕೊಂಡಿತು. ಅದನ್ನು ಎಬ್ಬಿಸಲು ಪ್ರಯತ್ನಿಸಲಾದರೂ ಅದು ಏಳಲಿಲ್ಲ. ಹುದೈಬಿಯದ ಕಣಿವೆಗಳ ಮೂಲಕ ಮಕ್ಕದ ಕಣಿವೆ ಶುರುವಾಗಲು ಸ್ವಲ್ಪವೇ ಬಾಕಿಯಿತ್ತು. ಒಂಟೆ ದನಿದಿರಬಹುದು ಎಂದು ಸಹಾಬಿಯರು ಹೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಇಲ್ಲ. ಇದು ಬಳಲಿ ಹೋಗಿಲ್ಲ. ಹೀಗೆ ದನಿದು ಹೋಗುವ ಅಭ್ಯಾಸ ಇದಕ್ಕೆ ಇಲ್ಲ. ಬದಲಿಗೆ ಅಸ್‌ಹಾಬುಲ್ ಫೀಲಿನ ಆನೆಗಳನ್ನು ಮಕ್ಕದ ಕಡೆಗೆ ಹೋಗುವುದರಿಂದ ತಡೆದಿದ್ದ ಅತ್ಯುನ್ನತನಾದ ಅಲ್ಲಾಹನು ಈಗ ಈ ಒಂಟೆಯನ್ನು ತಡೆದಿದ್ದಾನೆ. ಅಲ್ಲಾಹನಾಣೆ, ಕಅ್‌ಬದ ಗೌರವಕ್ಕಾಗಿ ಖುರೈಶಿಗಳು ನನ್ನೊಡನೆ ಏನೇ ಬೇಡಿದರೂ ನಾನು ಅದನ್ನು ಮಾಡುವೆನು'. ಅನಂತರ ಒಂಟೆಯನ್ನು ಪುನಃ ಎಬ್ಬಿಸಲು ಹಝ್ರತ್ ಪೈಗಂಬರ್(ಸ) ಪ್ರಯತ್ನಿಸಿದರು. ಅಲ್ಲಾಹನ ಇಚ್ಛೆ ಪ್ರಕಾರ ಈ ಬಾರಿ ಒಂಟೆ ಬೇಗನೇ ಎದ್ದುಕೊಂಡು ನಡೆಯಲು ತಯಾರಾಯಿತು. ಹೀಗೆ ಹಝ್ರತ್ ಪೈಗಂಬರ್(ಸ) ಅದನ್ನು ಹುದೈಬಿಯ ಕಣಿವೆಯ ಆಚೆ ಕಡೆಗೆ ಕೊಂಡುಹೋದರು. ಅಲ್ಲಿ ಒಂದು ಕಾರಂಜಿಯ ಬಳಿ ನಿಲ್ಲಿಸಿ ಒಂಟೆಯಿಂದ ಕೆಳಗೆ ಇದ್ದರು. ಇದೇ ಸ್ಥಳದಲ್ಲಿ ಹಝ್ರತ್ ಪೈಗಂಬರರ(ಸ) ನಿರ್ದೇಶನದ ಪ್ರಕಾರ ಸಹಾಬಿಯರು ಡೇರೆ ಹಾಕಿದರು.

ಇನ್ನು ಖುರೈಶಿಗಳೊಂದಿಗೆ ಸಂಧಾನದ ಮಾತುಕತೆಯ ಆರಂಭ ಹೇಗೆ ಆಯಿತೆಂಬ ಪ್ರಸ್ತಾಪ ಬರುತ್ತದೆ. ಹಝ್ರತ್ ಪೈಗಂಬರ್(ಸ) ಹುದೈಬಿಯದ ಕಣಿವೆಗೆ ತಲುಪಿ ಅಲ್ಲಿಯ ಕಾರಂಜಿಯ ಬಳಿ ತಂಗಿದರು. ಸಹಾಬಿಯರು ಈ ಸ್ಥಳದಲ್ಲಿ ಡೇರೆ ಹಾಕಿದ ನಂತರ, ಸಮೀಪ ಪ್ರದೇಶದಲ್ಲೇ ನೆಲೆಸಿದ್ದ ಖುಝಾಅ ಗೋತ್ರದ ಹೆಸರುವಾಸಿಯಾದ ಒಬ್ಬ ಸರದಾರನಾದ ಬದ್‌ಯಲ್ ಬಿನ್ ವರ್‌ಖ ಎಂಬವನು ಕೆಲವು ಸಂಗಡಿಗರೊಡನೆ ಹಝ್ರತ್ ಪೈಗಂಬರ್‌ರನ್ನು(ಸ) ಭೇಟಿಯಾಗಲು ಬಂದನು. ಅವನು ಹೇಳಿದನು: ಮಕ್ಕದ ಸರದಾರರು ಯುದ್ಧ ಮಾಡಲು ತಯಾರಾಗಿ ನಿಂತಿದ್ದಾರೆ. ಅವರು ಎಂದಿಗೂ ನಿಮ್ಮನ್ನು ಮಕ್ಕ ಪ್ರವೇಶಿಸಲು ಬಿಡಲಿಕ್ಕಿಲ್ಲ. ಹಝ್ರತ್ ಪೈಗಂಬರ್(ಸ) ಹೇಳಿದರು: ನಾವಂತು ಯುದ್ಧದ ಉದ್ದೇಶದಿಂದ ಬಂದಿಲ್ಲ. ಬದಲಿಗೆ ಉಮ್ರ ಮಾಡುವ ಉದ್ದೇಶದಿಂದ ಮಾತ್ರ ಬಂದಿದ್ದೇವೆ. ಮಕ್ಕದ ಖುರೈಶಿಗಳನ್ನು ಯುದ್ಧದ ಬೆಂಕಿ ಸುಟ್ಟು ಬೂದಿಯನ್ನಾಗಿ ಮಾಡಿದ್ದರೂ ಈ ಜನರು ಯುದ್ಧಗಳಿಂದ ಹಿಂದೆ ಸರಿಯದೇ ಇರುವುದು ದುಃಖಕರ. ನಾನಂತು ಈ ಜನರೊಡನೆ ಮಾತುಕತೆ ನಡೆಸಿ ಸಂಧಾನ ಮಾಡಲು ತಯಾರಾಗಿದ್ದೇನೆ. ನನ್ನ ವಿರುದ್ಧ ಯುದ್ಧ ಮಾಡುವುದನ್ನು ಬಿಟ್ಟು ನನ್ನನು ನನ್ನ ಸಂಗಡಿಗರೊಡನೆ ಬರಲು ಅವರು ಬಿಡಲಿ. ಮಕ್ಕದವರೊಡನೆ ನಾನು ಯಾವುದೇ ರೀತಿಯ ವ್ಯವಹಾರ ಮತ್ತು ಸಂಪರ್ಕ ಇರಿಸುವುದಿಲ್ಲ. ಇತರ ಜನರಿಗೆ ಇಸ್ಲಾಮಿನ ಸಂದೇಶವನ್ನು ತಲುಪಿಸುವೆನು. ಆದರೆ ಅವರು ನನ್ನ ಈ ಸಲಹೆಯನ್ನು ಸಹ ರದ್ದುಮಾಡುವುದಾದರೆ, ಹೇಗಿದ್ದರೂ ಯುದ್ಧ ಮಾಡಲು ತಯಾರಾಗಿ ನಿಂತಿರುವುದಾದರೆ, ಯಾರ ಕೈಯಲ್ಲಿ ನನ್ನ ಜೀವವಿದೆಯೋ ಆ ಅಲ್ಲಾಹನಾಣೆ, ನಾನು ಸಹ ನನ್ನ ಜೀವ ಈ ಮಾರ್ಗದಲ್ಲಿ ತ್ಯಾಗಗೊಳಿಸುವ ವರೆಗೆ ಅಥವಾ ಅಲ್ಲಾಹನು ನನಗೆ ವಿಜಯವನ್ನು ಕೊಡುವ ವರೆಗೆ ಯುದ್ಧ ಮಾಡುವುದರಿಂದ ಹಿಂದೆ ಸರಿಯಲಿಕ್ಕಿಲ್ಲ. ನಾನು ಈ ಹೋರಾಟ ನಡೆಸಿ ಕೊಲ್ಲಲ್ಪಟ್ಟರೆ, ಕಥೆ ಅಲ್ಲಿಗೆ ಮುಗಿಯಿತು. ಆದರೆ ಅಲ್ಲಾಹನು ನನಗೆ ವಿಜಯ ಕೊಟ್ಟರೆ, ನಾನು ತಂದ ಧರ್ಮಕ್ಕೆ ವಿಜಯ ಲಭಿಸಿದರೆ, ಮಕ್ಕ ನಿವಾಸಿಗಳು ಸಹ ವಿಶ್ವಾಸ ಕೈಗೊಳ್ಳುವುದರಿಂದ ಹಿಂದೆಸರಿಯಬಾರದು. ಹಝ್ರತ್ ಪೈಗಂಬರರ(ಸ) ಪ್ರಾಮಾಣಿಕ ಮತ್ತು ನೋವುಭರಿತ ಮಾತುಗಳ ಪ್ರಭಾವ ಬಹಳವಾಗಿ ಬದ್‌ಯಲ್ ಬಿನ್ ವರ್‌ಖಾರ ಮೇಲೆ ಆಯಿತು. ಅವರು ಹೇಳಿದರು: ನನಗೆ ನೀವು ಸ್ವಲ್ಪ ಸಾವಾಕಾಶ ಕೊಡಿರಿ. ನಾನು ಮಕ್ಕಕ್ಕೆ ಹೋಗಿ ನಿಮ್ಮ ಸಂದೇಶವನ್ನು ತಲುಪಿಸುವೆನು ಮತ್ತು ಸಂಧಾನ ಮಾಡಿಸಲು ಪ್ರಯತ್ನಿಸುವೆನು. ಹಝ್ರತ್ ಪೈಗಂಬರ್(ಸ) ಅವರಿಗೆ ಅನುಮತಿ ಕೊಟ್ಟರು. ಬುದ್‌ಯಲ್ ತನ್ನ ಗೋತ್ರದ ಕೆಲವು ವ್ಯಕ್ತಿಗಳೊಂದಿಗೆ ಮಕ್ಕದ ಕಡೆಗೆ ರವಾನೆಯಾದರು.

ಬದ್‌ಯಲ್ ಬಿನ್ ವರ್‌ಖಾ ಮಕ್ಕ ತಲುಪಿದಾಗ, ಅವರು ಖುರೈಶಿಗಳನ್ನು ಒಟ್ಟುಸೇರಿಸಿ ಅವರೊಡನೆ ಹೇಳಿದರು: ನಾನು ಮುಹಮ್ಮದ್ ರಸೂಲುಲ್ಲಾಹ್‌ರ ಬಳಿಯಿಂದ ಬರುತ್ತಿದ್ದೇನೆ. ನನ್ನ ಮುಂದೆ ಅವರು ಒಂದು ಸಲಹೆಯನ್ನು ಇಟ್ಟಿದ್ದರು. ನೀವು ಅನುಮತಿ ಕೊಟ್ಟರೆ ನಾನು ಅದನ್ನು ಹೇಳುತ್ತೇನೆ. ಆಗ ಖುರೈಶಿಗಳ ಆವೇಶಭರಿತ ಮತ್ತು ಜವಾಬ್ದಾರಿರಹಿತ ಜನರು ಹೇಳಿದರು: ನಾವು ಅವರ ಯಾವುದೇ ಮಾತನ್ನು ಕೇಳಲು ತಯಾರಲ್ಲ. ಆದರೆ ಅವರಲ್ಲಿ ಕೆಲವು ಉತ್ತಮ ವ್ಯಕ್ತಿಗಳು ಹೇಳಿದರು: ಸರಿ, ಸಲಹೆ ಏನೇ ಆದರೂ ನಮ್ಮೊಡನೆ ಹೇಳಿರಿ. ಹೀಗೆ ಹಝ್ರತ್ ಪೈಗಂಬರ್(ಸ) ಹೇಳಿದ್ದ ಸಲಹೆಯನ್ನು ಬದ್‌ಯಲ್ ಪುನರಾವರ್ತಿಸಿದರು. ಆಗ ಅಲ್ಲಿದ್ದ ಸಖೀಫ್ ಗೋತ್ರದ ಒಬ್ಬ ಬಹಳ ಪ್ರಭಾವಶಾಲಿ ಸರದಾರನಾದ ಉರ್‌ವ ಬಿನ್ ಮಸ್‌ಊದ್ ಎಂಬವನು ನಿಂತುಕೊಂಡು, ಖುರೈಶಿಗಳ ಪುರಾತನ ಅರಬೀ ಶೈಲಿಯಲ್ಲಿ ಹೀಗೆ ಹೇಳಿದನು: ಹೇ ಜನರೇ ನಾನು ನಮ್ಮ ತಂದೆಯ ಸ್ಥಾನದಲ್ಲಿರುವವನಲ್ಲವೇ? ಹೌದೆಂದು ಅವರು ಹೇಳಿದರು. ಅನಂತರ ಅವರು ಹೇಳಿದರು: ನೀವು ನನ್ನ ಮಕ್ಕಳಂತೆ ಅಲ್ಲವೇ? ಹೌದೆಂದು ಅವರು ಹೇಳಿದರು. ಅವರು ಪುನಃ ಹೇಳಿದರು: ನನ್ನ ಮೇಲೆ ಭರವಸೆಯಿಲ್ಲವೇ? ಖಂಡಿತವಿದೆಯೆಂದು ಅವರು ಹೇಳಿದರು. ಆಗ ಅವರು ಹೇಳಿದರು: ಮುಹಮ್ಮದ್ ನಿಮ್ಮ ಮುಂದೆ ಬಹಳ ಉತ್ತಮವಾದೊಂದು ಸಲಹೆಯನ್ನು ಇರಿಸಿದ್ದಾರೆ. ಆದ್ದರಿಂದ ಈ ಸಲಹೆಯನ್ನು ನೀವು ಅಂಗೀಕರಿಸಬೇಕು. ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋಗಿ ಹೆಚ್ಚಿನ ಮಾತುಕತೆ ನಡೆಸಲು ನನಗೆ ನೀವು ಅನುಮತಿ ಕೊಡಿರಿ. ಖುರೈಶಿಗಳು ಹೇಳಿದರು: ಖಂಡಿತ ನೀವು ಹೋಗಿರಿ ಮತ್ತು ಮಾತುಕತೆ ನಡೆಸಿರಿ. ಹೀಗೆ ಆ ವ್ಯಕ್ತಿ ಹಝ್ರತ್ ಪೈಗಂಬರ್(ಸ) ಇದ್ದ ಸಭೆಗೆ ತಲುಪಿದರು. ಅಲ್ಲಿ ಅವರು ಒಂದು ರೋಮಾಂಚಕ ದೃಶ್ಯವನ್ನು ಕಂಡರು. ಉರ್‌ವ ಹಝ್ರತ್ ಪೈಗಂಬರರ(ಸ) ಸನ್ನಿಧಿಗೆ ಬಂದು ಅವರೊಡನೆ ಮಾತುಕತೆ ನಡೆಸಲು ಶುರುಮಾಡಿದರು. ಹಝ್ರತ್ ಪೈಗಂಬರ್(ಸ) ಅವರ ಮುಂದೆ ಬದ್‌ಯಲ್ ಬಿನ್ ವರ್‌ಖಾರೊಡನೆ ಹೇಳಿದ ಅದೇ ಮಾತುಗಳನ್ನು ಹೇಳಿದರು. ಹಝ್ರತ್ ಪೈಗಂಬರರ(ಸ) ಸಲಹೆಯ ಬಗ್ಗೆ ಉರ್‌ವ ಒಮ್ಮತಾಭಿಪ್ರಾಯವನ್ನು

ಹೊಂದಿದ್ದರು. ಆದರೆ ಖುರೈಶಿಗಳ ಪ್ರತಿನಿಧಿ ಎಂಬ ನೆಲೆಯಲ್ಲಿ ಅವರ ಹಕ್ಕುಗಳನ್ನು ಹೆಚ್ಚು ಸಂರಕ್ಷಿಸಲು ಬಯಸುತ್ತಿದ್ದನು. ಹಝ್ರತ್ ಪೈಗಂಬರರೊಡನೆ ಮಾತುಕತೆ ಮುಗಿಸಿಕೊಂಡು ಉರ್ವ ಖುರೈಶಿಗಳ ಬಳಿಗೆ ಮರಳಿಹೋದರು. ಹೋದ ಕೂಡಲೇ ಖುರೈಶಿಗಳೊಡನೆ ಹೇಳಿದರು: ಹೇ ಜನರೇ, ನಾನು ಲೋಕದಲ್ಲಿ ಹಲವಾರು ಯಾತ್ರೆಗಳನ್ನು ಮಾಡಿದ್ದೇನೆ. ಅರಸರ ದರ್ಬಾರುಗಳಿಗೆ ಹೋಗಿದ್ದೇನೆ. ಸೀಸರ್, ಕಿಸ್ರಾ ಮತ್ತು ನಜಾಶಿಯರ ಮುಂದೆ ಪ್ರತಿನಿಧಿಯಾಗಿ ಹೋಗಿದ್ದೇನೆ. ಆದರೆ ಅಲ್ಲಾಹನಾಣೆ, ಸಹಾಬಿಯರು ಹಝ್ರತ್ ಪೈಗಂಬರರನ್ನು(ಸ) ಗೌರವಿಸುವ ರೀತಿಯನ್ನು ನಾನು ಎಲ್ಲೂ ಕಂಡಿಲ್ಲ. ಅನಂತರ ಅವರು ಹಝ್ರತ್ ಪೈಗಂಬರರ(ಸ) ಸಭೆಯಲ್ಲಿ ನೋಡಿದ್ದ ಎಲ್ಲ ಸಂಗತಿಯನ್ನು ವಿವರಿಸಿದರು. ಕೊನೆಗೆ ಹೀಗೆ ಹೇಳಿದರು: ನಾನು ಪುನಃ ಹೇಳುತ್ತೇನೆ. ಅವರ ಸಲಹೆ ನೀತಿಪೂರ್ಣವಾದ ಸಲಹೆಯಾಗಿದೆ. ಅದನ್ನು ಅಂಗೀಕರಿಸಬೇಕು. ಉರ್ವನ ಈ ಮಾತುಕತೆಯನ್ನು ಕೇಳಿಕೊಂಡು ಬನೀ ಕನಾನ ಗೋತ್ರದ ಸರದಾರನಾದ ಹಲೀಸ್ ಬಿನ್ ಅಲ್‌ಖಮ ಎಂಬವನು ಖುರೈಶಿಯರೊಡನೆ ಹೇಳಿದರು: ನೀವು ಇಷ್ಟಪಡುವುದಾದರೆ ನಾನು ಮುಹಮ್ಮದ್‌ರ(ಸ) ಬಳಿಗೆ ಹೋಗುವೆನು. ಸರಿ, ಹೋಗಿರಿ ಎಂದು ಖುರೈಶಿಗಳು ಹೇಳಿದರು. ಹೀಗೆ ಅವನು ಹುದೈಬಿಯಾಗೆ ಬಂದನು. ಅವರು ಬರುವುದನ್ನು ದೂರದಿಂದ ನೋಡಿದ ಹಝ್ರತ್ ಪೈಗಂಬರ್(ಸ) ಸಹಾಬರೊಡನೆ ಹೇಳಿದರು: ನಮ್ಮ ಬಳಿಗೆ ಬರುತ್ತಿರುವ ವ್ಯಕ್ತಿಯು ಖುರ್ಬಾನಿಯ ದೃಶ್ಯಗಳನ್ನು ಇಷ್ಟಪಡುವ ಗೋತ್ರದ ವ್ಯಕ್ತಿಯಾಗಿದ್ದಾನೆ. ಆದ್ದರಿಂದ ಬೇಗನೇ ತಮ್ಮ ಖುರ್ಬಾನಿಯ ಜಾನುವಾರುಗಳನ್ನು ಒಟ್ಟುಗೂಡಿಸಿಕೊಂಡು ಮುಂದೆ ತನ್ನಿರಿ. ನಾವು ಯಾವ ಉದ್ದೇಶಕ್ಕಾಗಿ ಬಂದಿರುವೆವು ಎಂದು ಅವನಿಗೆ ಗೊತ್ತಾಗಲಿ. ಹೀಗೆ ಸಹಾಬಿಯರು ತಮ್ಮ ಖುರ್ಬಾನಿಯ ಜಾನುವಾರುಗಳನ್ನು ಮುಂದೆ ಮಾಡುತ್ತಾ ಮತ್ತು ಉಚ್ಚ ಸ್ವರದಲ್ಲಿ ತಕ್‌ಬೀರ್‌ಗಳನ್ನು ಹೇಳುತ್ತಾ ಅವನ ಮುಂದೆ ಒಟ್ಟುಗೂಡಿದರು. ಈ ದೃಶ್ಯವನ್ನು ಅವನು ನೋಡಿದಾಗ ಹೀಗೆ ಹೇಳಿದನು: ಸುಬ್‌ಹಾನಲ್ಲಾಹ್, ಸುಬ್‌ಹಾನಲ್ಲಾಹ್, ಇವರು ಹಾಜಿಗಳಾಗಿದ್ದಾರೆ. ಇವರನ್ನು ಬೈತುಲ್ಲಾಹ್‌ದ ತವಾಫ್ ಮಾಡುವುದರಿಂದ ಯಾವುದೇ ರೀತಿಯಲ್ಲಿ ತಡೆಯಬಾರದು. ಹೀಗೆ ಅವನು ಬೇಗನೇ ಖುರೈಶಿಗಳ ಕಡೆಗೆ ಮರಳಿಹೋದನು ಮತ್ತು ಖುರೈಶಿಗಳೊಡನೆ ಹೇಳಿದನು: ಮುಸ್ಲಿಮರು ತಮ್ಮ ಜಾನುವಾರುಗಳ ಕುತ್ತಿಗೆಗಳಲ್ಲಿ ಖುರ್ಬಾನಿಯ ಹಾರವನ್ನು ಕಟ್ಟಿರುವುದನ್ನು ಮತ್ತು ಅವುಗಳ ಮೇಲೆ ಖುರ್ಬಾನಿಯ ಗುರುತುಗಳನ್ನು ಹಾಕಿರುವುದನ್ನು ನಾನು ಕಂಡೆ. ಆದ್ದರಿಂದ ಅವರನ್ನು ಕಅ್‌ಬ ತವಾಫ್ ಮಾಡುವುದರಿಂದ ತಡೆಯುವುದು ಯಾವುದೇ ರೀತಿಯಲ್ಲಿ ಸರಿಯಲ್ಲ.

ಖುರೈಶಿಯರಲ್ಲಿ ಆ ಸಮಯದಲ್ಲಿ ತೀವ್ರವಾದೊಂದು ಬಿರುಕಿನ ಅವಸ್ಥೆ ಉಂಟಾಗಿತ್ತು. ಜನರ ಎರಡು ಪಕ್ಷಗಳು ಉಂಟಾಗಿದ್ದುವು. ಏನೇ ಆದರೂ ಮುಸ್ಲಿಮರನ್ನು ವಾಪಾಸ್ಸು ಕಳುಹಿಸಲು ಮತ್ತು ಅವರ ವಿರುದ್ಧ ಹೋರಾಟ ನಡೆಸುವ ತೀವ್ರ ಉದ್ದೇಶವನ್ನು ಒಂದು ಪಕ್ಷ ಹೊಂದಿತ್ತು. ಆದರೆ ಇನ್ನೊಂದು ಪಕ್ಷದವರು ಇದನ್ನು ತಮ್ಮ ಪುರಾತನ ಧಾರ್ಮಿಕ ಪರಂಪರೆಗಳ ವಿರುದ್ಧವೆಂದು ಕಂಡು ಹೆದರುತ್ತಿದ್ದರು ಮತ್ತು ಏನೇದರೂ ಗೌರವಾನ್ವಿತ ಸಂಧಾನವನ್ನು ಮಾಡಲು ಬಯಸುತ್ತಿದ್ದರು. ಆದ್ದರಿಂದ ತೀರ್ಮಾನ ಇತ್ಯರ್ಥಗೊಳ್ಳದೆ ಉಳಿದಿತ್ತು. ಈ ಸಂದರ್ಭದಲ್ಲಿ ಮಕ್‌ರಝ್ ಬಿನ್ ಹಫ್ಸ್ ಎಂಬ ಹೆಸರಿನ ಅರೇಬಿಯನಾದ ಒಬ್ಬ ಸರದಾರ ಖುರೈಶಿಗಳೊಡನೆ ಹೇಳಿದನು: ನನಗೆ ಹೋಗಲು ಅನುಮತಿ ಕೊಡಿರಿ. ನಾನು ತೀರ್ಮಾನದ ಯಾವುದಾದರೂ ಮಾರ್ಗವನ್ನು ನೋಡುವೆನು. ಸರಿ, ನೀನು ಸಹ ಪ್ರಯತ್ನ ಮಾಡಿ ನೋಡು ಎಂದು ಖುರೈಶಿಗಳು ಹೇಳಿದರು. ಹೀಗೆ ಅವನು ಹಝ್ರತ್ ಪೈಗಂಬರರ(ಸ) ಬಳಿಗೆ ಹೋದೆನು. ಅವನನ್ನು ದೂರದಿಂದ ನೋಡಿದ ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನು ಒಳ್ಳೆಯದು ಮಾಡಲಿ. ಈ ವ್ಯಕ್ತಿ ಒಳ್ಳೆಯವನಲ್ಲ. ಹೇಗಿದ್ದರೂ ಮಕ್‌ರಝ್ ಅವರ ಬಳಿಗೆ ಬಂದು ಮಾತುಕತೆ ನಡೆಸಲು ಶುರುಮಾಡಿದರು. ಆದರೆ ಅವನು ಮಾತುನ್ನಾಡುತ್ತಿರುವಾಗಲೇ ಮಕ್ಕದ ಒಬ್ಬ ಪ್ರಸಿದ್ಧ ಸರದಾರನಾದ ಸುಹೈಲ್ ಬಿನ್ ಅಮ್ರ್ ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾದನು. ಮಕ್‌ರಝಿನ ಮರಳುವಿಕೆಯನ್ನು ಕಾಯದೇ ಬಹುಶಃ ಗಾಬರಿಯಿಂದ ಸುಹೈಲ್‌ನನ್ನು ಖುರೈಶಿಗಳು ಕಳುಹಿಸಿರಬಹುದು. ಸುಹೈಲ್ ಬರುತ್ತಿರುವುದನ್ನು ಕಂಡಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಸುಹೈಲ್ ಬರುತ್ತಿದ್ದಾನೆ. ಈಗ ಅಲ್ಲಾಹನು ಇಚ್ಛಿಸುವನಾದರೆ ಸಂಗತಿಯನ್ನು ಸುಲಭಗೊಳಿಸುವನು.

ಹೇಗಿದ್ದರೂ ಮಾತುಕತೆ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಖುರೈಶಿಗಳ ಕಡೆಯಿಂದ ಒಂದರ ಹಿಂದೆ ಇನ್ನೊಂದರಂತೆ ದೂತರು ಬರಲು ತೊಡಗಿದರು. ಮುಸ್ಲಿಮರ ಕಡೆಯಿಂದಲೂ ಒಬ್ಬ ವಿವೇಕಯುತ ವ್ಯಕ್ತಿ ಖುರೈಶಿಯರ ಬಳಿಗೆ ಹೋಗಿ ಅವರೊಡನೆ ಸಹಾನುಭೂತಿ ಮತ್ತು ವಿವೇಕದೊಂದಿಗೆ ಮುಸ್ಲಿಮರ ಉದ್ದೇಶವನ್ನು ಹೇಳಿಕೊಡಲು ಯಾರಾದರೂ ಹೋಗಬೇಕೆಂದು ಭಾವಿಸಿಕೊಂಡು ಹಝ್ರತ್ ಪೈಗಂಬರ್(ಸ) ಖುಝಾಅ ಗೋತ್ರದ ಖರಾಶ್ ಬಿನ್ ಉಮಯ್ಯ ಎಂಬ ಹೆಸರಿನ ವ್ಯಕ್ತಿಯನ್ನು ಈ ಕೆಲಸಕ್ಕಾಗಿ ಆಯ್ಕೆ ಮಾಡಿದರು. ಎಂದರೆ, ಖುರೈಶಿಗಳ ಕಡೆಯಿಂದ ಬಂದ ಮೊತ್ತಮೊದಲ ದೂತನಾದ ಬದ್‌ಯಲ್ ಬಿನ್ ವರ್‌ಖಾ ಇರುವ ಗೋತ್ರವು ಇದೇ ಆಗಿತ್ತು. ಈ ಸಂದರ್ಭದಲ್ಲಿ, ಖರಾಶ್‌ನಿಗೆ ಹಝ್ರತ್ ಪೈಗಂಬರ್(ಸ) ಸ್ವತಃ ತನ್ನ ಒಂದು ಒಂಟೆಯನ್ನು ಅವರಿಗೆ ಸವಾರಿಮಾಡಲು ಕೊಟ್ಟಿದ್ದರು. ಖರಾಶ್ ಖುರೈಶಿಯರ ಬಳಿಗೆ ಹೋದರು. ಆದರೆ ಆಗ ಮಾತುಕತೆಯ ಆರಂಭಘಟ್ಟವಾಗಿತ್ತು. ಖುರೈಶಿಗಳ ಯುವಕರು ಬಹಳ ಆವೇಶದಿಂದ ಇದ್ದರು. ಯುವಕನಾಗಿದ್ದ ಇಕ್ರಿಮ ಬಿನ್ ಅಬೂಜಹಲ್ ಖರಾಶಿನ ಒಂಟೆಯ ಮೇಲೆ ಹಲ್ಲೆ ನಡೆಸಿ ಗಾಯಗೊಳಿಸಿದರು. ಅರೇಬಿಯರ ಪರಂಪರೆಯ ಪ್ರಕಾರ ಇದರ ಅರ್ಥ, ನಾವು ನಿಮ್ಮ ಸಂಚಾರವನ್ನು ಒತ್ತಾಯಪೂರ್ವಕವಾಗಿ ತಡೆಯುವೆವು ಎಂದಾಗಿದೆ. ಮಾತ್ರವಲ್ಲ, ಖುರೈಶಿಯರ ಈ ಆವೇಶಭರಿತ ಸಂಘ ಖರಾಶ್‌ನ ಮೇಲೆ ಸಹ ಹಲ್ಲೆ ನಡೆಸಲು ಬಯಸುತ್ತಿತ್ತು. ಆದರೆ ಹಿರಿಯರಾದವರು ಹೇಗಾದರೂ ಅವರ ಜೀವವನ್ನು ರಕ್ಷಿಸಿದರು. ಹೀಗೆ ಅವರು ಖುರೈಶಿಗಳ ಕಡೆಯಿಂದ ಮುಸ್ಲಿಮರ ಕ್ಯಾಂಪಿಗೆ ಮರಳಿಬಂದರು. ಇಷ್ಟು ಮಾತ್ರವಲ್ಲ ಖುರೈಶಿಗಳ ಈಗ ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬಿಯರು ಮಕ್ಕದ ಬಹಳ ಸಮೀಪ ತಲುಪಿರುವ ಕಾರಣ ಅವರ ಮೇಲೆ ಹಲ್ಲೆ ನಡೆಸಿ ಅವರಿಗೆ ಸಾಧ್ಯವಾದಷ್ಟು ನಷ್ಟವನ್ನು ಉಂಟುಮಾಡಲು ಸಹ ಮಕ್ಕದ ಖುರೈಶಿಗಳು ಆವೇಶಭರಿತರಾಗಿದ್ದರು. ಹಾಗೆ ಆ ಉದ್ದೇಶಕ್ಕಾಗಿ ಅವರು 40, 50 ಜನರ ಒಂದು ಸಂಘವನ್ನು ಹುದೈಬಿಯದ ಕಡೆಗೆ ರವಾನೆ ಮಾಡಿದರು. ಉಭಯ ಪಕ್ಷಗಳ ನಡುವೆ ಜಾರಿಯಲ್ಲಿದ್ದ ಮಾತುಕತೆಯ ನಡುವೆ ಮುಸ್ಲಿಮರ ಡೇರೆಯ ಆಸುಪಾಸು ಸುತ್ತಾಡುತ್ತಾ ಹೊಂಚು ಹಾಕುತ್ತಾ ಇದ್ದುಕೊಂಡು ಸಂದರ್ಭ ಸಿಗುವಾಗ ಮುಸ್ಲಿಮರಿಗೆ ನಷ್ಟ ಉಂಟುಮಾಡುತ್ತಿರಲು ಅವರಿಗೆ ನಿರ್ದೇಶನ ನೀಡಲಾಗಿತ್ತು.ಅವರು 80ರಷ್ಟು ಜನರಿದ್ದರು ಎಂದೂ ವರದಿಗಳಲ್ಲಿ ಬಂದಿದೆ. ಈ ಸಂದರ್ಭದಲ್ಲಿ ಖುರೈಶಿಯರು ಹಝ್ರತ್ ಪೈಗಂಬರರನ್ನು(ಸ) ವಧಿಸಲು ಸಹ ಸಂಚು ಹಾಕಿದ್ದರು. ಹೇಗಿದ್ದರೂ ಅಲ್ಲಾಹನ ಅನುಗ್ರಹದಿಂದ ಮುಸ್ಲಿಮರು ಎಚ್ಚರದಿಂದಿದ್ದರು. ಹೀಗೆ ಖುರೈಶಿಗಳ ಒಳಸಂಚಿನ ರಹಸ್ಯ ಬಯಲಾಯಿತು ಮತ್ತು ಅವರೆಲ್ಲರನ್ನು ಬಂಧಿಸಲಾಯಿತು. ಪವಿತ್ರ ತಿಂಗಳುಗಳಲ್ಲಿ ಮತ್ತು ಕಅ್‌ಬದ ಸಮೀಪ ಪ್ರದೇಶದಲ್ಲಿ ಮಕ್ಕಾನಿವಾಸಿಗಳು ಮಾಡಿದ ಈ ಕೃತ್ಯದ ಕಾರಣ ಮುಸ್ಲಿಮರಿಗೂ ತುಂಬಾ ಕೋಪವಿತ್ತು. ಆದರೆ ಹಝ್ರತ್ ಪೈಗಂಬರ್(ಸ) ಆ ಜನರನ್ನು ಕ್ಷಮಿಸಿದರು ಮತ್ತು ಸಂಧಾನದ ಮಾತುಕತೆಯಲ್ಲಿ ತಡೆಯುಂಟಾಗದಂತೆ ನೋಡಿದರು. ಮಕ್ಕಾ ನಿವಾಸಿಗಳ ಈ ಕೃತ್ಯದ ಬಗ್ಗೆ ಪವಿತ್ರ ಖುರ್‌ಆನಿನಲ್ಲೂ ಹೀಗೆ ಪ್ರಸ್ತಾಪ ಬರುತ್ತದೆ: **ಹುವಲ್ಲಝೀ ಕಫ್ಫ ಅಯ್‌ದೀಹಿಮ್ ಅನ್ಕುಮ್ ವ ಅಯ್‌ದೀಕುಮ್ ಅನ್‌ಹುಮ್ ಬಿಬತ್‌ನಿ ಮಕ್ಕತ ಮಿನ್ ಬಅದಿ ಅನ್ ಅಝ್‌ಫರಕುಮ್ ಅಲೈಹಿಮ್ ವಕಾನಲ್ಲಾಹು ಬಿಮಾ ತಅ್‌ಮಲೂನ ಬಸೀರ್**. (ಅಲ್‌ಫತಹ್:25) ಅಂದರೆ, ನಿಮಗೆ ಅವರ ಮೇಲೆ (ಶತ್ರುಗಳ ಮೇಲೆ) ವಿಜಯವನ್ನು ನೀಡಿದ ಬಳಿಕ ಮಕ್ಕ ಕಣಿವೆಯಲ್ಲಿ ಅವರ ಕೈಗಳನ್ನು ನಿಮ್ಮಿಂದಲೂ ನಿಮ್ಮ ಕೈಗಳನ್ನು ಅವರಿಂದಲೂ ತಡೆದಿಟ್ಟವನು ಅವನೇ (ಅಲ್ಲಾಹನೇ) ಆಗಿದ್ದಾನೆ. ನಿಮ್ಮ ಕೃತ್ಯಗಳನ್ನೆಲ್ಲ ಅಲ್ಲಾಹನು ಕಾಣುತ್ತಾನೆ.

ಹೇಗಿದ್ದರೂ ಈ ಎಲ್ಲ ಅವಸ್ಥೆಗಳಲ್ಲಿ ಮತ್ತು ಈ ಹಿನ್ನೆಲೆಯಲ್ಲಿ, ಲೋಕದಲ್ಲಿ ಎಲ್ಲೂ ಕಾಣಲು ಸಿಗದಂತಹ ಸ್ಥಿರವಾದ ಸಹನೆ, ಧೈರ್ಯ ಮತ್ತು ಶಾಂತಿಸ್ಥಾಪನೆಯ ಅತುಲ್ಯವಾದ ಪ್ರಯತ್ನವನ್ನು ಹಝ್ರತ್ ಪೈಗಂಬರರ(ಸ) ಜೀವಿತದಲ್ಲಿ ನಾವು ನೋಡುತ್ತೇವೆ. ಶಾಂತಿಸ್ಥಾಪನೆ ಮಾಡಿಸುವ ಪ್ರಯತ್ನದಲ್ಲಿ ಅವರು ನಿರತರಾಗಿದ್ದರು. ಹಝ್ರತ್ ಪೈಗಂಬರ್(ಸ) ಖುರೈಶಿಯರ ಕುಕೃತ್ಯಗಳನ್ನು ಕಂಡಾಗ ಮತ್ತು ಖರಾಶ್ ಬಿನ್ ಉಮಯ್ಯರಿಂದ ಮಕ್ಕಾನಿವಾಸಿಗಳ ಆವೇಶದ ಬಗ್ಗೆ ಕೇಳಿದಾಗ, ಖುರೈಶಿಗಳನ್ನು ಸರಿದಾರಿಗೆ ತರುವ ಉದ್ದೇಶದಿಂದ, ಮಕ್ಕಾ ನಿವಾಸಿಯೂ ಪ್ರಭಾವಶಾಲಿಯೂ ಮತ್ತು ಖುರೈಶಿಯರ ಗೌರವಾನ್ವಿತ ಗೋತ್ರಕ್ಕೆ ಸೇರಿದ ಒಬ್ಬರನ್ನು ಮಕ್ಕ ಪಟ್ಟಣಕ್ಕೆ ಕಳುಹಿಸಲು ಹಝ್ರತ್ ಪೈಗಂಬರ್(ಸ) ಉದ್ದೇಶಿಸಿದರು. ಎಂದರೆ ಈ ಅವಸ್ಥೆಯಲ್ಲೂ ಅವರು ಸಂಧಾನದ ಪ್ರಯತ್ನವನ್ನು ಕೈಬಿಟ್ಟಿರಲಿಲ್ಲ. ಮಾತ್ರವಲ್ಲ, ಮಕ್ಕಕ್ಕೆ ಹೋಗಿ ಮುಸ್ಲಿಮರ ಪರವಾಗಿ ದೂತನ ಕರ್ತವ್ಯವನ್ನು ನೆರವೇರಿಸಲು ಹಝ್ರತ್ ಪೈಗಂಬರ್(ಸ) ಹಝ್ರತ್ ಉಮರ್ ಬಿನ್ ಖತ್ತಾಬ್‌ರೊಡನೆ(ರ) ಹೇಳಿದರು. ಹಝ್ರತ್ ಉಮರ್(ರ) ಹೇಳಿದರು: ಯಾ ರಸೂಲಲ್ಲಾಹ್, ಮಕ್ಕದ ಜನರು ನನ್ನ ಕಠಿಣ ಶತ್ರುವಾಗುತ್ತಿದ್ದಾರೆ. ಈಗ ಮಕ್ಕದಲ್ಲಿ ಮಕ್ಕದ ಜನರ ಮೇಲೆ ನನ್ನ ಗೋತ್ರದ ಪ್ರಭಾವಶಾಲಿಯಾದ ಯಾರೂ ಇಲ್ಲ. ಆದ್ದರಿಂದ ವಿಜಯದ ಮಾರ್ಗವನ್ನು ಸುಲಭಗೊಳಿಸಲು ಈ ಕೆಲಸಕ್ಕಾಗಿ ಉಸ್ಮಾನ್‌ರನ್ನು(ರ) ಆಯ್ಕೆ ಮಾಡುವುದು ಒಳಿತು. ಏಕೆಂದರೆ ಹಝ್ರತ್ ಉಸ್ಮಾನ್‌ರ(ರ) ಗೋತ್ರವಾದ ಬನೂ ಉಮಯ್ಯ ಆಗ ತುಂಬ ಪ್ರಭಾವಶಾಲಿಯಾಗಿತ್ತು. ಆದ್ದರಿಂದ ಮಕ್ಕಾದವರು ಉಸ್ಮಾನ್‌ರ(ರ) ವಿರುದ್ಧ ಹಿಂಸೆ ಮಾಡಲು ಧೈರ್ಯಪಡಲಾರರು ಮತ್ತು ಅವರು ಈ ಕಾರ್ಯದಲ್ಲಿ ಯಶಸ್ವಿಯಾಗುವರು ಎಂಬ ಹೆಚ್ಚಿನ ಪ್ರತೀಕ್ಷೆಯಿತ್ತು. ಹಝ್ರತ್ ಪೈಗಂಬರ್(ಸ) ಈ ಸಲಹೆಯನ್ನು ಇಷ್ಟಪಟ್ಟರು. ಮುಸ್ಲಿಮರ ಶಾಂತಿಪೂರ್ಣವಾದ ಸದುದ್ದೇಶದ ಮತ್ತು ಉಮ್ರ ಮಾಡುವ ಉದ್ದೇಶದ ಬಗ್ಗೆ ಖುರೈಶಿಯರಿಗೆ ತಿಳಿಸಲಿಕ್ಕಾಗಿ ಮಕ್ಕಕ್ಕೆ ಹೋಗಲು ಹಝ್ರತ್ ಉಸ್ಮಾನ್‌ರೊಡನೆ(ರ) ಹಝ್ರತ್ ಪೈಗಂಬರ್(ಸ) ಹೇಳಿದರು. ಖುರೈಶೀ

ಸರದಾರರ ಹೆಸರಲ್ಲಿ ಒಂದು ಪತ್ರವನ್ನು ಸಹ ಬರೆದುಕೊಟ್ಟರು. ಆ ಪತ್ರದಲ್ಲಿ ಹಝ್ರತ್ ಪೈಗಂಬರ್(ಸ) ತನ್ನ ಬರುವಿಕೆಯ ಉದ್ದೇಶವನ್ನು ಹೇಳಿದ್ದರು ಮತ್ತು "ನಮ್ಮ ಉದ್ದೇಶ ಒಂದು ಆರಾಧನೆಯ ಅನುಷ್ಠಾನವಾಗಿದೆ ಹಾಗೂ ನಾವು ಶಾಂತಿಪೂರ್ಣವಾಗಿ ಉಮ್ರ ನಿರ್ವಹಿಸಿ ಮರಳಿಹೋಗುವೆವು" ಎಂದು ಖುರೈಶಿಯರಿಗೆ ಭರವಸೆ ಕೊಟ್ಟಿದ್ದರು. ಮಕ್ಕದಲ್ಲಿರುವ ದುರ್ಬಲ ಮುಸ್ಲಿಮರನ್ನು ಭೇಟಿಯಾಗಲು ಪ್ರಯತ್ನ ಮಾಡಲು, ಅವರಿಗೆ ಧೈರ್ಯಕೊಡಲು, ಅವರೊಡನೆ ಸಹನೆಯಿಂದ ಇರಲು ಮತ್ತು ಅಲ್ಲಾಹನು ಬೇಗನೇ ವಿಜಯದ ಬಾಗಿಲು ತೆರೆಯುವನು ಎಂದು ಹೇಳಲು ಹಝ್ರತ್ ಪೈಗಂಬರ್(ಸ) ಹಝ್ರತ್ ಉಸ್ಮಾನ್‌ರಿಗೆ ನಿರ್ದೇಶನ ಕೊಟ್ಟರು. ಈ ಸಂದೇಶದೊಂದಿಗೆ ಹಝ್ರತ್ ಉಸ್ಮಾನ್(ರ) ಮಕ್ಕಕ್ಕೆ ಹೋದರು ಮತ್ತು ಆ ಕಾಲದಲ್ಲಿ ಮಕ್ಕದ ಹಿರಿಯ ಸರದಾರನಾದ ಹಾಗೂ ಹಝ್ರತ್ ಉಸ್ಮಾನ್‌ರ ನಿಕಟ ಸ್ನೇಹಿತನೂ ಆಗಿದ್ದ ಅಬೂಸುಫ್‌ಯಾನನ್ನು ಭೇಟಿಯಾಗಿ ಮಕ್ಕಾ ನಿವಾಸಿಗಳ ಒಂದು ಸಾರ್ವಜನಕ ಸಭೆಯ ಮುಂದೆ ನಿಂತರು. ಈ ಸಭೆಯಲ್ಲಿ ಹಝ್ರತ್ ಉಸ್ಮಾನ್(ರ) ಹಝ್ರತ್ ಪೈಗಂಬರರ(ಸ) ಪತ್ರವನ್ನು ಮುಂದಿರಿಸಿದರು. ಅದನ್ನು ಖುರೈಶಿಗಳ ಹಲವಾರು ಸರದಾರರು ಒಬ್ಬೊಬ್ಬರಾಗಿ ನೋಡಿದರು. ಆದರೆ ಹೇಗಿದ್ದರೂ ಮುಸ್ಲಿಮರು ಈ ವರ್ಷ ಮಕ್ಕ ಪ್ರವೇಶಿಸಬಾರದೆಂಬ ಹಟವನ್ನು ಖುರೈಶಿಗಳು ಬಿಡಲಿಲ್ಲ. ಹಝ್ರತ್ ಉಸ್ಮಾನ್(ರ) ಒತ್ತಾಯಪಡಿಸಿದಾಗ ಖುರೈಶಿಯರು ಹೇಳಿದರು: 'ನಿಮಗೆ ಹೆಚ್ಚು ಆಸಕ್ತಿಯಿರುವುದಾದರೆ, ಕಅ್‌ಬದ ತವಾಫ್ ಮಾಡುವ ಅವಕಾಶವನ್ನು ನಿಮಗೆ ಮಾತ್ರ ಕೊಡುವೆವು. ಅದಕ್ಕಿಂತ ಹೆಚ್ಚೇನೂ ಮಾಡಲು ಸಾಧ್ಯವಲ್ಲ' ಹಝ್ರತ್ ಉಸ್ಮಾನ್(ರ) ಹೇಳಿದರು: 'ಹಝ್ರತ್ ಪೈಗಂಬರರನ್ನು(ಸ) ಮಕ್ಕದ ಹೊರಗೆ ತಡೆದು ನಿಲ್ಲಿಸಿ ನಾನು ಹೇಗೆ ತವಾಫ್ ಮಾಡಲಿ.' ಆದರೆ ಖುರೈಶಿಯರು ಯಾವ ರೀತಿಯಲ್ಲೂ ಸಮ್ಮತಿಸಲಿಲ್ಲ. ಕೊನೆಗೆ ಹಝ್ರತ್ ಉಸ್ಮಾನ್(ರ) ನಿರಾಶೆಗೊಂಡು ಮರಳಿಹೋಗಲು ತಯಾರಿ ಮಾಡಿದರು. ಈ ಸಂದರ್ಭದಲ್ಲಿ ಹಝ್ರತ್ ಉಸ್ಮಾನ್‌ರನ್ನು(ರ) ಮತ್ತು ಅವರ ಸಂಗಡಿಗರನ್ನು ಮಕ್ಕದಲ್ಲೇ ತಡೆದಿಡುವ ಚೇಷ್ಟೆಯನ್ನು ಮಕ್ಕದ ದುಷ್ಟರು ಮಾಡಿದರು. ಇದರಿಂದ ಸಂಧಾನದ ವೇಳೆ ಖುರೈಶಿಗಳಿಗೆ ಪ್ರಯೋಜನಕರವಾದ ಶರತ್ತುಗಳನ್ನು ಇರಿಸಬಹುದೆಂದು ಅವರು ಭಾವಿಸಿರಬಹುದು. ಹೀಗೆ ಅವರು ಹಝ್ರತ್ ಉಸ್ಮಾನ್‌ರನ್ನು ಮತ್ತು ಅವರ ಸಂಗಡಿಗರನ್ನು ಮಕ್ಕದಲ್ಲಿ ತಡೆದರು. ಮಕ್ಕದವರು ಹಝ್ರತ್ ಉಸ್ಮಾನ್‌ರನ್ನು(ರ) ಕೊಂದರು ಎಂಬ ವದಂತಿ ಮುಸ್ಲಿಮರ ಎಡೆಯಲ್ಲಿ ಹರಡಿತು. ಈ ವಾರ್ತೆಯನ್ನು ಕೇಳಿ ಹಝ್ರತ್ ಪೈಗಂಬರ್(ಸ) ಸಹ ಬಹಳ ದುಃಖಿತರಾದರು ಮತ್ತು ಕೋಪಗೊಂಡರು. ಹೀಗೆ ಅವರು ಅಲ್ಲಿ ಬೈಅತೇ ರಿಝ್ವಾನ್ ಮಾಡಿಸಿದರು. ಇದರ ಬಗ್ಗೆ ಹೀಗೆ ಬರೆಯಲಾಗಿದೆ:

ಈ ವಾರ್ತೆ ಹುದೈಬಿಯಕ್ಕೆ ಮುಟ್ಟಿದಾಗ ಮುಸ್ಲಿಮರು ತೀವ್ರವಾಗಿ ಆವೇಶಭರಿತರಾದರು. ಏಕೆಂದರೆ ಹಝ್ರತ್ ಉಸ್ಮಾನ್(ರ) ಹಝ್ರತ್ ಪೈಗಂಬರರ(ಸ) ಅಳಿಯರಾಗಿದ್ದರು ಮತ್ತು ಆದರಣೀಯ ಸಹಾಬಿಯರಲ್ಲಿ ಒಬ್ಬರಾಗಿದ್ದರು ಹಾಗೂ ಮುಸ್ಲಿಮರ ಪರವಾಗಿ ದೂತರಾಗಿ ಹೋಗಿದ್ದರು. ಮಾತ್ರವಲ್ಲ ಆ ದಿನಗಳು ಪವಿತ್ರ ತಿಂಗಳುಗಳ ದಿನಗಳಾಗಿದ್ದುವು ಮತ್ತು ಮಕ್ಕವು ಕಅ್‌ಬವಿರುವ ಸ್ಥಳವೂ ಆಗಿತ್ತು. ಮುಸ್ಲಿಮರನ್ನು ಒಂದು ಬಬೂಲ್ ಮರದ ಕೆಳಗೆ ಬಂದುಸೇರಲು ಹಝ್ರತ್ ಪೈಗಂಬರ್(ಸ) ಘೋಷಿಸಿ ಬೇಗನೇ ಒಟ್ಟುಗೂಡಿಸಿದರು ಮತ್ತು ಹೀಗೆ ಹೇಳಿದರು: ಈ ವಾರ್ತೆ ಸರಿಯೆಂದಾದರೆ, ಅಲ್ಲಾಹನಾಣೆ, ಉಸ್ಮಾನ್‌ರ ಕೊಲೆಯ ಪ್ರತಿಕಾರವನ್ನು ತೀರಿಸುವ ವರೆಗೆ ನಾವು ಇಲ್ಲಿಂದ ಸರಿಯುವುದಿಲ್ಲ. ಅನಂತರ ಹಝ್ರತ್ ಪೈಗಂಬರ್(ಸ) ಸಹಾಬರೊಡನೆ ಹೇಳಿದರು: ಬನ್ನಿರಿ ಮತ್ತು ನನ್ನ ಕೈಯ ಮೇಲೆ ಕೈಗಳನ್ನು ಇಟ್ಟುಕೊಂಡು ಹೀಗೆ ಪ್ರತಿಜ್ಞೆ ಮಾಡಿರಿ: ನಿಮ್ಮಲ್ಲಿ ಯಾರೂ ಹಿಮ್ಮೆಟ್ಟಲಾರೆವು ಮತ್ತು ಜೀವ ತ್ಯಾಗ ಮಾಡಲು ತಯಾರಾಗುವೆವು, ಆದರೆ ತನ್ನ ಜಾಗವನ್ನು ಬಿಟ್ಟುಹೋಗಲಾರೆವು. ಹೀಗೆ ಘೋಷಿಸಲ್ಪಟ್ಟಾಗ, ಸಹಾಬಿಯರು ಒಬ್ಬರ ಮೇಲೆ ಇನ್ನೊಬ್ಬರು ಬೀಳುವ ರೀತಿಯಲ್ಲಿ ಅವಸರದಲ್ಲಿ ಮುಂದೆ ಬರುತ್ತಿದ್ದರು. ಹೀಗೆ ಆಗ ಮುಸ್ಲಿಮರಾಗಿದ್ದ 1500ರಷ್ಟು ಜನರು ಪ್ರಿಯ ಪ್ರವಾದಿಯ ಕೈಯಲ್ಲಿ ಕೈಯಲ್ಲಿ ಎರಡನೇ ಬಾರಿ ಮಾರಲ್ಪಟ್ಟರು. ಎಂದರೆ ಎರಡನೇ ಬಾರಿ ಅವರು ನಿಷ್ಠೆಯ ಬೈಅತ್ ಮಾಡಿದರು. ಬೈಅತ್ ನಡೆಯುತ್ತಿರುವಾಗ ಹಝ್ರತ್ ಪೈಗಂಬರ್(ಸ) ತನ್ನ ಎಡಗೈಯನ್ನು ಬಲಗೈಯ ಮೇಲೆ ಹಾಕಿಕೊಂಡು ಹೇಳಿದರು: ಇದು ಉಸ್ಮಾನ್‌ರ(ರ) ಕೈಯಾಗಿದೆ. ಏಕೆಂದರೆ ಅವರು ಇಲ್ಲಿ ಇರುತ್ತಿದ್ದರೆ ಈ ಪರಿಶುದ್ಧವಾದ ಕಾರ್ಯದಲ್ಲಿ ಅವರು ಮುಂದಿರುತ್ತಿದ್ದರು. ಆದರೆ ಈಗ ಅವರು ಅಲ್ಲಾಹನ ಮತ್ತು ಅವನ ಪ್ರವಾದಿಯ ಕೆಲಸದಲ್ಲಿ ನಿರತರಾಗಿದ್ದಾರೆ. ಹೀಗೆ ಈ ಅದ್ಭುತಕವಾದ ದೃಶ್ಯ ಮುಕ್ತಾಯವಾಯಿತು.

ಇಸ್ಲಾಮಿನ ಚರಿತ್ರೆಯಲ್ಲಿ ಈ ಬೈಅತ್ ಬೈಅತೇ ರಿಝ್ವಾನಿನ ಹೆಸರಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ಎಂದರೆ ಮುಸ್ಲಿಮರು ಅಲ್ಲಾಹನ ಪರಿಪೂರ್ಣ ಸಂಪ್ರೀತಿಯ ವರದಾನವನ್ನು ಪಡೆದಿದ್ದ ಬೈಅತ್. ಪವಿತ್ರ ಖುರ್‌ಆನ್ ಸಹ ಈ ಬೈಅತಿನ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸಿದೆ. ಅದು ಹೀಗೆ ಹೇಳುತ್ತದೆ **ಲಖದ್ ರಝಿಯಲ್ಲಾಹು ಅನಿಲ್ ಮುಮಿನೀನ ಇಝ್ ಯುಬಾಇಯೂನಕ ತಹ್‌ತಶ್ಶಜರತಿ ಫಲಿಮ ಮಾ ಫೀ ಖುಲೂಬಿಹಿಮ್ ಫನ್‌ಝಲಸ್ಸಕೀನತ ಅಲೈಹಿಮ್ ವಆಸಾಬಹುಮ್ ಫತ್‌ಹನ್ ಖರೀಬ.** (ಅಲ್‌ಫತಹ್:19) ಎಂದರೆ, ಆ ವೃಕ್ಷದ ಕೆಳಗೆ ಸತ್ಯವಿಶ್ವಾಸಿಗಳು ನಿನ್ನೊಡನೆ ನಿಷ್ಠೆಯ ಪ್ರತಿಜ್ಞೆಯ ಮಾಡಿದಾಗ ಅಲ್ಲಾಹನು ಅವರ ಬಗ್ಗೆ ಸಂಪ್ರೀತನಾಗಿದ್ದನು. ಅವರ ಹೃದಯಾಂತರಾಳದಲ್ಲಿ ಏನು ಇತ್ತೆಂದು ಅವನಗೆ ತಿಳಿದಿತ್ತು. ಹಾಗೆ ಅವನು ಅವರಿಗೆ ಮನಶ್ಶಾಂತಿ ಪ್ರದಾನ ಮಾಡಿದನು. ಶೀಘ್ರದಲ್ಲೇ ಒಂದು ವಿಜಯವನ್ನೂ ಅವರಿಗೆ ಪ್ರತಿಫಲವಾಗಿ ನೀಡಿದನು.

ಸಹಾಬಿಯರು ಸಹ ಈ ಬೈಅತ್ತಿನ ಬಗ್ಗೆ ಬಹಳ ಗೌರವಭಾವದಿಂದ ಮತ್ತು ಪ್ರೀತಿಯಿಂದ ಹೇಳುತ್ತಿರುತ್ತಿದ್ದರು. ಅವರಲ್ಲಿ ಹೆಚ್ಚಿನವರು ನಂತರ ಮುಸ್ಲಿಮರಾದ ಜನರೊಡನೆ ಹೀಗೆ ಹೇಳುತ್ತಿದ್ದರು: ನೀವಂತು ಮಕ್ಕಾ ವಿಜಯವನ್ನು ವಿಜಯವೆಂದು ಭಾವಿಸುತ್ತೀರಿ ಆದರೆ ನಾವು ಬೈಅತೇ ರಿಝ್ವಾನನ್ನೇ ವಿಜಯವೆಂದು ಭಾವಿಸುತ್ತೇವೆ. ಈ ಬೈಅತ್ ಒಂದು ಮಹತ್ತಾದ ವಿಜಯವಾಗಿತ್ತು ಎಂಬುದರಲ್ಲಿ ಸಂಶಯವಿಲ್ಲ. ಏಕೆಂದರೆ ಇದು ಬರಲಿರುವ ವಿಜಯಗಳ ಬಾಗಿಲುಗಳನ್ನು ತೆರೆಯಿತು ಎಂದು ಮಾತ್ರವಲ್ಲ ಇದರಿಂದ ಇಸ್ಲಾಮಿನ ಯಥಾರ್ಥ ತಿರುಳು ಅತ್ಯಂತ ವೈಭವಶಾಲಿ ರೂಪದಲ್ಲಿ ಪ್ರಕಟವಾಯಿತು. ಮುಸ್ಲಿಮರ ಪ್ರವಾದಿ ಮತ್ತು ಅವರು ತಂದ ಸತ್ಯತೆಗಾಗಿ ಪ್ರತಿಯೊಂದು ಮೈದಾನದಲ್ಲಿ ಮತ್ತು ಈ ಮೈದಾನದ ಪ್ರತಿಯೊಂದು ಹೆಜ್ಜೆಯಲ್ಲಿ ಜೀವನ್ಮರಣರ ವ್ಯಾಪಾರ ಮಾಡಲು ತಯಾರಿದ್ದೇವೆ ಎಂದು ಇಸ್ಲಾಮಿನ ತ್ಯಾಗಿಗಳು ತಮ್ಮ ಕೃತ್ಯಗಳಿಂದ ತೋರಿಸಿಕೊಟ್ಟರು. ಇದು ಮರಣಕ್ಕೆ ತಯಾರಿದ್ದೇವೆ ಎಂಬ ಪ್ರತಿಜ್ಞೆಯನ್ನು ಹೊಂದಿದ್ದ ಬೈಅತ್ ಆಗಿತ್ತೆಂದು ಇದರ ಬಗ್ಗೆ ಪ್ರಸ್ತಾಪಿಸುವಾಗ ಸಹಾಬಿಯರು ಹೇಳುತ್ತಿದ್ದರು. ಎಂದರೆ ಪ್ರತಿಯೊಬ್ಬ ಮುಸ್ಲಿಮ್ ಇಸ್ಲಾಮಿಗಾಗಿ ಮತ್ತು ಇಸ್ಲಾಮಿನ ಗೌರವಕ್ಕಾಗಿ ಜೀವದೊಂದಿಗೆ ಹೋರಾಡುವೆವು ಮತ್ತು ಅದರಿಂದ ಹಿಂದೆ ಸರಿಯಲಾರೆವು ಎಂಬ ಪ್ರತಿಜ್ಞೆಯನ್ನು ಒಳಗೊಂಡ ಬೈಅತ್ ಆಗಿತ್ತು. ಇದರೊಂದು ವಿಶೇಷವಾದ ಮಗ್ಗುಲು ಏನಾಗಿತ್ತೆಂದರೆ, ಈ ಪ್ರತಿಜ್ಞೆ ತಾತ್ಕಾಲಿಕವಾದ ಆವೇಶದ ಅವಸ್ಥೆಯಲ್ಲಿ ಮಾಡಲಾಗುವ ಕೇವಲ ಬಾಯಿಮಾತಿನದ್ದಾಗಿರಲಿಲ್ಲ. ಬದಲಿಗೆ ಹೃದಯದ ಒಳಗಿನಿಂದ ಹೊರಟ ಸ್ವರವಾಗಿತ್ತು. ಅದರ ಹಿಂದೆ ಮುಸ್ಲಿಮರ ಸಕಲ ಶಕ್ತಿ ಏಕ ಕೇಂದ್ರಬಿಂಧುವಿನ ಮೇಲೆ ಬಂದುಸೇರಿತ್ತು.

ಖುರೈಶಿಗಳಿಗೆ ಈ ಬೈಅತಿನ ಸುದ್ದಿ ತಲುಪಿದಾಗ ಅವರು ಭಯಗೊಂಡರು. ಅವರು ಹಝ್ರತ್ ಉಸ್ಮಾನ್(ರ) ಮತ್ತು ಅವರ ಸಂಗಡಿಗರನ್ನು ಬಿಡುಗಡೆಗೊಳಿಸಿದರು ಎಂದು ಮಾತ್ರವಲ್ಲ, ಹೇಗಾದರೂ ಮುಸ್ಲಿಮರೊಡನೆ ಒಪ್ಪಂದ ಮಾಡಲು ತಮ್ಮ ಪ್ರತಿನಿಧಿಗಳಿಗೆ ನಿರ್ದೇಶನ ಕೊಟ್ಟರು. ಆದರೆ ಈ ವರ್ಷದ ಬದಲಿಗೆ ಮುಂದಿನ ವರ್ಷ ಮುಸ್ಲಿಮರು ಉಮ್ರ ಮಾಡಿದರಾಯಿತು ಹೇಗಿದ್ದರೂ ಈಗ ವಾಪಾಸ್ಸು ಹೋಗಬೇಕು ಎಂಬ ಶರತ್ತನ್ನು ಇರಿಸಿದ್ದರು. ಇನ್ನೊಂದು ಕಡೆ, ಪರಿಶುದ್ಧ ತಿಂಗಳು ಮತ್ತು ಬೈತುಲ್ಲಾಹ್‌ದ ಗೌರವಕ್ಕೆ ವಿರುದ್ಧವಾದ ಏನನ್ನೂ ಮಾಡಲಾರೆನು ಎಂದು ಹಝ್ರತ್ ಪೈಗಂಬರ್(ಸ) ಆರಂಭದಿಂದಲೇ ಪ್ರತಿಜ್ಞೆ ಮಾಡಿದ್ದರು. ಏಕೆಂದರೆ ಈ ಸಂದರ್ಭದಲ್ಲಿ ಮಾಡಲಾಗುವ ಮೈತ್ರಿ ಸಂಧಾನ ಮುಂದೆ ಬರುವ ವಿಜಯಗಳಿಗೆ ಮುನ್ನುಡಿಯಾಗುವುದು ಎಂದು ಅಲ್ಲಾಹನು ಹಝ್ರತ್ ಪೈಗಂಬರರಿಗೆ ಸುವಾರ್ತೆ ನೀಡಿದ್ದನು.ಆದ್ದರಿಂದ ಉಭಯ ಪಕ್ಷಗಳಿಗೆ ಈ ಸಂಧಾನದ ಪರಿಸ್ಥಿತಿ ಒಂದು ಉತ್ತಮ ಪರಿಸ್ಥಿತಿಯಾಗಿತ್ತು. ಇಂತಹ ಒಂದು ವಾತಾವರಣದಲ್ಲಿ ಸುಹೈಲ್ ಬಿನ್ ಅಮ್ರ್ ಹಝ್ರತ್ ಪೈಗಂಬರರ(ಸ) ಬಳಿಗೆ ತಲುಪಿದರು. ಹಝ್ರತ್ ಪೈಗಂಬರ್(ಸ) ಅವರನ್ನು ಕಂಡೊಡನೆ, ಈಗ ಸಂಗತಿ ಸುಲಭವಾಗುವುದು ಎಂದು ತೋರುತ್ತದೆ ಎಂದು ಹೇಳಿದ್ದರು. ಸಂಧಾನದ ಮಾತುಕತೆ ಶುರುವಾಯಿತು. ಸುಹೈಲ್ ಬಿನ್ ಅಮ್ರ್ ಹಝ್ರತ್ ಪೈಗಂಬರರ(ಸ) ಮುಂದೆ ಬಂದರು. ಅವರನ್ನು ಕಂಡೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು: ಸುಹೈಲ್ ಬರುತ್ತಿದ್ದಾನೆ. ಈಗ ಅಲ್ಲಾಹನು ಇಚ್ಛಿಸುವುದಾದರೆ ಸಂಗತಿ ಸುಲಭವಾಗುವುದು. ಹೇಗಿದ್ದರೂ ಸುಹೈಲ್ ಬಂದೊಡನೆ ಹಝ್ರತ್ ಪೈಗಂಬರರೊಡನೆ(ಸ) ಹೇಳಿದರು: ಬನ್ನಿರಿ, ದೀರ್ಘವಾದ ಚರ್ಚೆಯ ಆವಶ್ಯಕತೆಯಿಲ್ಲ. ನಾವು ಒಪ್ಪಂದಕ್ಕೆ ತಯಾರಾಗಿದ್ದೇವೆ. ಹಝ್ರತ್ ಪೈಗಂಬರ್(ಸ) ಹೇಳಿದರು: ನಾವು ಸಹ ತಯಾರಿದ್ದೇವೆ. ಹೀಗೆ ಹೇಳಿದ ನಂತರ ಹಝ್ರತ್ ಪೈಗಂಬರ್(ಸ) ತನ್ನ ಸೆಕ್ರಟರಿಯಾದ ಹಝ್ರತ್ ಅಲಿಯನ್ನು ಕರೆದರು. ಈ ಒಪ್ಪಂದದ ಶರತ್ತುಗಳು ಕೆಳಗಿನಂತಿವೆ:

ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಚರರು ಈ ವರ್ಷ ಮರಳಿಹೋಗಬೇಕು. ನಂತರದ ವರ್ಷ ಮಕ್ಕಕ್ಕೆ ಬಂದು ಉಮ್ರ ನಿರ್ವಹಿಸಬಹುದು. ಆದರೆ ಕವಚದಲ್ಲಿ ಹಾಕಲಾದ ಖಡ್ಗಗಳ ಹೊರತು ಬೇರೆ ಆಯುಧಗಳು ಜೊತೆಗೆ ಇರಬಾರದು ಮತ್ತು ಮಕ್ಕದಲ್ಲಿ ಮೂರು ದಿನಗಳಿಗಿಂತ ಹೆಚ್ಚು ತಂಗಬಾರದು.

ಮಕ್ಕದ ಪುರುಷರಲ್ಲಿ ಯಾವನಾದರೂ ಮದೀನಕ್ಕೆ ಹೋದರೆ, ಅವನು ಮುಸ್ಲಿಮನಾದರೂ ಸರಿ, ಅವನಿಗೆ ಹಝ್ರತ್ ಪೈಗಂಬರ್(ಸ) ಅಭಯ ಕೊಡಬಾರದು ಮತ್ತು ಮರಳಿಸಬೇಕು. ಆದರೆ ಮುಸ್ಲಿಮನಾದ ಯಾವನಾದರೂ ಮದೀನ ಬಿಟ್ಟು ಮಕ್ಕಕ್ಕೆ ಹೋದರೆ ಅವನನ್ನು ಮರಳಿಸಲಾಗುವುದಿಲ್ಲ. ಇನ್ನೊಂದು ವರದಿಯಲ್ಲಿ ಹೀಗಿದೆ: ಮಕ್ಕಾನಿವಾಸಿಯರಲ್ಲಿ ಯಾರಾದರೂ ಗಾರ್ಡಿಯನಿನ ಎಂದರೆ ಪಾಲಕನ ಅನುಮತಿಯಿಲ್ಲದೆ ಮದೀನಕ್ಕೆ ಬಂದರೆ ಅವನನ್ನು ಮರಳಿ ಕಳುಹಿಸಬೇಕಾಗುವುದು. ಅರೇಬಿಯರ ಗೋತ್ರಗಳಲ್ಲಿ ಯಾವುದೇ ಗೋತ್ರ ಬೇಕಾದರೂ ಮುಸ್ಲಿಮರ ಅಥವಾ ಮಕ್ಕಾ ನಿವಾಸಿಯರ ಸಹಾಯಕರಾಗಬಹುದು. ಈ ಒಪ್ಪಂದ ಸದ್ಯದಲ್ಲಿ ಹತ್ತು ವರ್ಷಕ್ಕೆ ಆಗಿರುವುದು. ಈ ಕಾಲಾವಧಿಯಲ್ಲಿ ಖುರೈಶಿಯರ ಮತ್ತು ಮುಸ್ಲಿಮರ ಎಡೆಯಲ್ಲಿ ಯುದ್ಧ ಸ್ಥಗಿತಗೊಂಡಿರುವುದು.

ಈ ಒಪ್ಪಂದದ ಎರಡು ನಕಲು ಪ್ರತಿಗಳನ್ನು ಮಾಡಲಾಗಿತ್ತು. ಸಾಕ್ಷಿಯೆಂಬ ನೆಲೆಯಲ್ಲಿ ಉಭಯ ಪಕ್ಷಗಳ ಹಲವಾರು ಗೌರವಾನ್ವಿತರು ಅದರಲ್ಲಿ ಸಹಿ ಮಾಡಿದ್ದರು. ಮುಸ್ಲಿಮರ ಕಡೆಯಿಂದ ಹಝ್ರತ್ ಅಬೂಬಕ್ಕರ್, ಹಝ್ರತ್ ಉಮರ್, ಹಝ್ರತ್ ಉಸ್ಮಾನ್, ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್, ಸಅದ್ ಬಿನ್ ಅಬೀ ವಖಾಸ್ ಮತ್ತು ಅಬೂಉಬೈದ ಒಪ್ಪಂದದಲ್ಲಿ ಸಹಿ ಮಾಡಿದರು.ಈ ವೇಳೆಗೆ ಹಝ್ರತ್ ಉಸ್ಮಾನ್ ಮಕ್ಕದಿಂದ ಮರಳಿಬಂದಿದ್ದರು. ಸತ್ಯನಿಷೇಧಿಗಳು ಆ ಸಮಯದಲ್ಲಿ ಅವರನ್ನು ಬಿಡುಗಡೆಗೊಳಿಸಿದ್ದರು. ಈ ಒಪ್ಪಂದ ಮಾಡಲಾದ ನಂತರ ಸುಹೈಲ್ ಬಿನ್ ಅಮ್ರ್ ಒಪ್ಪಂದದ ಒಂದು ನಕಲು ಪ್ರತಿಯನ್ನು ತೆಗೆದುಕೊಂಡು ಮಕ್ಕದ ಕಡೆಗೆ ಮರಳಿಹೋದರು. ಮತ್ತೊಂದು ನಕಲು ಪ್ರತಿ ಹಝ್ರತ್ ಪೈಗಂಬರರ(ಸ) ಬಳಿಯಿತ್ತು.

(ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಎಂ.ಎ, ಪುಟ-749-769)

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಘಟನೆಯನ್ನು ತನ್ನ ಶೈಲಿಯಲ್ಲಿ ಹೀಗೆ ಹೇಳಿದ್ದಾರೆ: ಮುಸ್ಲಿಮರು ಕೇವಲ ತವಾಫ್ ಮಾಡಲಿಕ್ಕೆ ಬಂದಿರುವರು, ಅವರನ್ನು ಏಕೆ ತಡೆಯಬೇಕು ಎಂದು ಆಸುಪಾಸಿನ ಜನರು ಮಕ್ಕದೊಂದಿಗೆ ಕೇಳಿದರು. ಆದರೆ ಮಕ್ಕಾದವರು ತಮ್ಮ ಹಟವನ್ನು ಬಿಡಲಿಲ್ಲ. ನಿಮ್ಮ ಉದ್ದೇಶ ಗಲಭೆ ಉಂಟುಮಾಡುವುದಾಗಿದೆ. ಸಂಧಾನ ಮಾಡುವ ಉದ್ದೇಶ ನಿಮಗೆ ಇಲ್ಲವೆಂದು ನಿಮ್ಮ ಈ ರೀತಿಯಿಂದ ಗೊತ್ತಾಗುತ್ತದೆ ಎಂದು ಹೊರಗಿನ ಗೋತ್ರದವರು ಮಕ್ಕದವರೊಡನೆ ಹೇಳಿದರು. ಇದು ಮುಸ್ಲಿಹ್ ಮೌಊದ್ ಹೇಳಿರುವ ಹೊಸದಾದೊಂದು ವಿಷಯವಾಗಿದೆ. ಎಂದರೆ ಆಸುಪಾಸಿನ ಗೋತ್ರಗಳ ಒತ್ತಡ ಸಹ ಮಕ್ಕದ ಜನರ ಮೇಲೆ ಇತ್ತು. ಆದ್ದರಿಂದ ಮಕ್ಕದವರು ಹೆದರಿದರು. ಹೀಗೆ ಮುಸ್ಲಿಮರೊಡನೆ ಒಪ್ಪಂದ ಮಾಡಲು ಪ್ರಯತ್ನಿಸಲು ಮಕ್ಕದವರು ತಯಾರಾದರು. ಈ ಸಂಗತಿಯ ಬಗ್ಗೆ ಹಝ್ರತ್ ಪೈಗಂಬರರಿಗೆ(ಸ) ಗೊತ್ತಾದಾಗ, ನಂತರ ಕಾಲದಲ್ಲಿ ಮೂರನೇ ಖಲೀಫರಾದ ಹಝ್ರತ್ ಉಸ್ಮಾನ್‌ರನ್ನು ಮಕ್ಕದವರೊಡನೆ ಮಾತುಕತೆ ನಡೆಸಲು ಕಳುಹಿಸಿದರು. ಹಝ್ರತ್ ಉಸ್ಮಾನ್(ರ) ಮಕ್ಕಾ ತಲುಪಿದಾಗ, ಮಕ್ಕದಲ್ಲಿದ ಅವರ ಹಲವಾರು ಸಂಬಂಧಿಕರು ಅವರ ಸುತ್ತ ಸೇರಿದರು. ನೀವು ತವಾಫ್ ಮಾಡಿರಿ. ಆದರೆ ಮುಹಮ್ಮದ್(ಸ) ಮುಂದಿನ ವರ್ಷ ತವಾಫ್ ಮಾಡಲಿ. ಆದರೆ ನನ್ನ ನೇತಾರರಾದ ಪೈಗಂಬರ್(ಸ) ಇಲ್ಲದೆ ನಾನು ತವಾಫ್ ಮಾಡುವುದಿಲ್ಲ ಎಂದು ಹಝ್ರತ್ ಉಸ್ಮಾನ್(ರ) ಹೇಳಿದರು. ಮಕ್ಕದವರೊಡನೆ ಅವರ ದೀರ್ಘವಾದ ಮಾತುಕತೆ ನಡೆಯುತ್ತಿತ್ತು. ಆಗ ಮಕ್ಕದ ಕೆಲವು ಜನರು, ಹಝ್ರತ್ ಉಸ್ಮಾನ್‌ರನ್ನು ಕೊಲೆ ಮಾಡಲಾಗಿದೆ ಎಂಬ ವದಂತಿಯನ್ನು ತುಂಟತನದಿಂದ ಹರಡಿದರು. ಈ ವದಂತಿ ಹರಡುತ್ತಾ ಹಝ್ರತ್ ಪೈಗಂಬರರ(ಸ) ಕಿವಿಗೂ ತಲುಪಿತು. ಹೀಗೆ ಹಝ್ರತ್ ಪೈಗಂಬರ್(ಸ) ಸಹಾಬರನ್ನು ಒಟ್ಟುಗೂಡಿಸಿ ಹೀಗೆ ಹೇಳಿದರು: ಪ್ರತಿನಿಧಿಯ ಜೀವ ಪ್ರತಿಯೊಂದು ಸಮುದಾಯದಲ್ಲೂ ಸುರಕ್ಷಿತವಾಗಿರುತ್ತದೆ. ಉಸ್ಮಾನ್‌ರನ್ನು ಮಕ್ಕಾದ ಜನರು ಕೊಂದು ಹಾಕಿದ್ದಾರೆ ಎಂದು ಕೇಳಿದ್ದೇವೆ. ಈ ವಾರ್ತೆ ಸತ್ಯವೆಂದಾದರೆ, ನಾವು ಶಕ್ತವಾಗಿ ಮಕ್ಕ ಪಟ್ಟಣವನ್ನು ಪ್ರವೇಶಿಸುವೆವು. ಎಂದರೆ ಮೊದಲಿನ ಸ್ಥಿತಿಯಲ್ಲಿ ನಮ್ಮ ಮೊದಲ ಉದ್ದೇಶ ಸಂಧಾನದೊಂದಿಗೆ ಮಕ್ಕವನ್ನು ಪ್ರವೇಶಿಸುವುದಾಗಿತ್ತು. ಆದರೆ ಪರಿಸ್ಥಿತಿ ಬದಲಾದರೆ, ಈ ಉದ್ದೇಶವನ್ನು ಪಾಲಿಸಬೇಕಾಗಿಲ್ಲ. ನಮಗೆ ಮುಂದಕ್ಕೆ ಧಾವಿಸಬೇಕಾಗಿ ಬರುವುದಾದರೆ, ನಾವು ವಿಜಯಿಯಾಗಿ ಮರಳುವೆವು ಅಥವಾ ಒಬ್ಬರಾಗಿ ಮೈದಾನದಲ್ಲಿ ಸಾಯುವೆವು ಎಂಬ ಪ್ರತಿಜ್ಞೆಯೊಂದಿಗೆ ನನ್ನ ಬೈಅತ್ ಮಾಡಿರಿ. ಹಝ್ರತ್ ಪೈಗಂಬರ್(ಸ) ಹೀಗೆ ಘೋಷಿಸಿದ ಕೂಡಲೇ 1500ರ ಕ್ಕಿಂತ ಹೆಚ್ಚಿನ ಸಹಾಬಿಯರು ಒಂದೇ ಸವನೇ 1500 ಸಿಪಾಯಿಗಳಂತೆ ಆದರು. ಆವೇಶಭರಿತರಾಗಿ ಒಬ್ಬರ ಮೇಲೆ ಮತ್ತೊಬ್ಬರು ಬೀಳುವ ರೀತಿಯಲ್ಲಿ ಹಝ್ರತ್ ಪೈಗಂಬರರ(ಸ) ಕೈಯಲ್ಲಿ ಎಲ್ಲರಿಗಿಂತ ಮುಂಚೆ ಬೈಅತ್ ಮಾಡಲು ಪ್ರಯತ್ನಿಸುತ್ತಿದ್ದರು. ಇಸ್ಲಾಮಿನ ಸಂಪೂರ್ಣ ಚರಿತ್ರೆಯಲ್ಲಿ ಈ ಬೈಅತ್ ಬಹಳ ಪ್ರಮುಖವಾದುದಾಗಿತ್ತು. ಮರದ ಕೆಳಗೆ ಮಾಡಲಾದ ಪ್ರತಿಜ್ಞೆಯೆಂದು ಇದನ್ನು ಹೇಳಲಾಗುತ್ತದೆ. ಈ ಬೈಅತ್ ಮಾಡುವಾಗ ಹಝ್ರತ್ ಪೈಗಂಬರ್(ಸ) ಒಂದು ಮರದ ಕೆಳಗೆ ಕುಳಿತುಕೊಂಡಿದ್ದರು. ಈ ಬೈಅತ್ತಿನಲ್ಲಿ ಭಾಗವಹಿಸಿದ ಕೊನೆಯ ವ್ಯಕ್ತಿ ಕೂಡ ಈ ಲೋಕದಲ್ಲಿ ಜೀವಂತವಿದ್ದ ತನಕ ಈ ಬೈಅತ್ತಿನ ಬಗ್ಗೆ ಹೆಮ್ಮೆಯಿಂದ ಪ್ರಸ್ತಾಪಿಸುತ್ತಿದ್ದರು. ಏಕೆಂದರೆ 1500 ಜನರಲ್ಲಿ ಒಬ್ಬರು ಸಹ ಈ ಬೈಅತ್ ಮಾಡುವುದರಿಂದ ಹಿಂದೆ ಸರಿದಿರಲಿಲ್ಲ. ಶತ್ರುಗಳು ಇಸ್ಲಾಮಿನ ಪ್ರತಿನಿಧಿಯನ್ನು ಕೊಂದುಹಾಕಿದ್ದು ನಿಜವೆಂದಾದರೆ, ಎರಡರಲ್ಲಿ ಒಂದನ್ನು ಖಂಡಿತ ಮಾಡುವೆವು. ಸಂಜೆಗೆ ಮುಂಚಿತವಾಗಿ ಮಕ್ಕದ ಮೇಲೆ ವಿಜಯ ಸಾಧಿಸುವೆವು ಅಥವಾ ಸಂಜೆಯ ಮುಂಚಿತವಾಗಿ ಯುದ್ಧಮೈದಾನದಲ್ಲಿ ಶಹೀದ್ ಆಗುವೆವು ಎಂದು ಅವರು ಪ್ರತಿಜ್ಞೆ ಮಾಡಿದ್ದರು. ಆದರೆ ಮುಸ್ಲಿಮರು ಬೈಅತ್ ಮಾಡಿದ ಕೂಡಲೇ ಹಝ್ರತ್ ಉಸ್ಮಾನ್ ಮರಳಿ ಬಂದರು. ಹಝ್ರತ್ ಉಸ್ಮಾನ್ ಹೇಳಿದರು: ಮಕ್ಕದವರು ಈ ವರ್ಷ ಉಮ್ರ ಮಾಡಲು ಅನುಮತಿ ಕೊಡುತ್ತಿಲ್ಲ. ಆದರೆ ಮುಂದಿನ ವರ್ಷ ಅನುಮತಿ ಕೊಡಲು ತಯಾರಿದ್ದಾರೆ. ಈ ವಿಷಯವಾಗಿ ಒಪ್ಪಂದ ಮಾಡಿಕೊಳ್ಳಲು ಅವರು ಪ್ರತಿನಿಧಿಯನ್ನು ನಿಶ್ಚಯಿಸಿದ್ದಾರೆ. ಹಝ್ರತ್ ಉಸ್ಮಾನ್(ರ) ಬಂದ ಸ್ವಲ್ಪ ಸಮಯದ ನಂತರ ಮಕ್ಕದ ಒಬ್ಬ ಸರದಾರನಾದ ಸುಹೈಲ್ ಎಂಬವನು ಒಪ್ಪಂದ ಮಾಡಿಕೊಳ್ಳಲು ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾದರು. ಹೀಗೆ ಪ್ರತಿಜ್ಞೆಯನ್ನು ಬರೆಯಲಾಯಿತು.

ಹಝ್ರತ್ ಉಸ್ಮಾನ್‌ರ ಪ್ರಸ್ತಾಪ ಮುಂದೆಯೂ ನಡೆಯುವುದು. ಪ್ರಾರ್ಥನೆಗಳ ಕಡೆಗೆ ಈಗಲೂ ನಿಮ್ಮ ಗಮನವನ್ನು ಸೆಳೆಯಲು ಬಯಸುತ್ತೇನೆ. ಪಾಕಿಸ್ತಾನದ ಸ್ಥಿತಿಗತಿಗಳಿಗಾಗಿ ವಿಶೇಷವಾಗಿ ದುಆ ಮಾಡುತ್ತಿರಿ. ಅಹ್ಮದಿಯರು ಮನೆಯ ನಾಲ್ಕು ಗೋಡೆಗಳ ಒಳಗೆ ಸಹ ಈಗ ಸುರಕ್ಷಿತರಲ್ಲ. ಮೌಲವಿಗಳು ಹೇಳುವ ಜಾಗಕ್ಕೆ ಪೋಲೀಸರು ತಲುಪುತ್ತಾರೆ. 'ನಮ್ಮ ಸಹಾನುಭೂತಿ ನಿಮ್ಮೊಂದಿಗೆ ಇದೆ, ಆದರೆ ನಾವು ಏನು ಮಾಡಲಿ, ನಮ್ಮ ಮೇಲೆ ಎಷ್ಟು ಒತ್ತಡ ಹಾಕಲಾಗಿದೆ ಎಂದರೆ, ನಮ್ಮ ಅಧಿಕಾರಿಗಳು ಹೇಳುವುದನ್ನು ನಮಗೆ ಮಾಡಬೇಕಾಗುತ್ತದೆ' ಎಂದು ಹೇಳುವ ಕೆಲವು ಪೋಲೀಸರು ಸಹ ಇದ್ದಾರೆ. ಅಲ್ಲಾಹನು ಇಂತಹ ದುಷ್ಟ ಸ್ವಭಾವದ ಅಧಿಕಾರಿಗಳಿಂದ ನಮ್ಮನ್ನು ಮುಕ್ತಗೊಳಿಸಲಿ, ದೇಶವನ್ನು ರಕ್ಷಿಸಲಿ ಮತ್ತು ಪ್ರತಿಯೊಬ್ಬ ಅಹ್ಮದಿಗೆ ಸ್ವತಂತ್ರವಾಗಿ ಹಾಗೂ ಸುರಕ್ಷಿತವಾದ ರೀತಿಯಲ್ಲಿ ತಮ್ಮ ದೇಶದಲ್ಲಿ ಇರಲು ಸೌಭಾಗ್ಯ ನೀಡಲಿ.

ವಿಶೇಷವಾಗಿ ದುಆ ಮಾಡುತ್ತಿರಿ. ಈ ಪ್ರಾರ್ಥನೆಗಳು ಜಾರಿಯಲ್ಲಿರುವುದಾದರೆ, ಎದುರಾಳಿಗಳು ದಾರುಣವಾದ ಕೊನೆಯನ್ನು ಕಾಣುವರು. ಇನ್ಶಾ ಅಲ್ಲಾಹ್. ಅಲ್ಲಾಹನು ನಮಗೆ ಪ್ರಾರ್ಥನೆಯ ಮಾಡುವ ಸೌಭಾಗ್ಯವನ್ನು ಸಹ ನೀಡಲಿ ಮತ್ತು ಅವುಗಳನ್ನು ಸ್ವೀಕರಿಸಲಿ.

*************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಇಲ್ಲಿ ಒಂದು ಸಮಸ್ಯೆ ಉದ್ಭವವಾಗುತ್ತದೆ ಅದೇನಂದರೆ ತನ್ನ ಸಮುದಾಯದ ಜನರ ಮೇಲೆ ಒಂದು ಮಿತಿಯೊಳಗೆ ಒತ್ತಾಯ ಮಡಬಹುದಾಗಿದೆ ಎಂದು. ಏಕೆಂದರೆ ಅದರಿಂದ ಸಮುದಾಯಕ್ಕೆ ಕೆಟ್ಟ ಹೆಸರು ಬರುವ ಸಂಭವವಿರುತ್ತದೆ. ಅಂದ ಹಾಗೆ ಅದರನ್ವಯ ತನ್ನ ಜಮಾಅತಿನ ಕೆಲ ಜನರ ತಪ್ಪು ನಡೆಯಿಂದಾಗಿ ದಂಡ ಇತ್ಯಾದಿಯ ಶಿಕ್ಷೆ ವಿಧಿಸಲ್ಪಟ್ಟರೆ ಕೆಲ ಮೂಢರು ಅದನ್ನು ಅಂಧವಿಶ್ವಾಸ ಎಂದು ಹೇಳಿ ಕೂಗೆಬ್ಬಿಸುತ್ತಾರೆ. ಅದಾಗ್ಯೂ ಈ ವಚನದಿಂದ ಸಾಬೀತಾಗುವುದೇನೆಂದರೆ ನನ್ನ ಜಮಾಅತಿನ ಜನರ ಮೇಲೆ ಒಂದು ಮಿತಿಯೊಳಗೆ ಒತ್ತಾಯ ಹೇರಬಹುದು ಎಂದು. ಉದಾಹರಣೆಗೆ ಒಬ್ಬ ವ್ಯಕ್ತಿ ಅಹ್ಮದಿ ಎಂದುಕೊಂಡ ಮೇಲು ಕಳ್ಳತನ ಎಸಗುವುದಾದರೆ ಅಥವಾ ನಮಾಝ್ ನಿರ್ವಹಣೆಯನ್ನು ಬಿಟ್ಟು ಬಿಡುವವನಾದರೆ, ಅದರಿಂದ ಇಡೀ ಜಮಾಅತಿಗೆ ಕೆಟ್ಟ ಹೆಸರು ಬರುವ ಕಾರಣದಿಂದಾಗಿ ನಮ್ಮ ಹಕ್ಕಾಗಿರುತ್ತದೆ. ಆ ವ್ಯಕ್ತಿಗೆ ಸುಧಾರಿಸಿಕೊಳ್ಳಲು ಒತ್ತಾಯ ಪಡಿಸಬಹುದು. ಅವನು ಅಹ್ಮದಿಯತ್ ನಿರಾಕರಿಸಿ ಬೇರೆಯಾದರೆ ಅಥವಾ ತನ್ನ ಹೊಸ ಪಂಥವನ್ನಾಗಿ ಮಾಡಿಕೊಂಡರೆ, ಆಗ ಅವನ ಮೇಲೆ ನಮಗೆ ಯಾವ ಹಕ್ಕು ಇರುವುದಿಲ್ಲ. **"ಅಂತುಮ್ ಬರೀಊನ ಮಿಮ್ಮ ಅಅ್‌ಮಲು"** ವಚನದಲ್ಲಿ ತಿಳಿಸಿದಂತೆ ನನ್ನ ಮತ್ತು ನಿಮ್ಮ ದಾರಿಗಳು ಬೇರೆ ಬೇರೆಯಾಗಿವೆ ನನ್ನ ಕರ್ಮಫಲಗಳಿಂದಾಗಿ ನಿಮ್ಮ ಮೇಲೆ ಯಾವ ಅಪವಾದ ಬರಲಾರದು ಆದುದರಿಂದ ಬಲವಂತ ಅಥವಾ ದೌರ್ಜನ್ಯ ಪಡಿಸುವ ಯಾವ ಕಾರಣವೂ ಇಲ್ಲ.

ಈ ವಚನದ ಇನ್ನೊಂದು ಅರ್ಥ ಹೀಗೂ ಇದೆ. ನಮ್ಮ ಮತ್ತು ನಿಮ್ಮ ಕರ್ಮಫಲಗಳು ಸ್ಪಷ್ಟವಾಗಿವೆ. ಅದರಲ್ಲಿ ಯಾವ ಅನುಮಾನವಿಲ್ಲ. ಅದರ ಫಲಿತಾಂಶ ಸ್ವಯಂ ತೋರಿಸಿಕೊಡುವುದು ಯಾರ ಕರ್ಮಫಲಗಳು ಸರಿಯಾಗಿವೆ ಮತ್ತು ಅಲ್ಲಾಹನ ಸನ್ನಿಧಿಯಲ್ಲಿ ಸ್ವೀಕರಿಸಲ್ಪಟ್ಟಿವೆ ಎಂದು. ಕರ್ಮಫಲಗಳು ಸಂಶಯದಾಯಕವಾಗಿದ್ದರೆ ನಿಖರವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಕೆಡುಕು ಅಥವಾ ಪ್ರಗತಿ ಯಾರ ದೆಸೆಯಿಂದ ಉದ್ಭವವಾಗಿದೆ ಎಂದು. ಆದರೆ ಯಾವ ಸಂಶಯವು ಇಲ್ಲದಿರುವಾಗ ಫಲಿತಾಂಶ ಸ್ಪಷ್ಟವಾಗುತ್ತದೆ. ಅದು ಯಾವ ಸಮುದಾಯದ ವಿಶಿಷ್ಟಪೂರ್ಣ ಕರ್ಮಫಲಗಳಾಗಿವೆ ಎಂದು.

**(ತಫ್ಸೀರ್ ಕಬೀರ್ ಸಂ. 3, ಪು 82 ಮುದ್ರಣ ಖಾದಿಯಾನ್ 2010)**

*******************

# ಖುತ್ಬ ಜುಮುಅ

**ಅವರು ಸ್ವರ್ಗವನ್ನು ಖರೀದಿ ಮಾಡಿರುವರು ಎಂದು ಹಝ್ರತ್ ಉಸ್ಮಾನ್ರ(ರ) ಬಗ್ಗೆ ಹಝ್ರತ್ ಪೈಗಂಬರ್(ಸ) ಹೇಳಿದ್ದ ಮೂರು ಸಂದರ್ಭಗಳು ಉಂಟಾಗಿದ್ದುವು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಧುನ್ನೂರೈನ್ ಹಝ್ರತ್ ಉಸ್ಮಾನ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಝಾತುರ್ರಿಖಾ ಯುದ್ಧ, ಫತಹ್ ಮಕ್ಕ, ತಬೂಕ್ ಯುದ್ಧ ಇವುಗಳ ಬಗ್ಗೆ ಕೆಲವು ಘಟನೆಗಳು ಹಾಗೂ ಹಝ್ರತ್ ಉಸ್ಮಾನ(ರ)ರವರ ಖಿಲಾಫತ್ ಕಾಲದಲ್ಲಿ ಉಂಟಾದ ವಿಜಯಗಳ ಬಗ್ಗೆ ಸಂಕ್ಷಿಪ್ತ ಪ್ರಸ್ತಾವನೆ**

---

**ಹಝ್ರತ್ ಪೈಗಂಬರ್(ಸ) ಹೇಳಿದರು: ಇಂದು ರಾತ್ರಿ ಒಬ್ಬ ಸಾತ್ವಿಕನಾದ ವ್ಯಕ್ತಿಗೆ ಕನಸಿನಲ್ಲಿ ಹೀಗೆ ಕಾಣಿಸಲಾಯಿತು: ಹಝ್ರತ್ ಅಬೂಬಕರ್ರನ್ನು(ರ) ಹಝ್ರತ್ ಪೈಗಂಬರ್ರೊಂದಿಗೆ(ಸ) ಜೋಡಿಸಲಾಗಿತ್ತು. ಹಝ್ರತ್ ಉಮರ್ರನ್ನು(ರ) ಹಝ್ರತ್ ಅಬೂಬಕರ್ರೊಂದಿಗೆ(ರ) ಮತ್ತು ಹಝ್ರತ್ ಉಸ್ಮಾನ್ರನ್ನು(ರ) ಹಝ್ರತ್ ಉಮರ್ರೊಂದಿಗೆ(ರ).**

ಅಹ್ಮದಿಯಾ ಮುಸ್ಲಿಮ್ ಜಮಾಅತ್ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್ನ **'ಮಸ್ಜಿದ್ ಮುಬಾರಕ್'** ನಿಂದ **05–02–2021** ರಂದು ನೀಡಿದ **ಜುಮುಅ ಖುತ್ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِينَ ۔ اَلرَّحْمٰنِ الرَّحِيمِ ۔ مٰلِكِ يَوْمِ الدِّينِ ۔

اِيَّاكَ نَعْبُدُ وَاِيَّاكَ نَسْتَعِينُ ۔ اِهْدِنَا الصِّرَاطَ الْمُسْتَقِيمَ ۔

صِرَاطَ الَّذِينَ اَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّآلِّينَ ۔

ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್ಹುರ ಪ್ರಸ್ತಾಪ ನಡೆಯುತ್ತಿದೆ. ಯುದ್ಧಗಳಲ್ಲಿ ಅವರ ಭಾಗವಹಿಸುವಿಕೆಯ ಬಗ್ಗೆ ಪ್ರಸ್ತಾಪಿಸುತ್ತಿದ್ದೆ. ಧಾತುರ್ರಿಖಾಅ್ ಎಂಬ ಹೆಸರಿನ ಒಂದು ಯುದ್ಧ ನಡೆದಿತ್ತು. ನಜದಿನಲ್ಲಿ ಗ಼ತ್ಫಾನಿನ ಗೋತ್ರವಾದ ಬನೂ ಸಅ್ಲಬ ಮತ್ತು ಬನೂ ಮುಹಾರಿಬ್ರನ್ನು ಎದುರಿಸಲು ಹಝ್ರತ್ ಪೈಗಂಬರ್(ಸ) 400, ಮತ್ತೊಂದು ವರದಿ ಪ್ರಕಾರ 700 ಸಹಾಬರ ಸಂಘದೊಂದಿಗೆ ರವಾನೆಯಾದರು. ಹಝ್ರತ್ ಉಸ್ಮಾನ್ರನ್ನು(ರ) ಮದೀನದ ಅಮೀರರನ್ನಾಗಿ ನಿಶ್ಚಯಿಸಿದರು. ಮತ್ತೊಂದು ವರದಿ ಪ್ರಕಾರ ಹಝ್ರತ್ ಅಬೂಧರ್ಗ಼ಫ್ಫಾರಿಯನ್ನು ಅಮೀರನ್ನಾಗಿ ನಿಶ್ಚಯಿಸಲಾಗಿತ್ತು ಎಂದಿದೆ.

ಹಝ್ರತ್ ಪೈಗಂಬರ್(ಸ) ನಜದಿನಲ್ಲಿ ನಖ಼ಲ್ ಎಂಬ ಪ್ರದೇಶಕ್ಕೆ ತಲಪಿದರು. ಅದನ್ನು ದಾತುರ್ರಿಖಾಅ್ ಎಂದು ಕರೆಯಲಾಗುತ್ತದೆ. ಅಲ್ಲಿ ಹಝ್ರತ್ ಪೈಗಂಬರರ(ಸ) ವಿರುದ್ಧ ಹೋರಾಡಲಿಕ್ಕಾಗಿ ಒಂದು ದೊಡ್ಡ ಸೈನ್ಯ ತಯಾರಾಗಿ ನಿಂತಿತ್ತು. ಉಭಯ ಪಕ್ಷಗಳು ಮುಖಾಮುಖಿಯಾದರೂ ಯುದ್ಧ ನಡೆದಿರಲಿಲ್ಲ. ಜನರು ಪರಸ್ಪರ ಭಯಗೊಂಡಿದ್ದರು. ಈ ಯುದ್ಧದ ವೇಳೆ ಮೊದಲ ಬಾರಿ ಮುಸ್ಲಿಮರು ಸಲಾತುಲ್ ಖ಼ೌಫ್ ನಿರ್ವಹಿಸಿದ್ದರು. ಎಂದರೆ ಭಯದ ಸ್ಥಿತಿಯಲ್ಲಿ ಅನುಷ್ಠಿಸುವ ನಮಾಝ್. (ಸೀರತ್ ಇಬ್ನೆ ಹಿಶ್ಶಾಮ್, ಪುಟ–614–615, ದಆರುಲ್ ಕುತುಬ್ ಇಲ್ಮಿಯ ಬೈರೂತ್ 2001) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–2, ಪುಟ–280, ದಆರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 1996)

ಈ ಯುದ್ಧದ ಹೆಸರಿನ ಬಗ್ಗೆ ಹೀಗೆಯೂ ಹೇಳಲಾಗುತ್ತದೆ. ಈ ಯುದ್ಧದಲ್ಲಿ ಸಹಾಬರು ಧ್ವಜದಲ್ಲಿ ಕಟ್ಟುಗಳನ್ನು ಹಾಕಿದರು. ಆದ್ದರಿಂದ ಇದನ್ನು ಧ಼ಾತುರಿಖಾಅ್ ಯುದ್ಧವೆಂದು ಕರೆಯಲಾಯಿತು. ಆ ಪ್ರದೇಶದಲ್ಲಿ ಧ಼ಾತುರ್ರಿಖಾಅ್ ಎಂಬ ಹೆಸರಿನ ಪರ್ವತ ಅಥವಾ ಮರಗಳಿದ್ದುವು ಆದ್ದರಿಂದ ಈ ಯುದ್ಧವನ್ನು ಧ಼ಾತುರ್ರಿಖಾಅ್ ಯುದ್ಧವನ್ನು ಕರೆಯಲಾಯಿತು ಎಂದೂ ಬಂದಿದೆ.

ಹಝ್ರುರತ್ ಮೂಸಾ ಅಶ್ಅರಿ ವರದಿ ಮಾಡುತ್ತಾರೆ: ನಾವು ಒಂದು ಆಕ್ರಮಣಕ್ಕಾಗಿ ಹಝ್ರತ್ ಪೈಗಂಬರರೊಂದಿಗೆ(ಸ) ಹೊರಟೆವು. ನಾವು 6 ಜನರಿದ್ದೆವು. ನಮ್ಮೆಲ್ಲರಿಗೂ ಸೇರಿ ಒಂದೇ ಒಂದು ಒಂಟೆ ಇತ್ತು. ಅದರಲ್ಲಿ ನಾವು ಸರದಿ ಪ್ರಕಾರ ಸವಾರರಾಗುತ್ತಿದ್ದೆವು. ನಮ್ಮ ಪಾದಗಳು ಬಿರುಕುಬಿಟ್ಟಿದ್ದುವು. ನನ್ನ ಎರಡು ಪಾದಗಳು ಸಹ ಬಿರುಕುಬಿಟ್ಟಿದ್ದುವು. ನನ್ನ ಉಗುರುಗಳು ಉದುರಿಹೋದವು. ನಾವು ನಮ್ಮ ಕಾಲುಗಳಲ್ಲಿ ಬಟ್ಟೆಗಳ ತುಂಡುಗಳನ್ನು ಸುತ್ತುತ್ತಿದ್ದುವು. ಆದ್ದರಿಂದ ಇದರ ಹೆಸರು ಧ಼ಾತುರ್ರಿಖಾಅ್ ಯುದ್ಧ ಎಂದಾಗಿತ್ತು. ಎಂದರೆ ಹರಕು ಬಟ್ಟೆಗಳ ಯುದ್ಧ, ಏಕೆಂದರೆ ನಾವು ಬಟ್ಟೆಗಳ ತುಂಡುಗಳನ್ನು ನಮ್ಮ ಕಾಲುಗಳಲ್ಲಿ ಕಟ್ಟಿದ್ದೆವು.
(ಸಹೀಹ್ ಬುಆಖರಿ, ಕಿತಾಬುಲ್ ಮಗಾಝಿ, ಹದೀಸ್–4128)

ಒಂದು ಟಿಪ್ಪಣಿಯಿದೆ. ಅದನ್ನು ಸಹ ಓದಿಹೇಳುತ್ತೇನೆ. ಇದು ಕೂಡ ಇದರ ಭಾಗವಾಗಿದೆ. ಚರಿತ್ರೆ ಮತ್ತು ಪ್ರಯಾಣಗಳ ಗ್ರಂಥಗಳ ಪ್ರಕಾರ ಧ಼ಾತುರ್ರಿಖಾಅ್ ಯುದ್ಧ ಹಿಜರಿ 4ರಲ್ಲಿ ನಡೆದಿತ್ತು. ಇಮಾಂ ಬುಖ಼ಾರಿ ಪ್ರಕಾರ ಈ ಯುದ್ಧ ಖೈಬರ್ ಯುದ್ಧದ ನಂತರ ನಡೆದಿತ್ತು. ಏಕೆಂದರೆ ಹಝ್ರತ್ ಅಬೂಮೂಸಾ ಅಶ್ಅರಿ ಈ ಯುದ್ಧದಲ್ಲಿ ಭಾಗವಹಿಸಿದ್ದರು. ಅವರು ಖೈಬರ್ ಯುದ್ಧದ ನಂತರ ಮುಸ್ಲಿಮರಾಗಿದ್ದರು. ಆದ್ದರಿಂದ ಈ ಯುದ್ಧ ಹಿಜರೀ 7ರಲ್ಲಿ ನಡೆದಿರಬಹುದೆಂದು ಅನುಮಾನಿಸಬಹುದಾಗಿದೆ.
(ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ–614, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2001) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–2, ಪುಟ–280, ದಆರ್ ಅಹ್ಯಾಉತ್ತುರಾಸುಲ್ ಅರಬಿ ಬಯರೂತ್ 1996) (ಸಹೀಹ್ ಬುಆಖರಿ, ಕಿತಾಬುಲ್ ಮಗಾಝಿ, ಹದೀಸ್–4128)

ಹಿಜರೀ 8ರಲ್ಲಿ ನಡೆದ ಮಕ್ಕಾ ವಿಜಯಕ್ಕೆ ಸಂಬಂಧಿಸಿ ಸುನನ್ ನಿಸಾಇಯಲ್ಲಿ ಒಂದು ವಿಶದವಾದ ವರದಿಯಿದೆ. ಅದರಲ್ಲಿ ಮಕ್ಕಾ ವಿಜಯದ ಸಂದರ್ಭದಲ್ಲಿ, ಹಝ್ರತ್ ಪೈಗಂಬರ್(ಸ) ಕೊಲ್ಲಲು ಅಪ್ಪಣೆಕೊಟ್ಟ ವ್ಯಕ್ತಿಗಳ ಕುರಿತು ವಿವರಿಸಲಾಗಿದೆ. ಹಝ್ರತ್ ಮುಸ್ಅಬ್ ಬಿನ್ ಸಅದ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಮಕ್ಕಾ ವಿಜಯದಂದು, ಹಝ್ರತ್ ಪೈಗಂಬರ್(ಸ) ನಾಲ್ವರು ಪುರುಷರು ಮತ್ತು ಇಬ್ಬರು ಸ್ತ್ರೀಯರು ಹೊರತು ಬಾಕಿ ಎಲ್ಲ ಸತ್ಯನಿಷೇಧಿಗಳಿಗೂ ಅಭಯ ನೀಡಿದ್ದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಈ ನಾಲ್ವರು ಜನರನ್ನು ಕೊಲ್ಲಿರಿ. ಅವರು ಕಅ್ಬದ ಪರದೆಗೆ ಅಂಟಿಕೊಂಡು ನಿಂತು ಕೊಂಡಿರುವವರಾದರೂ ಸರಿ. ಅವರ ಹೆಸರುಗಳು ಹೀಗಿವೆ: ಇಕ್ರಿಮ ಬಿನ್ ಅಬೂಜಹಲ್, ಅಬ್ದುಲ್ಲಾಹ್ ಬಿನ್ ಖತಲ್, ಮುಖಯ್ಯಸ್ ಬಿನ್ ಸಬಾಬ ಮತ್ತು ಅಬ್ದುಲ್ಲಾಹ್ ಬಿನ್ ಸಅದ್ ಬಿನ್ ಅಬೀ ಸರಹ್. ಅಬ್ದುಲ್ಲಾಹ್ ಬಿನ್ ಖ಼ತಲ್ರನ್ನು ಹಿಡಿಯಲ್ಪಟ್ಟಾಗ, ಅವರು ಕಅ್ಬದ ಪರದೆಯನ್ನು ಹಿಡಿದಿದ್ದರು. ಹಝ್ರತ್ ಸಈದ್ ಬಿನ್ ಉರೈಸ್ ಮತ್ತು ಅಮ್ಮಾರ್ ಬಿನ್ ಯಾಸಿರ್ ಇಬ್ಬರೂ ಸೇರಿಕೊಂಡು ಅವನ ಮೇಲೆ ಹಲ್ಲೆ ನಡೆಸಿ, ಸಈದ್ ಅವನನ್ನು ಕೊಂದುಹಾಕಿದರು. ಮಖೀಸ್ನನ್ನು ಜನರು ಬಜಾರಿನಲ್ಲಿ ಕಂಡುಹಿಡಿದರು ಮತ್ತು ಅವರನ್ನು ಕೊಂದು ಹಾಕಿದರು. ಇಕ್ರಿಮ ಸಮುದ್ರದ ಕಡೆಗೆ ಓಡಿ ಹೋದರು. ಹಡಗಿನಲ್ಲಿದ್ದ ಜನರು ಸಮುದ್ರದಲ್ಲಿ ಉಂಟಾದ ಸುಂಟರಗಾಳಿಗೆ ತುತ್ತಾದರು. ಆಗ ಕಿಶ್ತಿಯವರು ಹೇಳಿದರು: ನೀವು ಸತ್ಯ ಮತ್ತು ನಿಷ್ಠೆಯನ್ನು ತೋರಿಸಿರಿ. ಏಕೆಂದರೆ ನೀವು ಆರಾಧಿಸಿರುತ್ತಿರುವ ವಸ್ತುಗಳು ನಿಮಗೆ ಇಂದು ಪ್ರಯೋಜನ ನೀಡದು. ಆಗ ಇಕ್ರಿಮ ಹೇಳಿದರು: ನಿಷ್ಠೆ ಮತ್ತು ಸತ್ಯ ಮಾತ್ರವೇ ನನ್ನನ್ನು ಸಮುದ್ರದಲ್ಲಿ ರಕ್ಷಿಸಲು ಸಾಧ್ಯ. ದಡದಲ್ಲೂ ನಿಷ್ಠೆ ಮತ್ತು ಸತ್ಯದಿಂದಲೇ ನಾನು ರಕ್ಷಣೆ ಹೊಂದಬಲ್ಲನು. ಹೇ ಅಲ್ಲಾಹ್, ನೀನು ಈ ಬಿರುಗಾಳಿಯಿಂದ ನನ್ನನ್ನು ಸಂರಕ್ಷಿಸಿದರೆ, ನಾನು ಖಂಡಿತವಾಗಿಯೂ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ರ ಬಳಿಗೆ ಹೋಗಿ, ಅವರ ಕೈಯ ಮೇಲೆ ನನ್ನ ಕೈಯನ್ನು ಇರಿಸುವೆನು ಎಂದು ದೃಢ ಪ್ರತಿಜ್ಞೆ ಮಾಡುತ್ತೇನೆ. ನಾನು ಅವರನ್ನು ಖಂಡಿತ ಕ್ಷಮಿಸುವವನಾಗಿಯೂ, ಕೃಪಾಳುವಾಗಿಯೂ ಕಾಣುವೆನು. ಅನಂತರ ಅವನು ಮರಳಿಬಂದು ಇಸ್ಲಾಂ ಧರ್ಮವನ್ನು ಸ್ವೀಕರಿಸಿದನು. ಅವರು ಹಡಗಿನಲ್ಲಿ ಸವಾರರಾಗುವ ಮುಂಚಿತವಾಗಿಯೇ ಅವರ ಪತ್ನಿ ಬಂದು ಮರಳಿ ಕರಕೊಂಡು ಹೋಗಿದ್ದರು ಎಂಬ ವರದಿಯೇ ಪ್ರಸಿದ್ಧಿಯನ್ನು ಪಡೆದಿದೆ. ಈ ವರದಿ ಸಹ ಮುಂದೆ ಬರಲಿದೆ. ಹೇಗಿದ್ದರೂ ಇದು ಸುನನ್ ನಸಾಇಯ ಒಂದು ವರದಿಯಾಗಿದೆ. ಅಬ್ದುಲ್ಲಾಹ್ ಬಿನ್ ಅಬೀ ಸರಹ್ ಬಗ್ಗೆ ಹೇಳುವುದಾದರೆ, ಅವನು ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್ರ ಬಳಿ ಅಡಗಿ ಕುಳಿತನು. ಅನಂತರ ಹಝ್ರತ್ ಪೈಗಂಬರ್(ಸ) ಜನರನ್ನು ಬೈಅತಿಗಾಗಿ ಕರೆದಾಗ, ಹಝ್ರತ್ ಉಸ್ಮಾನ್(ರ) ಅವನನ್ನು ಹಝ್ರತ್ ಪೈಗಂಬರರ(ಸ) ಮುಂದಕ್ಕೆ ತಂದು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ಅಬ್ದುಲ್ಲಾಹ್ರ ಬೈಅತನ್ನು ಸ್ವೀಕರಿಸಿರಿ. ಹಝ್ರತ್ ಪೈಗಂಬರ್(ಸ) ತಲೆಯೆತ್ತಿಕೊಂಡು ಮೂರು ಬಾರಿ ಅವನ ಕಡೆಗೆ ನೋಡಿದರು ಮತ್ತು ಮೂರು ಬಾರಿಯೂ ನಿರಾಕರಿಸಿದರು. ಹೇಗಿದ್ದರೂ ಕೊನೆಗೆ ಹಝ್ರತ್ ಪೈಗಂಬರ್(ಸ) ಅಬ್ದುಲ್ಲಾಹ್ನ ಬೈಅತ್ ಸ್ವೀಕರಿಸಿದರು

ಮತ್ತು ಹೀಗೆಯೂ ಹೇಳಿದರು: ಯಾರ ಬೈಅತ್ ಪಡೆಯುವುದರಿಂದ ನಾನು ಹಿಂಜರಿಕೆ ತೋರಿಸಿದನೋ ಅವನನ್ನು ಕೊಲ್ಲುವನಾದ ಯಾವನೇ ವಿವೇಕಯುತ ವ್ಯಕ್ತಿ ಇಲ್ಲವೇ? ಜನರು ಹೇಳಿದರು: ಯಾ ರಸೂಲಲ್ಲಾಹ್, ನಿಮ್ಮ ಹೃದಯದಲ್ಲಿ ಏನಿತ್ತು ಎಂದು ನಮಗೆ ಹೇಗೆ ಗೊತ್ತಾಗುತ್ತಿತ್ತು. ನೀವು ಕಣ್ಣು ಸನ್ನೆಯಿಂದ ನಮಗೆ ಏಕೆ ತಿಳಿಸಲಿಲ್ಲ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಕಣ್ಣುಗಳ ಮೂಲಕ ಮೋಸ ಮಾಡುವ ಅನುಮತಿ ಪ್ರವಾದಿಗೆ ಇಲ್ಲ. ಈ ವರದಿ ಸುನನ್ ಅಬೂದಾವೂದ್‌ನಲ್ಲೂ ಇದೆ. ಅದರಲ್ಲಿ ಬೇರೊಂದು ವರದಿ ಸಹ ಇದೆ. ಆದರೆ ಅದರಲ್ಲಿ ಕೊನೆಯ ವಾಕ್ಯಗಳು ಇಲ್ಲ. ಎಂದರೆ ಕೊಲೆ ಮಾಡುವ ಮುಂತಾದ ಪ್ರಸ್ತಾಪವಿಲ್ಲ. ಈ ವರದಿಯಲ್ಲಿ ಹಝ್ರತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರರಿಗೆ(ಸ) ಅವತೀರ್ಣವಾಗುತ್ತಿದ್ದ ದಿವ್ಯವಾಣಿಯನ್ನು ಬರೆಯುವ ವ್ಯಕ್ತಿಗಳಲ್ಲಿ ಅಬ್ದುಲ್ಲಾಹ್ ಬಿನ್ ಸಅದ್ ಬಿನ್ ಅಬೀ ಸರಹ್ ಸಹ ಒಬ್ಬರಾಗಿದ್ದರು. ಅವನನ್ನು ಶೈತಾನನು ದಾರಿಗೆಡಿಸಿದನು ಮತ್ತವನು ಸತ್ಯನಿಷೇಧಿಗಳೊಂದಿಗೆ ಸೇರಿದನು. ಮಕ್ಕಾ ವಿಜಯದ ದಿನ ಹಝ್ರತ್ ಪೈಗಂಬರ್(ಸ) ಅವನನ್ನು ಕೊಲ್ಲಲು ಆಜ್ಞಾಪಿಸಿದರು. ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್ ಅವನಿಗಾಗಿ ಅಭಯ ಯಾಚಿಸಿದರು. ಹೀಗೆ ಹಝ್ರತ್ ಪೈಗಂಬರ್(ಸ) ಅವನಿಗೆ ಅಭಯ ನೀಡಿದರು. (ಸುನನ್ ಅನ್ನಿಸಾಈ, ಕಿತಾಬುಲ್ ಮಹಾರಬ, ಹದೀಸ್–4072) (ಸುನನ್ ಅಬೂದಾವೂದ್, ಕಿತಾಬುಲ್ ಹದೂದ್, ಹದೀಸ್–4358–4359)

ಕೊಲ್ಲಬೇಕಾಗಿತ್ತು ಏಕೆ ಕೊಲ್ಲಲಿಲ್ಲ ಎಂಬ ಹಝ್ರತ್ ಪೈಗಂಬರರ(ಸ) ಮಾತಿನ ಬಗ್ಗೆ ಒಂದು ವಿವರಣೆ ಲಭಿಸುತ್ತದೆ. ನಾನು ಬೈಅತ್ ಪಡೆಯುವುದರಿಂದ ಹಿಂಜರಿಕೆ ತೋರಿಸಿದಾಗ ನೀವು ಅವನನ್ನು ಏಕೆ ಕೊಲ್ಲಲಿಲ್ಲ ಎಂದು ಸಹಾಬರೊಡನೆ ಹಝ್ರತ್ ಪೈಗಂಬರ್(ಸ) ಕೇಳಿದ್ದರು ಎಂಬುದನ್ನು ವಿಶ್ಲೇಷಿಸಬೇಕಾಗಿದೆ. ಏಕೆಂದರೆ ಹಝ್ರತ್ ಪೈಗಂಬರ್(ಸ) ಬೈಅತ್ ಪಡೆಯಲು ಬಯಸುತ್ತಿಲ್ಲವೆಂದಾದರೆ, ಅವರನ್ನು ಕೊಲ್ಲುವ ತೀರ್ಮಾನದಲ್ಲಿ ಬದಲಾವಣೆ ಮಾಡಲು ಇಚ್ಛಿಸಿಲ್ಲವೆಂದಾದರೆ ಅವರನ್ನು ಕೊಲ್ಲಲು ನಿರ್ದೇಶಿಸಬಹುದಾಗಿತ್ತು. ಹಝ್ರತ್ ಪೈಗಂಬರ್(ಸ) ಅಲ್ಲಿ ಅಜೇಯರಾಗಿದ್ದರು. ರಾಜ್ಯದ ಆಡಳಿತಗಾರರಾಗಿದ್ದರು. ಅವನನ್ನು ಕೊಲ್ಲುವ ತೀರ್ಮಾನ ನ್ಯಾಯಯುತವು ಆಗಿತ್ತು. ಆದ್ದರಿಂದ ಈ ವರದಿಯಲ್ಲಿ ವರದಿಗಾರ ತನ್ನ ಅಭಿಪ್ರಾಯವನ್ನು ಸೇರಿಸಿರಲೂ ಬಹುದು. ಮಾತ್ರವಲ್ಲ, ಈ ವರದಿ ಬುಖಾರಿ ಮತ್ತು ಮುಸ್ಲಿಮ್‌ನಲ್ಲಿ ಇಲ್ಲ. ಅಬೂದಾವೂದ್‌ನಲ್ಲಿ ಇದೇ ವಿಷಯದ ಒಂದು ವರದಿ ಹಝ್ರತ್ ಇಬ್ನು ಅಬ್ಬಾಸ್‌ರಿಂದ ವರದಿಯಾಗಿದೆ. ಅದನ್ನು ನಾನು ಪ್ರಸ್ತಾಪಿಸಿದ್ದೇನೆ. ಅದರಲ್ಲಿ ಕೊಲ್ಲುವ ಯಾವ ಪ್ರಸ್ತಾಪವೂ ಇಲ್ಲ.

ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಮೂಮಿನೀನಿನ 15ನೇ ವಚನವನ್ನು ವ್ಯಾಖ್ಯಾನ ಮಾಡುತ್ತಾ ಈ ಘಟನೆಯನ್ನು ಹೀಗೆ ಪ್ರಸ್ತಾಪಿಸಿದ್ದಾರೆ: ಈ ಆಯತ್ತಿಗೆ ಒಂದು ಚಾರಿತ್ರಿಕ ಘಟನೆಯೊಂದಿಗೆ ಸಂಬಂಧವಿದೆ. ಅದನ್ನು ಇಲ್ಲಿ ವಿವರಿಸುವುದು ಆವಶ್ಯವೆಂದು ತೋರುತ್ತದೆ. ಹಝ್ರತ್ ಪೈಗಂಬರರಿಗೆ(ಸ) ಅವತೀರ್ಣವಾಗುತ್ತಿದ್ದ ದಿವ್ಯವಾಣಿಯನ್ನು ಬರೆಯುವ ವ್ಯಕ್ತಿಗಳಲ್ಲಿ ಅಬ್ದುಲ್ಲಾಹ್ ಬಿನ್ ಸಅದ್ ಬಿನ್ ಅಬೀ ಸರಹ್ ಎಂಬ ಒಬ್ಬ ವ್ಯಕ್ತಿ ಸಹ ಇದ್ದರು. ಹಝ್ರತ್ ಪೈಗಂಬರ್‌ರಿಗೆ(ಸ) ದಿವ್ಯವಾಣಿ ಅವತೀರ್ಣವಾಗುವಾಗ ಅವರು ಅವನನ್ನು ಕರೆದು ಬರೆಸುತ್ತಿದ್ದರು. ಒಂದು ದಿನ ಈ ವಚನಗಳನ್ನು ಬರೆಸುತ್ತಿದ್ದರು. **ಸುಮ್ಮ ಅನ್‌ಶಅ್‌ನ ಖ಼ಲ್‌ಖನ್ ಆಖ಼ರ್** ಎಂಬ ವಚನವನ್ನು ತಲುಪಿದಾಗ, ಅವನ ನಾಲಗೆಯಿಂದ ಅನಿಯಂತ್ರಿತವಾಗಿ **ಫತಬಾರಕಲ್ಲಾಹು ಅಹ್‌ಸನುಲ್ ಖ಼ಾಲಿಖೀನ್** ಎಂಬ ವಾಕ್ಯ ಹೊರಡಿತು. ಹಝ್ರತ್ ಪೈಗಂಬರ್(ಸ) ಹೇಳಿದರು: ಇದೇ ದಿವ್ಯವಾಣಿಯಾಗಿದೆ. ಅದನ್ನು ಬರೆಯಿರಿ. ಹಿಂದಿನ ವಚನಗಳ ಪರಿಣಾಮವಾಗಿ ಸಹಜವಾಗಿಯೇ ಈ ಆಯತ್ ಬರುತ್ತದೆ ಎಂದು ಆ ನತದೃಷ್ಟನಗೆ ಯೋಚನೆ ಬರಲಿಲ್ಲ. ನನ್ನ ಬಾಯಿಯಿಂದ ಹೊರಟ ಈ ವಚನವನ್ನು ಹಝ್ರತ್ ಪೈಗಂಬರ್(ಸ) ದಿವ್ಯವಾಣಿಯೆಂದು ಹೇಳಿದ ಹಾಗೆಯೇ, ಸಂಪೂರ್ಣ ಪವಿತ್ರ ಖುರ್‌ಆನನ್ನು ಹಝ್ರತ್ ಪೈಗಂಬರ್(ಸ) ಸ್ವತಃ ತಯಾರು ಮಾಡುತ್ತಾರೆ ಎಂದು ಅವನು ಯೋಚಿಸಿದನು. ನಊಧುಬಿಲ್ಲಾಹ್. ಹೀಗೆ ಅವನು ಇಸ್ಲಾಂ ಧರ್ಮವನ್ನು ತ್ಯಜಿಸಿ ಮಕ್ಕ ಪಟ್ಟಣಕ್ಕೆ ಹೋದನು. ಮಕ್ಕಾ ವಿಜಯದ ವೇಳೆ, ಹಝ್ರತ್ ಪೈಗಂಬರ್(ಸ) ಕೊಲ್ಲಲು ಅಪ್ಪಣೆಯಿತ್ತ ಜನರಲ್ಲಿ ಅಬ್ದುಲ್ಲಾಹ್ ಬಿನ್ ಅಬೀ ಸರಹ್ ಸಹ ಸೇರಿದ್ದರು. ಆದರೆ ಹಝ್ರತ್ ಉಸ್ಮಾನ್(ರ) ಅವನಗೆ ಅಭಯ ನೀಡಿದರು. ಅವರ ಮನೆಯಲ್ಲಿ ಮೂರು ದಿನಗಳು ಅಡಗಿ ಕುಳಿತನು. ಒಂದು ದಿನ ಹಝ್ರತ್ ಪೈಗಂಬರ್(ಸ) ಮಕ್ಕದ ಜನರ ಬೈಅತ್ ಪಡೆಯುತ್ತಿದ್ದಾಗ, ಹಝ್ರತ್ ಉಸ್ಮಾನ್(ರ) ಅಬ್ದುಲ್ಲಾಹ್ ಬಿನ್ ಅಬೀ ಸರಹ್‌ರನ್ನು ಸಹ ಹಝ್ರತ್ ಪೈಗಂಬರರ(ಸ) ಸನ್ನಿಧಿಗೆ ಕರೆದುಕೊಂಡು ಬಂದರು. ಅವನ ಬೈಅತನ್ನು ಸ್ವೀಕರಿಸಲು ವಿನಂತಿಸಿದರು. ಹಝ್ರತ್ ಪೈಗಂಬರ್(ಸ) ಮೊದಲು ಸ್ವಲ್ಪ ಸಮಯ ಹಿಂಜರಿಕೆ ತೋರಿಸಿದರು ಆದರೆ ಅನಂತರ ಅವನ ಬೈಅತ್ತನ್ನು ಸ್ವೀಕರಿಸಿದರು. ಹೀಗೆ ಅವನು ಪುನಃ ಇಸ್ಲಾಂ ಸ್ವೀಕರಿಸಿದನು. (ತಫ್‌ಸೀರೆ ಕಬೀರ್, ಸಂಪುಟ–6, ಪುಟ–139)

ಇಕ್ರಿಮ ಬಿನ್ ಅಬುಜಹಲಿನ ಇಸ್ಲಾಂ ಸ್ವೀಕಾರದ ಘಟನೆಯ ಬಗ್ಗೆ ಸುನನ್ ನಿಸಾಇಯಲ್ಲಿ ಬಂದದನ್ನು ಹೇಳಿದ್ದೆ. ಆದರೆ ಚರಿತ್ರೆಯ ಪುಸ್ತಕಗಳಲ್ಲಿ ಅವರ ಇಸ್ಲಾಂ ಸ್ವೀಕಾರದ ವಿವರಣೆ ಅಲ್ಪ ಬೇರೆ ರೀತಿಯಲ್ಲಿ ಪ್ರಸ್ತಾಪಿಸಲಾಗಿದೆ. ಮಕ್ಕಾ ವಿಜಯದ ವೇಳೆ ಹಝ್ರತ್ ಪೈಗಂಬರ್(ಸ) ಕೊಲ್ಲಲು ಅಪ್ಪಣೆಯಿತ್ತ ಜನರಲ್ಲಿ ಇಕ್ರಿಮ ಬಿನ್ ಅಬೂಜಹಲ್ ಸೇರಿದ್ದರು. ಇಕ್ರಿಮ ಮತ್ತು ಅವರ ತಂದೆ ಹಝ್ರತ್ ಪೈಗಂಬರರಿಗೆ(ಸ) ಕಷ್ಟ ನೀಡುತ್ತಿದ್ದರು ಮತ್ತು ಮುಸ್ಲಿಮರೊಂದಿಗೆ ಬಹಳ ಕಠಿಣವಾಗಿ ವರ್ತಿಸುತ್ತಿದ್ದರು. ಹಝ್ರತ್ ಪೈಗಂಬರ್(ಸ) ಪ್ರತಿಕಾರವಾಗಿ ಅವರನ್ನು ಕೊಲ್ಲಲ್ಲು ಅಪ್ಪಣೆಯಿತ್ತಿದ್ದಾರೆ ಎಂದು ಅವರಿಗೆ ಗೊತ್ತಾದಾಗ ಅವರು ಯಮನಿನ ಕಡೆಗೆ ಓಡಿಹೋಗಲು ಹೊರಟರು. ಅವರ ಪತ್ನಿ ಅವರನ್ನು ಹಿಂಬಾಲಿಸಿದರು. ಅನಂತರ ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಅವರ ಪತ್ನಿ ಅವರನ್ನು ಸಮುದ್ರದ ದಡದಲ್ಲಿ ಕಂಡರು. ಅವರು ಹಡಗಿನಲ್ಲಿ ಸವಾರರಾಗಲು ಉದ್ದೇಶಿಸದಾಗ, ಒಂದು ಹೇಳಿಕೆ ಪ್ರಕಾರ ಅವರು ಹಡಗಿನಲ್ಲಿ ಸವಾರರಾದಾಗ, ಇಕ್ರಿಮರೊಡನೆ ಅವರ ಪತ್ನಿ ಹೀಗೆ ಹೇಳಿಕೊಂಡು ಅವರನ್ನು ತಡೆದು ಹಿಡಿದರು: ಹೇ ನನ್ನ ಚಿಕ್ಕಪ್ಪರ ಮಗನೇ, ಜನರ ನಡುವೆ ಸಂಬಂಧವನ್ನು ಅತಿ ಹೆಚ್ಚಾಗಿ ಜೋಡಿಸುವ, ಜನರಲ್ಲಿ ಅತ್ಯಂತ ಒಳ್ಳೆಯ, ಜನರಲ್ಲಿ ಅತ್ಯಂತ ಹಿತಕಾಂಕ್ಷಿಯಾದ ಮನುಷ್ಯನ ಬಳಿಯಿಂದ ನಾನು ಬಂದಿರುವೆ. ನೀನು ನಿನ್ನ ಜೀವವನ್ನು ನಾಶಕ್ಕೆ ಹಾಕಬೇಡ. ಏಕೆಂದರೆ ನಾನು ನಿನಗಾಗಿ ಅಭಯವನ್ನು ಯಾಚಿಸಿದ್ದೇನೆ. ಹೀಗೆ ಇಕ್ರಿಮ ತನ್ನ ಪತ್ನಿಯೊಂದಿಗೆ ಬಂದು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಮಾತ್ರವಲ್ಲ ಅವರ ಇಸ್ಲಾಂ ಧರ್ಮ ವಿಶ್ವಾಸ ಬಹಳ ಸುಂದರವೂ ಆಗಿತ್ತು.

ವರದಿಗಳಲ್ಲಿ ಹೀಗೆ ಬಂದಿದೆ: ಇಕ್ರಿಮ ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾಗಿ ಹೀಗೆ ಹೇಳಿದರು: ಹೇ ಮುಹಮ್ಮದ್(ಸ), ನೀವು ನನಗೆ ಅಭಯವನ್ನು ನೀಡಿದ್ದೀರಿ ಎಂದು ನನ್ನ ಪತ್ನಿ ನನ್ನೊಡನೆ ಹೇಳಿದ್ದಾಳೆ. ಹಝ್ರತ್ ಪೈಗಂಬರ್(ಸ) ಹೇಳಿದರು: ನೀನು ಸತ್ಯ ಹೇಳಿದ್ದೀಯ, ಖಂಡಿತವಾಗಿಯೂ ನೀನು ಅಭಯದಲ್ಲಿ ಇದ್ದಿಯ. ಆಗ ಇಕ್ರಿಮ ಹೇಳಿದರು: ಅಲ್ಲಾಹನಲ್ಲದೆ ಬೇರೆ ಆರಾಧ್ಯನಿಲ್ಲವೆಂದು ನಾನು ಸಾಕ್ಷ್ಯವಹಿಸುತ್ತೇನೆ. ಅವನು ಏಕನೂ. ಅವನಿಗೆ ಸಹಭಾಗಿಯಾಗಿ ಯಾರೂ ಇಲ್ಲ. ನೀವು ಅವನ ದಾಸ ಮತ್ತು ಪ್ರವಾದಿಯಾಗಿದ್ದೀರಿ. ಇಕ್ರಿಮ ನಾಚಿಕೆಯಿಂದ ತನ್ನ ತಲೆಯನ್ನು ಬಾಗಿಸಿದ್ದನು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಇಕ್ರಿಮ, ನೀನು ನನ್ನೊಡನೆ ಏನೇ ಬೇಡಿದ್ದರೂ, ಅದನ್ನು ಕೊಡುವ ಶಕ್ತಿ ನನಗೆ ಇದ್ದರೆ ನಾನು ಖಂಡಿತ ಕೊಡುವೆನು. ಇಕ್ರಿಮ ಹೇಳಿದರು: ನಾನು ನಿಮ್ಮೊಂದಿಗೆ ತೋರಿಸಿದ ಪ್ರತಿಯೊಂದು ವಿರೋಧ ಮತ್ತು ಶತ್ರುತ್ವವನ್ನು ಕ್ಷಮಿಸಲು ದುಆ ಮಾಡಿರಿ. ಆಗ ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ಇಕ್ರಿಮ ನನ್ನೊಡನೆ ತೋರಿಸಿದ ಪ್ರತಿಯೊಂದು ವಿರೋಧವನ್ನು ಕ್ಷಮಿಸು. ಅವನು ತೋರಿಸಿದ ಪ್ರತಿಯೊಂದು ಕೆಟ್ಟ ಕೆಲಸವನ್ನು ಕ್ಷಮಿಸು. ಅನಂತರ ಹಝ್ರತ್ ಪೈಗಂಬರ್(ಸ) ಸಂತೋಷದೊಂದಿಗೆ ಎದ್ದುಕೊಂಡು ತನ್ನ ಚಾದರವನ್ನು ಅವರ ಮೇಲೆ ಹಾಕಿದರು ಮತ್ತು ಹೀಗೆ ಹೇಳಿದರು: ಸತ್ಯವಿಶ್ವಾಸ ಸ್ವೀಕರಿಸಿದ ಸ್ಥಿತಿಯಲ್ಲಿ ಮತ್ತು ಹಿಜ್ರತ್ ಮಾಡುವ ಸ್ಥಿತಿಯಲ್ಲಿ ನಮ್ಮ ಬಳಿಗೆ ಬಂದ ವ್ಯಕ್ತಿಗೆ ಸುಸ್ವಾಗತ. ಇಕ್ರಿಮ ಅನಂತರ ಕಾಲದಲ್ಲಿ ಶ್ರೇಷ್ಠ ಸಹಾಬರಲ್ಲಿ ಗಣಿಸಲ್ಪಡುತ್ತಿದ್ದರು. ಇಕ್ರಿಮನ ಸತ್ಯವಿಶ್ವಾಸ ಸ್ವೀಕಾರದಿಂದ, ಹಝ್ರತ್ ಪೈಗಂಬರ್(ಸ) ಸಹಾಬರೊಡನೆ ಹೇಳಿದ್ದ ಒಂದು ಭವಿಷ್ಯವಾಣಿ ಸಹ ಈಡೇರಿತು. ಹಝ್ರತ್ ಪೈಗಂಬರ್(ಸ) ಹೀಗೆ ಕನಸು ಕಂಡಿದ್ದರು: ಹಝ್ರತ್ ಪೈಗಂಬರ್(ಸ) ಸ್ವರ್ಗದಲ್ಲಿ ಇದ್ದರು. ಅವರು ಅಲ್ಲಿ ದ್ರಾಕ್ಷೆಯ ಒಂದು ಗೊಂಚಲನ್ನು ಕಂಡರು. ಅದು ಅವರಿಗೆ ತುಂಬಾ ಇಷ್ಟವಾಯಿತು. ಇದು ಯಾರಿಗಾಗಿದೆ ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. ಅದು ಅಬೂಜಹಲಿಗೆ ಆಗಿದೆ ಎಂದು ಹೇಳಲಾಯಿತು. ಈ ಸಂಗತಿ ಹಝ್ರತ್ ಪೈಗಂಬರರಿಗೆ(ಸ) ಒಳ್ಳೆಯದಾಗಿ ತೋರಲಿಲ್ಲ. ಅವರು ಚಿಂತಿತರಾದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಸ್ವರ್ಗದಲ್ಲಿ ಸತ್ಯವಿಶ್ವಾಸಿಯಲ್ಲದೆ ಬೇರೆ ಯಾರೂ ಪ್ರವೇಶಿಸುವಂತಿಲ್ಲ. ಮತ್ತೆ ಇದು ಅಬೂಜಹಲಿಗೆ ಹೇಗೆ ಆಗುವುದು. ಅನಂತರ ಇಕ್ರಿಮ ಬಿನ್ ಅಬೂಜಹಲ್ ಇಸ್ಲಾಂ ಧರ್ಮವನ್ನು ಸ್ವೀಕರಿಸಿದಾಗ ಹಝ್ರತ್ ಪೈಗಂಬರ್(ಸ) ಇದರಿಂದ ಸಂತೋಷಗೊಂಡರು. ದ್ರಾಕ್ಷೆಯ ಗೊಂಚಲಿನಿಂದ ಇಕ್ರಿಮನನ್ನು ಉದ್ದೇಶಿಸಲಾಗಿತ್ತು ಎಂದು ಅವರು ಹೇಳಿದರು. (ಅಸ್ಸೀರತುಲ್ ಹಲ್‌ಬಿಯ, ಸಂಪುಟ–3, ಪುಟ132–133, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ತಬೂಕ್ ಯುದ್ಧ ಹಿಜರೀ 9ರಲ್ಲಿ ನಡೆದಿತ್ತು. ತಬೂಕ್ ಯುದ್ಧವನ್ನು **ಜೈಶುಲ್ ಉಸ್ರಾ** ಎಂದು ಕರೆಯಲಾಗುತ್ತದೆ. ಎಂದರೆ, ಸಂಕಷ್ಟವನ್ನು ಅನುಭವಿಸಿದ ಸೈನ್ಯ. ಈ ಯುದ್ಧದ ತಯಾರಿಗಾಗಿ ಧನತ್ಯಾಗ ಮಾಡಲು ಹಝ್ರತ್ ಉಸ್ಮಾನ್‌ರಿಗೆ(ರ) ಸೌಭಾಗ್ಯ ಲಭಿಸಿದ್ದ ಬಗ್ಗೆ ಹೀಗೆ ಪ್ರಸ್ತಾಪ ಸಿಗುತ್ತದೆ: ಈ ಯುದ್ಧದ ತಯಾರಿಗಾಗಿ ಹಝ್ರತ್ ಪೈಗಂಬರ್(ಸ) ಜನರನ್ನು ಪ್ರೇರೇಪಿಸಿದರು. ಸಿರಿಯದ ಕಡೆಗೆ ವ್ಯಾಪಾರದ ಉದ್ದೇಶಕ್ಕಾಗಿ ತಯಾರು ಮಾಡಲಾಗುತ್ತಿದ್ದ ನೂರು ಒಂಟೆಗಳ ಹಿಂಡನ್ನು ಅವುಗಳ ಪೀಠಗಳು ಮತ್ತು ಪಲ್ಲಕ್ಕಿಗಳ ಸಮೇತ ಹಝ್ರತ್ ಉಸ್ಮಾನ್(ರ) ಸಮರ್ಪಿಸಿದರು. ಹಝ್ರತ್ ಪೈಗಂಬರ್(ಸ) ಪುನಃ ಹೇಳಿದಾಗ, ಈ ಯುದ್ಧದ ಆವಶ್ಯಕತೆಯನ್ನು ಮುಂದಿರಿಸುತ್ತಾ ಹಝ್ರತ್ ಉಸ್ಮಾನ್(ರ) ಮತ್ತೂ ನೂರು ಒಂಟೆಗಳನ್ನು ಸಾರೋಟುಗಳ ಸಮೇತ ತಯಾರು ಮಾಡಿ ಸಮರ್ಪಿಸಿದರು. ಹಝ್ರತ್ ಪೈಗಂಬರ್(ಸ) ಪುನಃ ಮನವಿ ಮಾಡಿದಾಗ, ಮೂರನೇ ಬಾರಿ ಹಝ್ರತ್ ಉಸ್ಮಾನ್(ರ) ಮತ್ತೂ ನೂರು ಒಂಟೆಗಳನ್ನು ಪೀಠಗಳು ಮತ್ತು ಪಲ್ಲಕ್ಕಿಗಳ ಸಮೇತ ತಯಾರುಮಾಡಿ ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಸಮರ್ಪಿಸಿದರು. ಹಝ್ರತ್ ಪೈಗಂಬರ್(ಸ) ಪ್ರವಚನ ಪೀಠದಿಂದ ಕೆಳಗೆ ಇಳಿದು ಹೇಳಿದರು: **ಮಾ ಅಲಾ ಉಸ್ಮಾನಿನ್ ಮಾ ಅಮಿಲ ಬಅ್‌ದ ಹಾಧಿಹೀ – ಮಾ ಅಲಾ ಉಸ್ಮಾನಿನ್ ಮಾ ಅಮಿಲ ಬಅ್‌ದ ಹಾಧಿಹೀ.** ಎಂದರೆ ಇದರ ನಂತರ ಉಸ್ಮಾನ್ ಏನೇ ಮಾಡಿದರೂ ಅವರು ಹಿಡಿತಕ್ಕೆ ಒಳಗಾಗಲಾರರು – ಇದರ ನಂತರ ಉಸ್ಮಾನ್ ಏನೇ ಮಾಡಿದರೂ ಅವರು ಶಿಕ್ಷಿಸಲ್ಪಡಲಾರರು. ಅದರ ನಂತರ ಹಝ್ರತ್ ಉಸ್ಮಾನ್(ರ) 200 ಔಖಿಯ ಚಿನ್ನವನ್ನು ಸಹ ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಸಮರ್ಪಿಸಿದರು.

ಮತ್ತೊಂದು ವರದಿಯ ಪ್ರಕಾರ ಹಝ್ರತ್ ಪೈಗಂಬರರ(ಸ) ಮುಂದೆ ಹಝ್ರತ್ ಉಸ್ಮಾನ್(ರ) ಹಾಜರಾಗಿ ಅವರ ಚೀಲದಲ್ಲಿ 1000 ದೀನಾರ್‌ಗಳನ್ನು ಹಾಕಿದರು ಎಂದು ಬಂದಿದೆ. ಆಗ ಹಝ್ರತ್ ಪೈಗಂಬರ್(ಸ) ಚೀಲದಲ್ಲಿದ್ದ

ದೀನಾರ್‌ಗಳನ್ನು ಪಲ್ಲಟಿಸುತ್ತಾ ಎರಡು ಬಾರಿ ಹೀಗೆ ಹೇಳಿದರು: **ಮಾ ಝ್ಝುರ್ರ ಉಸ್ಮಾನ ಮಾ ಅಮಿಲ ಬಅ್‌ದಲ್ ಯೌಮಿ**. ಇಂದಿನ ನಂತರ ಉಸ್ಮಾನ್ ಏನೇ ಮಾಡಿದರೂ ಅವರಿಗೆ ಯಾವುದೇ ಹಾನಿ ಉಂಟಾಗದು. ಒಂದು ವರದಿ ಪ್ರಕಾರ ಹಝ್ರತ್ ಉಸ್ಮಾನ್(ರ) ಈ ಸಂದರ್ಭದಲ್ಲಿ 10,000 ದೀನಾರ್ ನೀಡಿದಾಗ ಹಝ್ರತ್ ಪೈಗಂಬರ್(ಸ) ಹಝ್ರತ್ ಉಸ್ಮಾನ್‌ರಿಗಾಗಿ ಹೀಗೆ ದುಆ ಮಾಡಿದರು: **ಗ಼ಫರಲಕ್ ಯಾ ಉಸ್ಮಾನ್. ಮಾ ಅಸ್‌ರರ್‌ತ ವಮಾ ಅಅ್‌ಲನ್‌ತ ವಮಾ ಹುವ ಕಾಹಿನುನ್ ಇಲಾ ಯೌಮಿಲ್ ಖಿಯಾಮತಿ ಮಾ ಯುಬಾಲಿ ಮಾ ಅಮಿಲ ಬಅ್‌ದಹಾ**. ಎಂದರೆ, ಹೇ ಉಸ್ಮಾನ್, ನೀನು ರಹಸ್ಯವಾಗಿ ಅಥವಾ ಬಹಿರಂಗವಾಗಿ ಮಾಡಿದ್ದ ಮತ್ತು ಖ಼ಿಯಾಮತ್ ತನಕ ಮಾಡಬಹುದಾದ ತಪ್ಪುಗಳನ್ನು ಅಲ್ಲಾಹನು ಕ್ಷಮಿಸಲಿ. ಇದರ ನಂತರ ಅವರು ಯಾವುದೇ ಕೃತ್ಯಗಳನ್ನು ಮಾಡುವರಾದರೂ ಅದರ ಬಗ್ಗೆ ಚಿಂತೆ ಮಾಡಬೇಕಾಗಿಲ್ಲ. ಅವರು ಈ ಯುದ್ಧದ ತಯಾರಿಗಾಗಿ 1000 ಒಂಟೆಗಳನ್ನು ಮತ್ತು 70 ಕುದುರೆಗಳನ್ನು ಸಮರ್ಪಿಸಿದ್ದರು ಎಂದೂ ವರದಿಯಾಗಿದೆ. ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಪೈಗಂಬರ್(ಸ) ಈ ಸಂದರ್ಭದಲ್ಲಿ ಹಝ್ರತ್ ಉಸ್ಮಾನ್‌ರೊಂದಿಗೆ(ರ) ಹೀಗೆ ಹೇಳಿದರು: ಹೇ ಉಸ್ಮಾನ್, ನೀನು ರಹಸ್ಯವಾಗಿ ಅಥವಾ ಬಹಿರಂಗವಾಗಿ ಮಾಡಿದ್ದ ಮತ್ತು ಖ಼ಿಯಾಮತ್ ತನಕ ಮಾಡಬಹುದಾದ ತಪ್ಪುಗಳನ್ನು ಅಲ್ಲಾಹನು ಕ್ಷಮಿಸಲಿ. ಈ ಸತ್ಕರ್ಮದ ನಂತರ ಅವರು ಯಾವುದೇ ತಪ್ಪುಗಳನ್ನು ಮಾಡುವರಾದರೂ ಅದರ ಬಗ್ಗೆ ಅಲ್ಲಾಹನು ಪರಿವೆ ಮಾಡಲಾರನು. ಒಂದು ವರದಿಯ ಪ್ರಕಾರ ಈ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಹಝ್ರತ್ ಉಸ್ಮಾನ್‌ರ(ರ) ಪರವಾಗಿ ಹೀಗೆ ದುಆ ಮಾಡಿದ್ದರು ಎಂದು ಬಂದಿದೆ: **ಅಲ್ಲಾಹುಮ್ಮ ಅರ್‌ಝಿ ಉಸ್ಮಾನ. ಫೀ ಇನ್ನೀ ಅನ್‌ಹು ರಾಝಿ**. ಎಂದರೆ, ಹೇ ಅಲ್ಲಾಹ್, ನೀನು ಉಸ್ಮಾನ್‌ರೊಂದಿಗೆ ಸಂಪ್ರೀತನಾಗು, ಏಕೆಂದರೆ ನಾನು ಅವರಿಂದ ಸಂತುಷ್ಟನಾಗಿದ್ದೇನೆ. (ಶರಹ್ ಅಝ್ಝುರ್‌ಖಾನ ಅಲಲ್ ಮವಾಹಿಬುದ್ದುನಿಯ, ಸಂಪುಟ–4, ಪುಟ–66,68,71, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1996) (ಸುನನ್ ಅತ್ತಿರ್‌ಮಿಝಿ, ಕಿತಾಬುಲ್ ಮನಾಖಿಬ್, ಹದೀಸ್–3700,3701)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಸಹಾಬರು ಕೆಲವು ಬಾರಿ ತಮ್ಮ ಮನೆಯ ಸಂಪತ್ತು ಮತ್ತು ಸಾಮಾನುಗಳನ್ನು ಮಾರಾಟ ಮಾಡಿಕೊಂಡು ಯುದ್ಧದ ಖರ್ಚುಗಳನ್ನು ಈಡೇರಿಸಿದ್ದರು. ಮಾತ್ರವಲ್ಲ ಕೆಲವು ಬಾರಿ ಅವರು ತಮ್ಮ ಸೊತ್ತುಗಳನ್ನು ಮಾರಾಟಮಾಡಿಕೊಂಡು ಇತರರಿಗೆ ಖರ್ಚು ಮಾಡಿದ್ದನ್ನು ಮತ್ತು ಇತರರ ಎಲ್ಲ ಆವಶ್ಯಕತೆಗಳನ್ನು ಈಡೇರಿಸಿದ್ದನ್ನು ನಾನು ಕಾಣುತ್ತೇವೆ. ಒಂದು ಬಾರಿ ಹಝ್ರತ್ ಪೈಗಂಬರ್(ಸ) ಹೊರಗೆ ಬಂದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಒಂದು ಯಾತ್ರೆಗಾಗಿ ನಮ್ಮೊಂದು ಸೈನ್ಯ ಹೊರಡಲಿದೆ. ಆದರೆ ಸತ್ಯವಿಶ್ವಾಸಿಗಳ ಬಳಿ ಏನೂ ಇಲ್ಲ. ನಿಮ್ಮಲ್ಲಿ ಪ್ರತಿಫಲ ಪಡೆಯಲು ಇಚ್ಛಿಸುವ ಯಾರಾದರೂ ಇದ್ದಾರೆಯೇ? ಹಝ್ರತ್ ಉಸ್ಮಾನ್(ಸ) ಇದನ್ನು ಆಲಿಸುತ್ತಲೇ ಎದ್ದುನಿಂತು ತನ್ನ ಚೀಲವನ್ನು ತೆಗೆದುಕೊಂಡು ಅದರಲ್ಲಿದ್ದ ಹಣವನ್ನು ಮುಸ್ಲಿಮರ ಖರ್ಚಿಗಾಗಿ ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಸಮರ್ಪಿಸಿದರು. ಇದನ್ನು ಕಂಡಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಉಸ್ಮಾನ್ ಸ್ವರ್ಗವನ್ನು ಖರೀದಿ ಮಾಡಿರುವರು. ಅದೇ ರೀತಿಯಲ್ಲಿ ಒಂದು ಬಾರಿ ಒಂದು ಬಾವಿ ಮಾರಾಟವಾಗುತ್ತಿತ್ತು. ಆ ದಿನಗಳಲ್ಲಿ ಮುಸ್ಲಿಮರಿಗೆ ನೀರಿನ ಆವಶ್ಯಕತೆಯಿತ್ತು. ಆದ್ದರಿಂದ ಪ್ರತಿಫಲ ಪಡೆಯಲು ಇಚ್ಛಿಸುವ ಯಾರಾದರೂ ಇದ್ದಾರೆಯೇ? ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. ಹಝ್ರತ್ ಉಸ್ಮಾನ್(ರ) ಹೇಳಿದರು: ಯಾ ರಸೂಲುಲ್ಲಾಹ್, ನಾನು ಹಾಜರಿದ್ದೇನೆ. ನಾನು ಸನ್ನದ್ಧನಾಗಿದ್ದೇನೆ. ಹಾಗೆ ಅವರು ಬಾವಿಯನ್ನು ಖರೀದಿ ಮಾಡಿ ಮುಸ್ಲಿಮರಿಗಾಗಿ ಸಮರ್ಪಿಸಿದರು. ಹಝ್ರತ್ ಪೈಗಂಬರ್(ಸ) ಪುನಃ ಹೇಳಿದರು: ಉಸ್ಮಾನ್ ಸ್ವರ್ಗವನ್ನು ಖರೀದಿ ಮಾಡಿರುವರು. ಇದೇ ರೀತಿಯಲ್ಲಿ ಇನ್ನೊಂದು ಸಂದರ್ಭದಲ್ಲೂ ಹಝ್ರತ್ ಪೈಗಂಬರ್(ಸ) ಹೀಗೆಯೇ ಹೇಳಿದ್ದರು. ಒಟ್ಟಿನಲ್ಲಿ, ಅವರು ಸ್ವರ್ಗವನ್ನು ಖರೀದಿ ಮಾಡಿರುವವರು ಎಂದು ಹಝ್ರತ್ ಉಸ್ಮಾನ್‌ರ(ರ) ಬಗ್ಗೆ ಹಝ್ರತ್ ಪೈಗಂಬರ್(ಸ) ಹೇಳಿದ್ದ ಮೂರು ಸಂದರ್ಭಗಳು ಉಂಟಾಗಿದ್ದುವು. (ಖುತ್‌ಬಾತೆ ಮಹ್ಮೂದ್, ಸಂಪುಟ–19, ಪುಟ–98–99, ಖುತ್‌ಬ ಜುಮುಅ 18–02–1938)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಉಸ್ಮಾನ್‌ಸ್ವರ್ಗಕ್ಕೆ ಅರ್ಹರು ಎಂದು ಹಝ್ರತ್ ಪೈಗಂಬರ್(ಸ) ಅವರ ಬಗ್ಗೆ ಹಲವಾರು ಬಾರಿ ಹೇಳಿದ್ದರು. ಹುದೈಬಿಯಾ ಸಂಧಿಯ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಸಹಾಬರಿಂದ ಪುನಃ ಬೈಅತ್ ಪಡೆದಾಗ ಹಝ್ರತ್ ಉಸ್ಮಾನ್(ರ) ಆ ಸಮಯದಲ್ಲಿ ಅಲ್ಲಿರಲಿಲ್ಲ. ಹಝ್ರತ್ ಪೈಗಂಬರ್(ಸ) ತನ್ನ ಒಂದು ಕೈಯನ್ನು ಮತ್ತೊಂದು ಕೈಯ ಮೇಲೆ ಹಾಕಿಕೊಂಡು ಹೀಗೆ ಹೇಳಿದರು: ಇದು ಉಸ್ಮಾನಿನ ಕೈಯಾಗಿದೆ. ನಾನು ಅವರ ಪರವಾಗಿ ನನ್ನ ಕೈಯನ್ನು ಇರಿಸುತ್ತೇನೆ. ಹೀಗೆ ಹಝ್ರತ್ ಪೈಗಂಬರ್(ಸ) ತನ್ನ ಕೈಯನ್ನು ಹಝ್ರತ್ ಉಸ್ಮಾನ್‌ರ ಕೈಯೆಂದು ಹೇಳಿದರು. ಒಂದು ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಉಸ್ಮಾನ್, ಅಲ್ಲಾಹನು ನಿನಗೆ ಒಂದು ನಿಲುವಂಗಿಯನ್ನು ತೊಡಿಸಿವನು. (ಎಂದರೆ ಖಿಲಾಫತ್ ಸ್ಥಾನವನ್ನು ನೀಡುವನು – ಅನುವಾದಕ) ನಿನ್ನ ಆ ನಿಲುವಂಗಿಯನ್ನು ಕಳಚಲು ಕಪಟವಿಶ್ವಾಸಿಗಳು ಬಯಸುವರು. ಆದರೆ ನೀನು ಆ ನಿಲುವಂಗಿಯನ್ನು ಕಳಚಬಾರದು. ಇದರಲ್ಲಿ ಹಝ್ರತ್ ಪೈಗಂಬರ್(ಸ) ಹಝ್ರತ್ ಉಸ್ಮಾನ್‌ರೊಡನೆ(ರ), ಆ ನಿಲುವಂಗಿಯನ್ನು ಕಳಚಬಾರದೆಂದೂ, ಆ ನಿಲುವಂಗಿಯನ್ನು ಕಳಚಲು ಬಯಸುವವರು ಕಪಟವಿಶ್ವಾಸಿಗಳೆಂದೂ ಹೇಳಿದ್ದರು. (ಖುತ್‌ಬಾತೆ ಮಹ್ಮೂದ್, ಸಂಪುಟ–19, ಪುಟ–98–99, ಖುತ್‌ಬ ಜುಮುಅ 18–02–1938)

ಇದರಿಂದ ಅದನ್ನು ಕಳಚಲು ಬಯಸಿದವರು ಯಾರೇ ಆದರು ಅವರು ಕಪಟವಿಶ್ವಾಸಿಗಳಾಗಿದ್ದರು ಎಂದು ಸ್ಪಷ್ಟವಾಗುತ್ತದೆ. ಏಕೆಂದರೆ ಇದರ ಬಗ್ಗೆ ಹಝ್ರತ್ ಪೈಗಂಬರ್(ಸ) ಮುಂಚಿತವಾಗಿಯೇ ಭವಿಷ್ಯ ನುಡಿದ್ದಿದ್ದರು.

ಹಝ್ರತ್ ಖ಼ಲೀಫತುಲ್ ಮಸೀಹ್ ಸಾಲಿಸ್(ರಹ್) ಹಝ್ರತ್ ಉಸ್ಮಾನ್‌ರ ತ್ಯಾಗದ ಬಗ್ಗೆ ಒಂದು ಕಡೆ ಹೀಗೆ ಹೇಳಿದ್ದರು: ಯುದ್ಧಕ್ಕಾಗಿ ಕೆಲವು ಆವಶ್ಯಕತೆಗಳಿದ್ದುವು. ಈ ಆವಶ್ಯಕತೆಗಳ ಬಗ್ಗೆ ಹಝ್ರತ್ ಪೈಗಂಬರ್(ಸ) ಸಹಾಬರೊಡನೆ ಹೇಳಿದರು. ಧನತ್ಯಾಗವನ್ನು ಮಾಡಲು ಅವರನ್ನು ಉಪದೇಶಿಸಿದರು. ಇದರ ಪರಿಣಾಮವಾಗಿ ಹಝ್ರತ್ ಅಬೂಬಕರ್ ಸಿದ್ದೀಖ್(ರ) ತನ್ನ ಸಕಲ ಸಂಪತ್ತನ್ನು ತೆಗೆದುಕೊಂಡು ಬಂದರು. ಹಝ್ರತ್ ಉಮರ್(ರ) ತನ್ನ ಅರ್ಧ ಸಂಪತ್ತನ್ನು ತೆಗೆದುಕೊಂಡು ಬಂದರು. ಹಝ್ರತ್ ಉಸ್ಮಾನ್(ರ) ಹೇಳಿದರು: ನನ್ನ ಕೊಡುಗೆಯನ್ನು ಸ್ವೀಕರಿಸಿರಿ. ನಾನು ಹತ್ತು ಸಾವಿರ ಸಹಾಬರ ಖರ್ಚುಗಳನ್ನು ನೋಡುವೆನು. ಅದಲ್ಲದೆ ಅವರು ಸಾವಿರ ಒಂಟೆಗಳನ್ನು ಮತ್ತು 70 ಕುದುರೆಗಳನ್ನು ನೀಡಿದರು.
(ಖುತ್‌ಬಾತೆ ನಾಸಿರ್, ಸಂಪುಟ–2, ಪುಟ–341, ಖುತ್‌ಬ ಜುಮುಅ 18–10–1968)

ಹಝ್ರತ್ ಅಬೂಬಕರರ(ರ) ಖ಼ಿಲಾಫತ್ ಕಾಲದಲ್ಲಿ, ಹಝ್ರತ್ ಉಸ್ಮಾನ್(ರ) ವಹಿಸಿದ ಪಾತ್ರವೇನು? ಮತ್ತು ಅವರ ಸ್ಥಾನ ಮತ್ತು ಪದವಿ ಏನಾಗಿತ್ತು ಹಾಗೂ ಹಝ್ರತ್ ಅಬೂಬಕರ್(ರ) ಅವರಿಗೆ ಕೊಡುತ್ತಿದ್ದ ಗೌರವವೇನು ಮತ್ತು ಅವರನ್ನು ಏನೆಂದು ತಿಳಿಯುತ್ತಿದ್ದರು ಎಂಬುದನ್ನು ನೋಡೋಣ. ಹಝ್ರತ್ ಅಬೂಬಕರರ(ರ) ಖ಼ಿಲಾಫತ್ ಕಾಲದಲ್ಲಿ, ಮುಖ್ಯವಾದ ವಿಷಯಗಳಲ್ಲಿ ಅಭಿಪ್ರಾಯಗಳನ್ನು ಪಡೆಯಲಾಗುತ್ತಿದ್ದ ಸಹಾಬಿಯರು ಮತ್ತು ಸಲಹೆಗಾರರಲ್ಲಿ ಹಝ್ರತ್ ಉಸ್ಮಾನ್(ರ) ಒಳಪಟ್ಟಿದ್ದರು. ಹಝ್ರತ್ ಅಬೂಬಕರ್(ರ) ಮುರ್ತದ್‌ಗಳ ಪಿತೂರಿಗಳನ್ನು ಕೊನೆಗೊಳಿಸಿದ ಸಂದರ್ಭದಲ್ಲಿ ರೋಮಿನ ಮೇಲೆ ಆಕ್ರಮಣ ನಡೆಸಲು ಮತ್ತು ಹಲವು ಕಡೆಗಳಿಗೆ ಯೋಧರನ್ನು ಕಳುಹಿಸಲು ತೀರ್ಮಾನಿಸಿದರು. ಈ ವಿಷಯವಾಗಿ ಜನರೊಡನೆ ಅಭಿಪ್ರಾಯ ಕೇಳಿದರು. ಕೆಲವು ಸಹಾಬರು ಸಲಹೆಗಳನ್ನು ನೀಡಿದರು. ಆಗ ಹಝ್ರತ್ ಅಬೂಬಕರ್(ರ) ಹೆಚ್ಚಿನ ಸಲಹೆಗಳನ್ನು ಕೇಳಿದರು. ಆಗ ಹಝ್ರತ್ ಉಸ್ಮಾನ್(ರ) ಹೇಳಿದರು: ನೀವು ಈ ಧರ್ಮವನ್ನು ನಂಬುವವರ ಗುಣಕಾಂಕ್ಷಿಯಾಗಿರುವಿರಿ ಮತ್ತು ಕೃಪಾಳು ಆಗಿರುವಿರಿ. ಆದ್ದರಿಂದ ಜನಸಾಮಾನ್ಯರಿಗೆ ಪ್ರಯೋಜನಕರವೆಂದು ತೋರುವ ಸಲಹೆಯ ಪ್ರಕಾರ ನೀವು ನಡೆದುಕೊಳ್ಳಲು ದೃಢನಿರ್ಧಾರ ಕೈಗೊಳ್ಳಿರಿ. ಏಕೆಂದರೆ ನಿಮ್ಮ ಬಗ್ಗೆ ತಪ್ಪಾಗಿ ಸಂಶಯಪಡಲು ಸಾಧ್ಯವಲ್ಲ. ಆಗ ಹಝ್ರತ್ ಉಸ್ಮಾನ್ ಸತ್ಯ ಹೇಳಿದ್ದಾರೆ ಎಂದು ಹಝ್ರತ್ ತಲ್‌ಹ, ಹಝ್ರತ್ ಝುಬೇರ್, ಹಝ್ರತ್ ಸಅದ್, ಹಝ್ರತ್ ಅಬೂಉಬೈದ, ಹಝ್ರತ್ ಸಈದ್ ಬಿನ್ ಝೈದ್ ಮತ್ತು ಆ ಸಭೆಯಲ್ಲಿದ್ದ ಎಲ್ಲ ಮುಹಾಜಿರ್‌ಗಳು ಮತ್ತು ಅನ್ಸಾರ್‌ಗಳು ಹೇಳಿದರು. ನೀವು ಸರಿಯೆಂದು ತೋರುವ ಸಂಗತಿಯನ್ನು ಮಾಡಿರಿ, ನಾವು ನಿಮ್ಮನ್ನು ವಿರೋಧಿಸುವುದಿಲ್ಲ ಮತ್ತು ನಿಮ್ಮನ್ನು ಆಕ್ಷೇಪಿಸುವುದಿಲ್ಲ ಎಂದು ಅವರೆಲ್ಲರೂಹೇಳಿದರು. ಅನಂತರ ಹಝ್ರತ್ ಅಲಿ(ರ) ಮಾತನಾಡಿದರು. ಅನಂತರ ಹಝ್ರತ್ ಅಬೂಬಕರ್(ರ) ಜನರ ಮುಂದೆ ನಿಂತು, ಅಲ್ಲಾಹನಿಗೆ ಅರ್ಹವಾದ ಸ್ತುತಿಗಳನ್ನು ಮಾಡಿದರು ಮತ್ತು ಹಝ್ರತ್ ಪೈಗಂಬರರ(ಸ)ಮೇಲೆ ದುರೂದ್ ಪ್ರಾರ್ಥನೆ ಮಾಡಿದರು. ಅನಂತರ ಹೇಳಿದರು: ಹೇ ಜನರೇ, ಇಸ್ಲಾಮಿನ ಮೂಲಕ ಅಲ್ಲಾಹನು ನಿಮ್ಮ ಮೇಲೆ ಅನುಗ್ರಹವನ್ನು ವರ್ಷಿಸಿದ್ದಾನೆ. ಜಿಹಾದಿನ ಮೂಲಕ ನಿಮಗೆ ಗೌರವವನ್ನು ನೀಡಿದ್ದಾನೆ. ಈ ಧರ್ಮದ ಮೂಲಕ ಸಕಲ ಧರ್ಮಗಳ ಮೇಲೆ ಶ್ರೇಷ್ಠತೆ ನೀಡಿದ್ದಾನೆ. ಆದ್ದರಿಂದ ಹೇ ಅಲ್ಲಾಹನ ದಾಸರೇ, ಸಿರಿಯ ದೇಶದಲ್ಲಿ ರೋಮನ್ನರ ವಿರುದ್ಧ ಯುದ್ಧ ಮಾಡಲು ಸೈನ್ಯವನ್ನು ತಯಾರು ಮಾಡಿರಿ. (ತಾರೀಖ್ ದಮಿಶ್ಕ್ ಅಲ್‌ಕಬೀರ್ ಲಿಇಬ್ನೆ ಅಸಾಕರ್, ಭಾಗ–2, ಪುಟ–46, ದಾರ್ ಅಹ್ಯಉತ್ತುರಾಸುಲ್ ಅರಬಿ 2001)

ಹಝ್ರತ್ ಅಲ್‌ವಾನ್ ಬಿನ್ ಸಈದ್‌ನ ನಂತರ ಯಾರನ್ನು ಬಹ್ರೈನಿನ ಗವರ್ನರ್ ಆಗಿ ಕಳುಹಿಸಬೇಕೆಂದು ಹಝ್ರತ್ ಅಬೂಬಕರ್(ರ) ಸಹಾಬರೊಡನೆ ಸಲಹೆ ಕೇಳಿದರು. ಆಗ ಹಝ್ರತ್ ಉಸ್ಮಾನ್(ರ) ಹೇಳಿದರು: ಬಹ್ರೈನಿನವರ ಗರ್ವರ್ನರ್ ಆಗಿ ಹಝ್ರತ್ ಪೈಗಂಬರ್(ಸ) ಕಳುಹಿಸಿದ್ದ ವ್ಯಕ್ತಿಯನ್ನು ಕಳುಹಿಸಿರಿ. ಅವರ ಕಾರಣದಿಂದ ಅಲ್ಲಿಯ ನಿವಾಸಿಗಳು ಇಸ್ಲಾಂ ಸ್ವೀಕರಿಸಿದ್ದರು ಮತ್ತು ಅನುಸರಣೆ ಮಾಡಿದ್ದರು. ಮಾತ್ರವಲ್ಲ ಅವರು ಅಲ್ಲಿಯ ಪ್ರದೇಶಗಳನ್ನು ಚೆನ್ನಾಗಿ ಬಲ್ಲರು. ಅವರ ಹೆಸರು ಅಲಾ ಬಿನ್ ಹಝ್ರಮಿ ಎಂದಾಗಿದೆ. ಹೀಗೆ ಹಝ್ರತ್ ಅಬೂಬಕ್ಕರ್(ರ) ಅಲಾ ಬಿನ್ ಹಝ್ರಮಿಯನ್ನು ಬಹ್ರೈನ್‌ಗೆ ಕಳುಹಿಸಲು ಒಪ್ಪಿದರು.
(ಕನ್‌ಝುಲ್ ಅಮಾಲ್, ಸಂಪುಟ–3, ಭಾಗ–5, ಪುಟ–248, ಕಿತಾಬುಲ್ ಖಿಲಾಫ ಮಾಅಲ್ ಅಮ್ಮಾರ, ವರದಿ ಸಂಖ್ಯೆ–14089, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2004)

ಹಝ್ರತ್ ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ: ಹಝ್ರತ್ ಅಬೂಬಕರರ ಖ಼ಿಲಾಫತ್ ಕಾಲದಲ್ಲಿ ಒಂದು ಸಲ ದೀರ್ಘ ಕಾಲದಿಂದ ಮಳೆಬರಲಿಲ್ಲ. ಹಝ್ರತ್ ಅಬೂಬಕರರ(ರ) ಸನ್ನಿಧಿಯಲ್ಲಿ ಬಂದು ಜನರು ಹೇಳಿದರು: ಆಕಾಶ ಮಳೆ ವರ್ಷಿಸುತ್ತಿಲ್ಲ. ಭೂಮಿ ಕೃಷಿಯನ್ನು ನೀಡುತ್ತಿಲ್ಲ. ಜನರು ಕಠಿಣವಾದ ವಿಪತ್ತಿಗೆ ತುತ್ತಾಗಿದ್ದಾರೆ. ಹಝ್ರತ್ ಅಬೂಬಕರ್(ರ) ಹೇಳಿದರು: ನೀವು ಹೋಗಿರಿ ಮತ್ತು ಸಹನೆ ಕೈಗೊಳ್ಳಿರಿ. ಸಂಜೆಯೊಳಗೆ ಅಲ್ಲಾಹನು ನಿಮ್ಮ ಕಷ್ಟತೆಯನ್ನು ದೂರಮಾಡುವೆನು. ಅಷ್ಟರಲ್ಲಿ ಹಝ್ರತ್ ಉಸ್ಮಾನ್‌ರ(ರ) 100 ಒಂಟೆಗಳನ್ನು ಒಳಗೊಂಡ ವ್ಯಾಪಾರಿಗಳ ಒಂದು ತಂಡ ಗೋದಿ ಮತ್ತು ಇತರ ಆಹಾರದ ಸಾಮಗ್ರಿಗಳನ್ನು ಹೊತ್ತುಕೊಂಡು ಸಿರಿಯದಿಂದ ಮದೀನ ತಲುಪಿತು. ಇದನ್ನು ಅರಿತ ಜನರು ಹಝ್ರತ್ ಉಸ್ಮಾನ್‌ರ(ರ)

ಮನೆಬಾಗಿಲಿಗೆ ಹೋದರು ಮತ್ತು ಬಾಗಿಲನ್ನು ಮುಟ್ಟಿದರು. ಹಝ್ರತ್ ಉಸ್ಮಾನ್ ಹೊರಗೆ ಬಂದು ಜನರೊಡನೆ ಏನು ಬೇಕೆಂದು ಕೇಳಿದರು. ಜನರು ಹೇಳಿದರು: ಈಗ ಕ್ಷಾಮ ಉಂಟಾಗಿದೆ ಎಂದು ನಿಮಗೆ ಗೊತ್ತಿದೆ. ಆಕಾಶ ಮಳೆ ವರ್ಷಿಸುತ್ತಿಲ್ಲ. ಭೂಮಿ ಕೃಷಿಯನ್ನು ನೀಡುತ್ತಿಲ್ಲ. ಜನರು ಕಠಿಣವಾದ ವಿಪತ್ತಿಗೆ ತುತ್ತಾಗಿದ್ದಾರೆ. ನಿಮ್ಮ ಬಳಿ ಆಹಾರ ಸಾಮಗ್ರಿಗಳು ಇವೆ ಎಂದು ನಮಗೆ ಮಾಹಿತಿ ಲಭಿಸಿದೆ. ಬಡವರಿಗೆ ಮತ್ತು ದರಿದ್ರರಿಗೆ ವಿತರಣೆ ಮಾಡಿಕೊಡುವ ಸಲುವಾಗಿ ನೀವು ಆಹಾರ ಸಾಮಾನುಗಳನ್ನು ನಮಗೆ ಮಾರಾಟ ಮಾಡಿರಿ. ಹಝ್ರತ್ ಉಸ್ಮಾನ್(ರ) ಹೇಳಿದರು: ಬಹಳ ಉತ್ತಮ, ಒಳಗೆ ಬನ್ನಿರಿ. ಒಳಗೆ ಬಂದು ಖರೀದಿ ಮಾಡಿರಿ. ವ್ಯಾಪಾರಿಗಳು ಹಝ್ರತ್ ಉಸ್ಮಾನ್‌ರ(ರ) ಮನೆಯೊಳಗೆ ಪ್ರವೇಶಿಸಿದರು. ಆಹಾರ ಸಾಮಗ್ರಿಗಳು ಅವರ ಮನೆಯಲ್ಲಿರುವುದನ್ನು ಕಂಡರು. ಹಝ್ರತ್ ಉಸ್ಮಾನ್(ರ) ಕೇಳಿದರು: ನಾನು ಸಿರಿಯದಿಂದ ಖರೀದಿ ಮಾಡಿ ಕೊಂಡುಬಂದ ಆಹಾರ ಸಾಮಗ್ರಿಗಳಿಗೆ ನೀವು ನನಗೆ ಎಷ್ಟು ಲಾಭ ಕೊಡುವಿರಿ? ಅಲ್ಲಿದ್ದ ಕೆಲವು ವ್ಯಾಪಾರಿಗಳು ಮತ್ತು ವಿತರಣೆ ಮಾಡಲು ಇಚ್ಛಿಸುತ್ತಿದ್ದ ಕೆಲವು ಜನರು ಹೇಳಿದರು: ನಾವು ಹತ್ತು ದಿರ್ಹಮಿಗೆ ಹನ್ನೆರಡು ಕೊಡುವೆವು. ಹಝ್ರತ್ ಉಸ್ಮಾನ್(ರ) ಹೇಳಿದರು: ನನಗೆ ಇದಕ್ಕಿಂತ ಹೆಚ್ಚು ಸಿಗುತ್ತಿದೆ. ಆಗ ಅವರು ಹೇಳಿದರು: ನಾವು ಹತ್ತಕ್ಕೆ ಹದಿನೈದು ಕೊಡುವೆವು. ಹಝ್ರತ್ ಉಸ್ಮಾನ್(ರ) ಹೇಳಿದರು: ನನಗೆ ಇದಕ್ಕಿಂತಲೂ ಹೆಚ್ಚಿಗೆ ಸಿಗುತ್ತಿದೆ. ವ್ಯಾಪಾರಿಗಳು ಹೇಳಿದರು: ಹೇ ಅಬೂ ಅಮ್ರ್, ಮದೀನದಲ್ಲಿ ನಾವಲ್ಲದೆ ಬೇರೆ ವ್ಯಾಪಾರಿಗಳಿಲ್ಲ. ಮತ್ತೆ ಯಾರು ನಿಮಗೆ ಅದಕ್ಕಿಂತ ಹೆಚ್ಚಿಗೆ ಕೊಡುವರು? ಹಝ್ರತ್ ಉಸ್ಮಾನ್(ರ) ಹೇಳಿದರು: ಅಲ್ಲಾಹನು ನನಗೆ ಪ್ರತಿ ದಿರ್ಹಮಿನ ಬದಲಿಗೆ ಹತ್ತು ಪಟ್ಟುಗಳಷ್ಟು ನೀಡುತ್ತಿರುವನು. ನಿಮಗೆ ಅದಕ್ಕಿಂತ ಹೆಚ್ಚಿಗೆ ಕೊಡಲು ಸಾಧ್ಯವೇ? ಅದಕ್ಕಿಂತ ಹೆಚ್ಚಿಗೆ ಕೊಡಲು ಸಾಧ್ಯವಿಲ್ಲವೆಂದು ಅವರು ಹೇಳಿದರು. ಹಝ್ರತ್ ಉಸ್ಮಾನ್(ರ) ಹೇಳಿದರು: ನಾನು ಅಲ್ಲಾಹನನ್ನು ಸಾಕ್ಷಿಯಾಗಿರಿಸಿಕೊಂಡು ಈ ಎಲ್ಲ ಆಹಾರ ಸಾಮಗ್ರಿಗಳನ್ನು ಬಡವರಾದ ಮುಸ್ಲಿಮರಿಗಾಗಿ ದಾನ ಮಾಡುತ್ತೇನೆ. ಇದರ ಮೂಲ್ಯವನ್ನು ಪಡೆಯುವುದಿಲ್ಲ. ಹಝ್ರತ್ ಇಬ್ನು ಅಬ್ಬಾಸ್ ಹೇಳುತ್ತಾರೆ: ಆಹಾರ ಸಾಮಗ್ರಿಗಳನ್ನು ದಾನಮಾಡಲಾದ ಆ ರಾತ್ರಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಕನಸಿನಲ್ಲಿ ಕಂಡೆನು. ಅವರು ಅರೇಬಿಯದಲ್ಲದ ಒಂದು ಉತ್ತಮ ಗುಣಮಟ್ಟದ ಕುದುರೆಯಲ್ಲಿ ಸವಾರರಾಗಿದ್ದರು. ಅವರು ಪ್ರಕಾಶದ ವಸ್ತ್ರವನ್ನು ಧರಿಸಿದ್ದರು. ಅವರ ಪಾದಗಳಲ್ಲಿ ಪ್ರಕಾಶದ ಪಾದರಕ್ಷೆಗಳಿದ್ದುವು. ಕೈಯಲ್ಲಿ ಪ್ರಕಾಶದ ಬೆತ್ತವಿತ್ತು.ಅವರು ಅವಸರದಲ್ಲಿದ್ದರು. ನಾನು ಹೇಳಿದೆ: ಯಾ ರಸೂಲಲ್ಲಾಹ್, ನಾನು ನಿಮ್ಮನ್ನು ಮತ್ತು ನಿಮ್ಮೊಂದಿಗೆ ಮಾತನಾಡುವುದನ್ನು ಇಷ್ಟಪಡುತ್ತೇನೆ. ನೀವು ಇಷ್ಟು ವೇಗವಾಗಿ ಎಲ್ಲಿಗೆ ಹೋಗುತ್ತಿದ್ದೀರಿ? ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಇಬ್ನು ಅಬ್ಬಾಸ್, ಉಸ್ಮಾನ್ ಒಂದು ದಾನವನ್ನು ಮಾಡಿರುವರು. ಅಲ್ಲಾಹನು ಅದನ್ನು ಸ್ವೀಕರಿಸಿದ್ದಾನೆ ಮತ್ತು ಸ್ವರ್ಗದಲ್ಲಿ ಅವರ ವಿವಾಹದ ಏರ್ಪಾಡನ್ನು ಮಾಡಿದ್ದಾನೆ. ಅವರ ವಿವಾಹದಲ್ಲಿ ಭಾಗವಹಿಸಲು ನಮ್ಮನ್ನು ಆಮಂತ್ರಿಸಲಾಗಿದೆ. (ಸೀರತ್ ಅಮೀರುಲ್ ಮುಮಿನೀನ್ ಉಸ್ಮಾನ್ ಬಿನ್ ಅಫ್ಫಾನ್, ಪಟ–51–52, ಅಲ್‌ಫಸ್ಲುಲ್ ಅವ್ವಲ್, ದಾರುಲ್ ಮಾರಿಫತ್ ಬೈರೂತ್ 2006)

ಹಝ್ರತ್ ಉಮರರ(ರ) ಖಿಲಾಫತ್ ಕಾಲದಲ್ಲಿ ಹಝ್ರತ್ ಉಸ್ಮಾನ್(ರ) ವಹಿಸಿದ ಪಾತ್ರ ಮತ್ತು ಅವರ ಸ್ಥಾನ ಮತ್ತು ಪದವಿಯ ಬಗ್ಗೆ ಕೆಲವು ಸಂಗತಿಗಳನ್ನು ಹೇಳುತ್ತೇನೆ.

ಹಝ್ರತ್ ಉಮರ್(ರ) ಖಲೀಫರಾದಾಗ, ಬೈತುಲ್ ಮಾಲಿನಿಂದ ತನ್ನ ಪಿಂಚಣಿಯ ಬಗ್ಗೆ ಸ್ಟೈಪಂಡಿನ ಬಗ್ಗೆ ಹಿರಿಯ ಸಹಾಬರೊಡನೆ ಸಲಹೆ ಕೇಳಿದರು. ಆಗ ಹಝ್ರತ್ ಉಸ್ಮಾನ್(ರ) ಹೇಳಿದರು: ತಿನ್ನಿರಿ ಮತ್ತು ತಿನ್ನಿಸಿರಿ.
(ಸೀರತ್ ಅಮೀರುಲ್ ಮುಮಿನೀನ್ ಉಸ್ಮಾನ್ ಬಿನ್ ಅಫ್ಫಾನ್, ಪಟ–53, ಅಲ್‌ಫಸ್ಲುಲ್ ಅವ್ವಲ್, ದಾರುಲ್ ಮಾರಿಫತ್ ಬೈರೂತ್ 2006)

ನಿಮ್ಮ ಆವಶ್ಯಕತೆಗಳನ್ನು ನೀವು ಈಡೇರಿಸಿರಿ ಮತ್ತು ಜನರ ಆವಶ್ಯಕತೆಗಳನ್ನು ಸಹ ಈಡೇರಿಸಿರಿ. ಅದನ್ನು ನಿಗದಿಪಡಿಸುವ ಆವಶ್ಯಕತೆಯಿಲ್ಲ. ಇಸ್ಲಾಮಿನ ವಿಜಯದ ಪರಂಪರೆ ಹೆಚ್ಚುತ್ತಾ ಹೋದಾಗ ಮತ್ತು ಸಂಪತ್ತು ಬಹಳ ಹೆಚ್ಚಾದಾಗ, ಹಝ್ರತ್ ಉಮರ್(ರ) ಕೆಲವು ಸಹಾಬರೊಡನೆ ಈ ಸಂಪತ್ತಿನ ಬಗ್ಗೆ ಸಲಹೆ ಪಡೆಯಲು ಕರೆದರು. ಹಝ್ರತ್ ಉಸ್ಮಾನ್(ರ) ಹೇಳಿದರು: ಸಂಪತ್ತು ಬಹಳ ಇದೆ ಎಂದು ನನಗೆ ತೋರುತ್ತಿದೆ. ಅದು ಜನರಿಗೆ ಸಾಕಷ್ಟು ಇದೆ.ಯಾರಿಗೆ ಸಿಗುತ್ತಿದೆ ಮತ್ತು ಯಾರಿಗೆ ಸಿಗುತ್ತಿಲ್ಲವೆಂದು ಗೊತ್ತಾಗಲಿಕ್ಕಾಗಿ ಜನಗಣತಿ ಮಾಡದಿದ್ದರೆ ಕಷ್ಟವಾಗುವುದು ಎಂದು ನನಗೆ ಭಯವಿದೆ. ಕೆಲವು ಬಾರಿ ಕೆಲವರು ಎರಡು ಬಾರಿ ಪಡೆಯುವರು. ಆದ್ದರಿಂದ ಕರಾರುವಕ್ಕಾದ ಒಂದು ವ್ಯವಸ್ಥೆ ಇರಬೇಕು. ಖಾತೆಯನ್ನು ತಯಾರು ಮಾಡಬೇಕು. ಹೀಗೆ ಹಝ್ರತ್ ಉಮರ್(ರ) ಹಝ್ರತ್ ಉಸ್ಮಾನ್‌ರ(ರ) ಅಭಿಪ್ರಾಯವನ್ನು ಸಮ್ಮತಿಸಿದರು ಮತ್ತು ಜನಗಣತಿ ಮಾಡಿಕೊಂಡು ಜನರ ಹೆಸರು ರಿಜಿಸ್ಟರ್‌ನಲ್ಲಿ ಬರೆದಿಟ್ಟುಕೊಳ್ಳುವ ಕೆಲಸ ಶುರುಮಾಡಿದರು. (ಸೀರತ್ ಅಮೀರುಲ್ ಮುಮಿನೀನ್ ಉಸ್ಮಾನ್ ಬಿನ್ ಅಫ್ಫಾನ್, ಪಟ–54, ಅಲ್‌ಫಸ್ಲುಲ್ ಅವ್ವಲ್, ದಾರುಲ್ ಮಾರಿಫತ್ ಬೈರೂತ್ 2006)

ಅನಂತರ ಕ್ರಮಬದ್ಧವಾಗಿ ಇದರ ಪ್ರಕಾರ ಪ್ರತಿಯೊಬ್ಬರಿಗೂ ಸಹಾಯ ಸಿಗಲು ಶುರುವಾಯಿತು.

ಹಝ್ರತ್ ಉಸ್ಮಾನ್‌ರ(ರ) ಖಿಲಾಫತ್ ಕುರಿತು ಹಝ್ರತ್ ಪೈಗಂಬರರ(ಸ) ಭವಿಷ್ಯವಾಣಿ ಸಹ ಇದೆ. ನಿಲುವಂಗಿ ಧರಿಸಲ್ಪಡುವ ಮತ್ತು ಕಪಟವಿಶ್ವಾಸಿಗಳು ಕಳಚಲು ಪ್ರಯತ್ನಿಸುವ ಬಗ್ಗೆ ಸೂಚನೆ ರೂಪದಲ್ಲಿ ಮೊದಲು ಹೇಳಿದ್ದೆ. ಇದು ಹಝ್ರತ್ ಅಬೂಬಕರರ(ರ) ವರದಿಯಾಗಿದೆ. ಹಝ್ರತ್ ಪೈಗಂಬರ್(ಸ) ಒಂದು ದಿನ ಹೇಳಿದರು: ನಿಮ್ಮಲ್ಲಿ ಯಾರಾದರೂ ಕನಸನ್ನು ಕಂಡಿದ್ದೀರಾ? ಒಬ್ಬ ವ್ಯಕ್ತಿ ಹೇಳಿದರು: ಒಂದು ತಕ್ಕಡಿ ಆಕಾಶದಿಂದ ಇಳಿದುಬರುವುದಾಗಿ ನಾನು ಕನಸಿನಲ್ಲಿ ಕಂಡೆ. ಅದರಲ್ಲಿ ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್‌ರನ್ನು(ರ) ತೂಕಮಾಡಲಾಯಿತು. ಹಝ್ರತ್ ಪೈಗಂಬರ್‌ರಿಗೆ(ಸ) ಹಝ್ರತ್ ಅಬೂಬಕರ್‌ಗಿಂತ(ರ) ಭಾರವಿತ್ತು. ಅನಂತರ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್‌ರನ್ನು(ರ) ತೂಕಮಾಡಲಾಯಿತು. ಆಗ ಹಝ್ರತ್ ಅಬೂಬಕರ್‌ರಿಗೆ(ರ) ಹೆಚ್ಚಿನ ಭಾರವಿತ್ತು. ಅನಂತರ ಹಝ್ರತ್ ಉಮರ್(ರ) ಮತ್ತು ಹಝ್ರತ್ ಉಸ್ಮಾನ್‌ರನ್ನು(ರ) ತೂಕಮಾಡಲಾಯಿತು. ಆಗ ಹಝ್ರತ್ ಉಮರ್‌ರಿಗೆ(ರ) ಹೆಚ್ಚಿನ ಭಾರವಿತ್ತು. ಅನಂತರ ತಕ್ಕಡಿಯನ್ನು ಎತ್ತಲಾಯಿತು. ಈ ಕನಸಿನಿಂದ ನಾವು ಹಝ್ರತ್ ಪೈಗಂಬರರ(ಸ) ಮುಖದಲ್ಲಿ ಅಸಂತುಷ್ಟಿಯನ್ನು ಕಂಡೆವು. ಕನಸಿನ ಕಾರಣದಿಂದ ಅವರು ಸಂತೋಷಗೊಂಡಿರಲಿಲ್ಲ. ಅದನ್ನು ಇಷ್ಟಪಟ್ಟಿರಲಿಲ್ಲ.
(ಸುನನ್ ಅಬುದಾವೂದ್, ಕಿತಾಬುಸ್ಸನ, ಹದೀಸ್–4634)

ಇನ್ನೊಂದು ವರದಿ ಹೀಗಿದೆ: ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಹೇಳಿದರು: ಇಂದು ರಾತ್ರಿ ಒಬ್ಬ ಸಾತ್ವಿಕನಾದ ವ್ಯಕ್ತಿಗೆ ಕನಸಿನಲ್ಲಿ ಹೀಗೆ ಕಾಣಿಸಲಾಯಿತು: ಹಝ್ರತ್ ಅಬೂಬಕರ್‌ರನ್ನು(ರ) ಹಝ್ರತ್ ಪೈಗಂಬರ್‌ರೊಂದಿಗೆ(ಸ) ಜೋಡಿಸಲಾಗಿತ್ತು. ಹಝ್ರತ್ ಉಮರ್‌ರನ್ನು(ರ) ಹಝ್ರತ್ ಅಬೂಬಕರ್‌ರೊಂದಿಗೆ(ರ) ಮತ್ತು ಹಝ್ರತ್ ಉಸ್ಮಾನ್‌ರನ್ನು(ರ) ಹಝ್ರತ್ ಉಮರ್‌ರೊಂದಿಗೆ(ರ). ಹಝ್ರತ್ ಜಾಬಿರ್ ಹೇಳುತ್ತಾರೆ: ಸಾತ್ವಿಕನಾದ ವ್ಯಕ್ತಿ ಎಂಬುದರಿಂದ ರಸೂಲುಲ್ಲಾಹ್(ಸ) ಉದ್ದೇಶಿಸಲಾಗಿತ್ತು. ಕೆಲವರನ್ನು ಕೆಲವರೊಂದಿಗೆ ಜೋಡಿಸುವುದರ ತಾತ್ಪರ್ಯವೇನೆಂದರೆ, ಈ ಜನರೇ ಈ ಕಾರ್ಯದ ಎಂದರೆ ಯಾವ ಧರ್ಮದೊಂದಿಗೆ ಅಲ್ಲಾಹನು ತನ್ನ ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಿಯೋಜಿಸಿದನೋ ಆ ಧರ್ಮದ ಸಂರಕ್ಷಕರು ಇವರಾಗಿರುವರು.
(ಸನನ್ ಅಬೂದಾವೂದ್, ಕಿತಾಬುಸ್ಸನ, ಹದೀಸ್–4636)

ಹಝ್ರತ್ ಸಮ್‌ರ ಬಿನ್ ಜುಂದುಬ್ ಹೇಳುತ್ತಾರೆ: ಒಬ್ಬನು ಹೇಳಿದನು: ಯಾ ರಸೂಲುಲ್ಲಾಹ್, ಆಕಾಶದಲ್ಲಿ ಒಂದು ಮಡಕೆ ತೂಗುತ್ತಿರುವುದಾಗಿ ನಾನು ಕನಸಿನಲ್ಲಿ ಕಂಡೆನು. ಮೊದಲು ಹಝ್ರತ್ ಅಬೂಬಕರ್(ರ) ಬಂದರು. ಅದರ ಎರಡೂ ಬದಿಯನ್ನು ಹಿಡಿದುಕೊಂಡು ಅದರಿಂದ ಸ್ವಲ್ಪ ಕುಡಿದರು. ಅನಂತರ ಹಝ್ರತ್ ಉಮರ್(ರ) ಬಂದರು. ಅವರು ಅದರ ಎರಡೂ ಬದಿಯನ್ನು ಹಿಡಿದುಕೊಂಡು ಸಾಕಷ್ಟು ಕುಡಿದರು. ಅನಂತರ ಹಝ್ರತ್ ಉಸ್ಮಾನ್(ರ) ಬಂದರು. ಅವರು ಸಹ ಅದರ ಎರಡೂ ಬದಿಯನ್ನು ಹಿಡಿದುಕೊಂಡು ಸಾಕಷ್ಟು ಕುಡಿದರು. ಅನಂತರ ಹಝ್ರತ್ ಅಲಿ(ರ) ಬಂದರು. ಅವರು ಅದರ ಎರಡೂ ಬದಿಯನ್ನು ಹಿಡಿದಾಗ ಅದರಿಂದ ಪಾನೀಯ ಹೊರಗೆ ಚೆಲ್ಲಿತು ಮತ್ತು ಸ್ವಲ್ಪ ಅವರ ಮೈ ಮೇಲೆ ಸಹ ಬಿತ್ತು. (ಸನನ್ ಅಬೂದಾವೂದ್, ಕಿತಾಬುಸ್ಸನ, ಹದೀಸ್–4636)

ಇದು ಸಹ ಅನುಕ್ರಮವಾಗಿ ಖಿಲಾಫತ್ತಿನ ಕಡೆಗೆ ಸೂಚನೆಯಾಗಿತ್ತು. ಹಝ್ರತ್ ಅಲಿಯ ಖಿಲಾಫತ್ ಕಾಲ ಕಷ್ಟದ ಕಾಲವೇ ಆಗಿತ್ತು. ಅದರಿಂದ ಸರಿಯಾಗಿ ಕುಡಿಯಲು ಅವರಿಗೆ ಅವಕಾಶ ಸಿಗಲಿಲ್ಲ ಎಂಬುದನ್ನು ಇದು ಸೂಚಿಸುತ್ತಿತ್ತು.

ಹಝ್ರತ್ ಉಸ್ಮಾನ್‌ರ(ರ) ಖಿಲಾಫತಿನ ಆಯ್ಕೆಗಾಗಿ ಸ್ಥಾಪಿಸಲಾದ ಮಜ್ಲಿಸೆ ಶೂರಾದ ಬಗ್ಗೆ ಹಝ್ರತ್ ಮುಸ್‌ವರ್ ಬಿನ್ ಮಖ್‌ರಮ ಹೇಳುತ್ತಾರೆ: ಹಝ್ರತ್ ಉಮರರ(ರ) ಮೇಲೆ ನಡೆದ ಹಲ್ಲೆಯ ನಂತರ ಅವರು ಗುಣಮುಖರಾದ ನಂತರ, ಅವರು ಯಾರನ್ನಾದರೂ ಮುಂದಿನ ಖಲೀಫರನ್ನಾಗಿ ನಿಶ್ಚಯಿಸಲು ಅವರೊಡನೆ ಪದೇ ಪದೇ ವಿನಂತಿ ಮಾಡಲಾಗುತ್ತಿತ್ತು. ಒಂದು ದಿನ ಅವರು ಪ್ರವಚನ ಪೀಠವನ್ನೇರಿದರು ಮತ್ತು ಕೆಲವು ಮಾತುಗಳನ್ನು ಹೇಳಿದರು ಅನಂತರ ಹೀಗೆ ಹೇಳಿದರು: ನಾನು ಮೃತಪಟ್ಟರೆ, ನಿಮ್ಮ ಸಂಗತಿಗಳ ಜವಾಬ್ದಾರಿಯನ್ನು ಹಝ್ರತ್ ಪೈಗಂಬರ್(ಸ) ಮರಣದ ಸಮಯದಲ್ಲಿ ಸಂಪ್ರೀತರಾಗಿದ್ದ 6 ಜನರಿಗೆ ಒಪ್ಪಿಸಲಾಗುವುದು. ಅವರು ಹೀಗಿವೆ: ಅಲಿ ಬಿನ್ ಅಬೂತಾಲಿಬ್, ಝುಬೇರ್ ಬಿನ್ ಅವಾಂ, ಅಬ್ದುರ್ರಹ್ಮಾನ್ ಬಿನ್ ಔಫ್, ಉಸ್ಮಾನ್ ಬಿನ್ ಅಫ್ಫಾನ್, ತಲ್‌ಹ ಬಿನ್ ಉಬೈದುಲ್ಲಾಹ್ ಮತ್ತು ಸಅದ್ ಬಿನ್ ಮಾಲಿಕ್. ಅನಂತರ ಹಝ್ರತ್ ಉಮರ್(ರ) ಹೇಳಿದರು: ಕೇಳಿರಿ. ನೀವೆಲ್ಲರೂ ತೀರ್ಮಾನ ಮಾಡುವಾಗ ಅಲ್ಲಾಹನ ಭಯವಿರಿಸಿಕೊಳ್ಳಲು ಮತ್ತು ವಿತರಣೆ ಮಾಡುವುದರಲ್ಲಿ ನ್ಯಾಯಯುತವಾಗಿ ವರ್ತಿಸಲು ಆದೇಶಿಸುತ್ತೇನೆ. ಅಬೂ ಜಾಫರ್ ವರದಿ ಮಾಡುತ್ತಾರೆ: ಖಿಲಾಫತ್ ಚುನಾವಣೆಯ ಮಜ್ಲಿಸೆ ಶೂರದ ಸದಸ್ಯರೊಡನೆ ಹಝ್ರತ್ ಉಮರ್(ರ) ಹೇಳಿದರು: ನಿಮ್ಮ ವಿಷಯದಲ್ಲಿ ಪರಸ್ಪರ ಸಮಾಲೋಚನೆ ನಡೆಸಿರಿ. ಅನಂತರ ಎರಡೂ ಕಡೆ ಎರಡು ಎರಡು ವೋಟ್ ಲಭಿಸಿದರೆ, ಪುನಃ ಸಮಾಲೋಚನೆ ನಡೆಸಿರಿ. ಅನಂತರ 4 ಮತ್ತು 2 ಮತಗಳೆಂದಾದರೆ, ಹೆಚ್ಚಿನ ಮತಗಳು ಲಭಿಸಿದವರನ್ನು ಸ್ವೀಕರಿಸಿರಿ. ಝೈದ್ ಬಿನ್ ಅಸ್ಲಮ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ – ಹಝ್ರತ್ ಉಮರ್ ಹೇಳಿದರು: ಎರಡೂ ಕಡೆ ಮೂರು ಮೂರು ಮತಗಳು ಎಂದಾದರೆ, ಯಾವ ಕಡೆ ಅಬ್ದುರ್ರಹ್ಮಾನ್ ಬಿನ್ ಔಫ್ ಇರುವರೋ ಅವರ ಮಾತನ್ನು ಕೇಳಿರಿ ಮತ್ತು ಅನುಸರಿಸಿರಿ.

ಅಬ್ದುರ್ರಹ್ಮಾನ್ ಬಿನ್ ಸಈದ್ ವರದಿ ಮಾಡುತ್ತಾರೆ: ಹಝ್ರತ್ ಉಮರ್(ರ) ಗಾಯಗೊಂಡರು. ಅವರು ಹೇಳಿದರು: ಹೇ ಸುಹೈಬ್, ನೀನು ಮೂರು ದಿನಗಳು ನಮಾಝಿನ ಇಮಾಮತ್ ವಹಿಸು. ಅವರನ್ನು ಇಮಾಮುಸ್‌ಸಲಾತ್ ಆಗಿ ನಿಶ್ಚಯಿಸಲಾಯಿತು. ಅನಂತರ ಹೇಳಿದರು: ಖಿಲಾಫತ್ ವಿಷಯದಲ್ಲಿ ಸಮಾಲೋಚನೆ ನಡೆಸಿರಿ. ಈ ವಿಷಯ ಆರು ಜನರಿಗೆ ಒಪ್ಪಿಸಲಾಗಿದೆ. ಅನಂತರ ನಿಮ್ಮನ್ನು ವಿರೋಧಿಸುವವರನ್ನು ಕೊಂದು ಹಾಕಿರಿ. ಹಝ್ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಹಝ್ರತ್ ಉಮರ್(ರ) ತನ್ನ ನಿಧನಕ್ಕೆ ಸ್ವಲ್ಪ ಮುಂಚಿತವಾಗಿ

ಹಝ್ರತ್ ಅಬೂತಲ್‌ಹರಿಗೆ ಸಂದೇಶ ಕಳುಹಿಸುತ್ತಾ ಹೀಗೆ ಹೇಳಿದರು: ಹೇ ಅಬೂತಲ್‌ಹ, ನೀನು ನಿನ್ನ ಸಮುದಾಯದಿಂದ 50 ಜನರನ್ನು ಒಟ್ಟುಸೇರಿಸಿಕೊಂಡು ಮಜ್ಲಿಸೆ ಶೂರಾದ ಸದಸ್ಯರ ಬಳಿಗೆ ಹೋಗು. ಅವರನ್ನು ಮೂರು ದಿನಗಳು ಆಗುವ ವರೆಗೆ ಬಿಟ್ಟುಹೋಗಬೇಡ. ಅವರು ತಮ್ಮಿಂದ ಒಂದು ಅಮೀರ್‌ರನ್ನು ಚುನಾಯಿಸುವ ವರೆಗೆ ಬಿಟ್ಟುಹೋಗಬೇಡ.ಹೇ ಅಲ್ಲಾಹ್ ನೀನು ಅವರ ಮೇಲೆ ನನ್ನ ಉತ್ತರಾಧಿಕಾರಿಯಾಗಿರುವಿ.

ಇಸ್‌ಹಾಖ್ ಬಿನ್ ಅಬ್ದುಲ್ಲಾಹ್ ವರದಿ ಮಾಡುತ್ತಾರೆ: ಹಝ್ರತ್ ಅಬೂತಲ್‌ಹ ತನ್ನ ಸಂಗಡಿಗರೊಂದಿಗೆ, ಹಝ್ರತ್ ಉಮರರ(ರ) ಖಬರ್ ತಯಾರು ಮಾಡುವ ಸಮಯದಲ್ಲಿ ಸ್ವಲ್ಪ ಸಮಯ ನಿಂತರು. ಅನಂತರ ಅವರು ಮಜ್ಲಿಸ್ ಶೂರದ ಸದಸ್ಯರೊಂದಿಗೆ ಇದ್ದರು. ಅನಂತರ ಮಜ್ಲಿಸ್ ಶೂರಾದ ಸದಸ್ಯರು ತಮ್ಮ ವಿಷಯವನ್ನು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್‌ರಿಗೆ(ರ) ಒಪ್ಪಿಸುತ್ತಾ ಹೀಗೆ ಹೇಳಿದರು: ನೀವು ಇಷ್ಟವಿರುವವರನ್ನು ಅಮೀರ್‌ರನ್ನಾಗಿ ಮಾಡಿರಿ. ಆ ಸಮಯದಲ್ಲಿ, ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹಝ್ರತ್ ಉಸ್ಮಾನ್‌ರ(ರ) ಕೈಯಿಂದ ಬೈಅತ್ ಸ್ವೀಕರಿಸುವ ತನಕ ಹಝ್ರತ್ ಅಬೂತಲ್‌ಹ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್‌ರ(ರ) ಮನೆ ಬಾಗಿಲಿನ ಬಳಿ ನಿಂತಿದ್ದರು.

ಹಝ್ರತ್ ಸಲ್ಮಾ ಬಿನ್ ಅಬೂಸಲ್ಮಾ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಮೊತ್ತಮೊದಲು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹಝ್ರತ್ ಉಸ್ಮಾನ್‌ರ(ರ) ಕೈಯಲ್ಲಿ ಬೈಅತ್ ಮಾಡಿದರು. ಅನಂತರ ಹಝ್ರತ್ ಅಲಿ(ರ) ಬೈಅತ್ ಮಾಡಿದರು. ಹಝ್ರತ್ ಉಮರ್(ರ) ಸ್ವತಂತ್ರಗೊಳಿಸಿದ ಗುಲಾಮರಾದ ಉಮರ್ ಬಿನ್ ಉಮ್ಯೈರ ತನ್ನ ತಾತರಿಂದ ವರದಿ ಮಾಡುತ್ತಾರೆ: ಮೊತ್ತಮೊದಲು ಹಝ್ರತ್ ಅಲಿ(ರ) ಹಝ್ರತ್ ಉಸ್ಮಾನ್‌ರ(ರ) ಕೈಯಲ್ಲಿ ಬೈಅತ್ ಮಾಡಿದ್ದನ್ನು ಅನಂತರ ಜನರು ಒಬ್ಬರ ನಂತರ ಒಬ್ಬರು ಬೈಅತ್ ಮಾಡುವುದನ್ನು ನಾನು ಕಂಡೆನು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-3, ಪುಟ-34-35, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 1996)

ಸಹೀಹ್ ಬುಖಾರಿಯಲ್ಲಿ ಹಝ್ರತ್ ಉಮರ್‌ರ ಕೊನೆಯ ರೋಗಾವಸ್ಥೆಯ ವೇಳೆ, ಅವರ ನಂತರ ಬರಲಿರುವ ಖಲೀಫರಿಗೆ ಇರುವ ಉಪದೇಶಗಳು ಮತ್ತು ಮಜ್ಲಿಸೆ ಶೂರಕ್ಕೆ ಸಂಬಂಧಿಸಿದ ವಿವರಗಳು ಹೀಗೆ ಲಭಿಸುತ್ತದೆ: ಜನರು ಹೇಳಿದರು: ಯಾ ಅಮೀರಲ್ ಮೂಮಿನೀನ್, ವಸಿಯ್ಯತ್ ಮಾಡಿರಿ. ಯಾರನ್ನಾದರೂ ಖಲೀಫರನ್ನಾಗಿ ನಿಶ್ಚಯಿಸಿರಿ. ಹಝ್ರತ್ ಪೈಗಂಬರ್(ಸ) ಮರಣದ ಸಮಯದಲ್ಲಿ ಸಂಪ್ರೀತರಾಗಿದ್ದ 6 ಜನರಲ್ಲದೆ ಬೇರೆ ಯಾರೂ ಖಿಲಾಫತ್ ಸ್ಥಾನಕ್ಕೆ ಅರ್ಹರೆಂದು ನನಗೆ ಅನಿಸುವುದಿಲ್ಲ. ಹೀಗೆ ಅವರು ಅಲಿ ಬಿನ್ ಅಬೂತಾಲಿಬ್, ಝುಬೇರ್ ಬಿನ್ ಅವಾಂ, ಅಬ್ದುರ್ರಹ್ಮಾನ್ ಬಿನ್ ಔಫ್, ಉಸ್ಮಾನ್ ಬಿನ್ ಅಫ್ಫಾನ್, ತಲ್‌ಹ ಬಿನ್ ಉಬೈದುಲ್ಲಾಹ್ ಮತ್ತು ಸಅದ್ ಬಿನ್ ಮಾಲಿಕ್‌ರ ಹೆಸರುಗಳನ್ನು ಹೇಳಿದರು. ಇವರೊಂದಿಗೆ ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್ ಸಹ ಸಮಾಲೋಚನೆಯಲ್ಲಿ ಭಾಗವಹಿಸುವರು ಆದರೆ ಅವರಿಗೆ ಖಿಲಾಫತಿನಲ್ಲಿ ಯಾವುದೇ ಹಕ್ಕಿಲ್ಲವೆಂದು ಹೇಳಿದರು. ಇನ್ನು ನಾನು ಹಿಂದೆ ಪ್ರಸ್ತಾಪಿಸಿದ ಒಂದು ವರದಿಯನ್ನು ಸಂಕ್ಷೇಪವಾಗಿ ಇಲ್ಲಿ ಹೇಳುತ್ತೇನೆ. ಹೇಗಿದ್ದರೂ, ಹಝ್ರತ್ ಉಮರರ(ರ) ನಿಧನದ ನಂತರ, ಅವರನ್ನು ದಫನ್ ಮಾಡಲಾದ ನಂತರ ಹಝ್ರತ್ ಉಮರ್(ರ) ಹೇಳಿದ್ದ ಆರು ಜನರು ಒಟ್ಟುಸೇರಿದರು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹೇಳಿದರು: ನಿಮ್ಮ ಸಂಗತಿಯನ್ನು ನಿಮ್ಮಿಂದ ಮೂರು ವ್ಯಕ್ತಿಗಳಿಗೆ ಒಪ್ಪಿಸಿರಿ. ಹಝ್ರತ್ ಝುಬೇರ್ ಹೇಳಿದರು: ನಾನು ನನ್ನ ಹಕ್ಕನ್ನು ಹಝ್ರತ್ ಅಲಿಗೆ ಕೊಡುತ್ತೇನೆ. ಹಝ್ರತ್ ತಲ್‌ಹ ಹೇಳಿದರು: ನಾನು ನನ್ನ ಹಕ್ಕನ್ನು ಹಝ್ರತ್ ಉಸ್ಮಾನ್‌ರಿಗೆ ಕೊಡುತ್ತೇನೆ. ಹಝ್ರತ್ ಸಅದ್ ಹೇಳಿದರು: ನಾನು ನನ್ನ ಹಕ್ಕನ್ನು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್‌ರಿಗೆ ಕೊಡುತ್ತೇನೆ. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್, ಹಝ್ರತ್ ಅಲಿ ಮತ್ತು ಹಝ್ರತ್ ಉಸ್ಮಾನ್‌ರೊಡನೆ ಹೇಳಿದರು: ನಿಮ್ಮಲ್ಲಿ ಒಬ್ಬರು ಇದರಿಂದ ಬಿಟ್ಟುನಿಲ್ಲುವುದಾದರೆ, ಬಾಕಿಯುಳಿದ ವ್ಯಕ್ತಿಗೆ ನಾವು ಈ ಹುದ್ದೆಯನ್ನು ಒಪ್ಪಿಸುವೆವು. ಅಲ್ಲಾಹನು ಮತ್ತು ಇಸ್ಲಾಂ ಅವನ ಮೇಲ್ನೋಟಗಾರರಾಗಿರುವರು. ಎಂದರೆ ಖಿಲಾಫತ್ ಹುದ್ದೆ ಅವರಿಗೆ ಒಪ್ಪಿಸಲಾಗುವುದು. ಅವರಲ್ಲಿ ಶ್ರೇಷ್ಠರಾದವರನ್ನು ಎರಡನೇ ವ್ಯಕ್ತಿ ಆಯ್ಕೆ ಮಾಡಲಿ. ಈ ಮಾತು ಇಬ್ಬರು ಶ್ರೇಷ್ಠ ವ್ಯಕ್ತಿಗಳನ್ನೂ ಮೌನವಾಗಿಸಿತು. ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹೇಳಿದರು: ನೀವು ಈ ಸಂಗತಿಯನ್ನು ಇತ್ಯರ್ಥ ಮಾಡಲು ಅದಕ್ಕೆ ಒಂದು ತೀರ್ಮಾನ ಮಾಡಿಕೊಳ್ಳಲು ನನಗೆ ಒಪ್ಪಿಸುತ್ತೀರ? ಅಲ್ಲಾಹನು ನನ್ನ ಮೇಲ್ನೋಟಗಾರನಾಗಿದ್ದಾನೆ. ನಿಮ್ಮಲ್ಲಿ ಶ್ರೇಷ್ಠರಾದವರನ್ನು ಆಯ್ಕೆ ಮಾಡುವುದರಲ್ಲಿ ನಾನು ಯಾವುದೇ ಕೊರತೆ ಮಾಡುವುದಿಲ್ಲ. ಆದ್ದರಿಂದ ಈ ಸಂಗತಿಯನ್ನು ನನಗೆ ಒಪ್ಪಿಸಿರಿ. ಈಗ ಈ ಸಮಿತಿಯ ಅಧ್ಯಕ್ಷತೆಯನ್ನು ನಾನು ವಹಿಸುತ್ತೇನೆ. ಹೇಗಿದ್ದರೂ ಅವರು ಹೇಳಿದರು: ಅಲ್ಲಾಹನು ನನ್ನ ಮೇಲ್ನೋಟಗಾರನಾಗಿದ್ದಾನೆ. ನಾನು ನ್ಯಾಯಯುತವಾಗಿ ತೀರ್ಮಾನ ಮಾಡುವೆನು. ಅನಂತರ ಅಬ್ದುರ್ರಹ್ಮಾನ್ ಬಿನ್ ಔಫ್ ಇಬ್ಬರಲ್ಲಿ ಒಬ್ಬರ ಕೈಯನ್ನು ಹಿಡಿದುಕೊಂಡು ಒಂದು ಬದಿಗೆ ಸರಿದರು. ಮತ್ತು ಹೀಗೆ ಹೇಳಿದರು: ನೀವು ಹಝ್ರತ್ ಪೈಗಂಬರರ(ಸ) ಸಂಬಂಧಿಕರಾಗಿದ್ದೀರಿ. ಇಸ್ಲಾಮಿನಲ್ಲಿ ನಿಮಗಿರುವ ಸ್ಥಾನ ನಿಮಗೆ ಗೊತ್ತಿದೆ. ಅಲ್ಲಾಹನು ನಿಮ್ಮ ಮೇಲ್ನೋಟಗಾರನಾಗಿದ್ದಾನೆ. ನಿಮ್ಮನ್ನು ನಾನು ಅಮೀರರನ್ನಾಗಿ ಮಾಡಿದರೆ, ನೀವು ಖಂಡಿತವಾಗಿಯೂ ನ್ಯಾಯಯುತವಾಗಿ ವರ್ತಿಸುತ್ತೀರಿ ತಾನೆ? ನಾನು ಉಸ್ಮಾನ್‌ರನ್ನು ಅಮೀರರನ್ನಾಗಿ ಮಾಡಿದರೆ, ನೀವು ಅವರ ಮಾತುಗಳನ್ನು ಅನುಸರಿಸುವಿರಾ? ಅವರ ಆದೇಶವನ್ನು ಅನುಸರಿಸುತ್ತೀರಾ? ಎಂದರೆ ಮೊದಲು ಹಝ್ರತ್ ಅಲಿಯನ್ನು ಕೊಂಡುಹೋಗಲಾಗಿತ್ತು. ಅನಂತರ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಎರಡನೇ ವ್ಯಕ್ತಿಯನ್ನು ಒಂದು ಬದಿಗೆ ಕೊಂಡುಹೋದರು. ಎಂದರೆ ಈಗ ಹಝ್ರತ್ ಉಸ್ಮಾನ್‌ರ ಸರದಿಯಾಗಿತ್ತು. ಅವರೊಂದಿಗೂ ಹೀಗೆಯೇ ಹೇಳಿದರು. ಅವರಿಂದಲೂ ದೃಢಪ್ರತಿಜ್ಞೆ ಪಡೆದರು. ಅನಂತರ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹಝ್ರತ್ ಉಸ್ಮಾನ್‌ರೊಡನೆ ಹೇಳಿದರು: ನೀವು ನಿಮ್ಮ ಕೈಯನ್ನು ಎತ್ತಿರಿ. ಹೀಗೆ ಅವರು ಹಝ್ರತ್ ಉಸ್ಮಾನ್‌ರ ಕೈಯಲ್ಲಿ ಬೈಅತ್ ಮಾಡಿದರು. ಅನಂತರ ಹಝ್ರತ್ ಅಲಿ(ರ) ಸಹ ಬೈಅತ್ ಮಾಡಿದರು. ಅನಂತರ ಮನೆಯಲ್ಲಿದ್ದ ಜನರು ಬಂದರು. ಅವರು ಸಹ ಬೈಅತ್ ಮಾಡಿದರು. (ಸಹೀಹ್ ಅಲ್‌ಬುಖಾರಿ, ಕಿತಾಬ್ ಫಝಾಇಲುಸ್ಸಹಾಬ, ಹದೀಸ್-3700)

ಹಝ್ರತ್ ಉಮರ್‌ರ(ರ) ವಫಾತ್ ಮತ್ತು ಹಝ್ರತ್ ಉಸ್ಮಾನ್(ರ) ಖಲೀಫರಾಗಿ ಚುನಾಯಿತಗೊಂಡ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಉಮರ್(ರ) ಗಾಯಗೊಂಡು, ಈಗ ಅವರ ಕೊನೆಯ ಸಮಯ ಸಮೀಪವಾಗಿದೆ ಎಂದು ತೋರಿದಾಗ, ತಮ್ಮಲ್ಲಿ ಒಬ್ಬರನ್ನು ಖಲೀಫರನ್ನಾಗಿ ನಿಶ್ಚಯಿಸಲು ಅವರು 6 ವ್ಯಕ್ತಿಗಳ ಕುರಿತು ವಸಿಯ್ಯತ್ ಮಾಡಿದರು. ಆ 6 ವ್ಯಕ್ತಿಗಳು ಇವರಾಗಿದ್ದರು: ಹಝ್ರತ್ ಉಸ್ಮಾನ್, ಹಝ್ರತ್ ಅಲಿ, ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್, ಹಝ್ರತ್ ಸಅದ್ ಬಿನ್ ವಖಾಸ್, ಹಝ್ರತ್ ಝುಬೇರ್, ಹಝ್ರತ್ ತಲ್‌ಹ. ಇವರೊಂದಿಗೆ ಅವರು ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್‌ರನ್ನು ಸಹ ಸಮಾಲೋಚನೆಯಲ್ಲಿ ಭಾಗವಹಿಸಲು ನಿಶ್ಚಯಿಸಿದರು. ಆದರೆ ಅವರನ್ನು ಖಲೀಫರಾಗಲು ಅರ್ಹರೆಂದು ಹೇಳಲಿಲ್ಲ. ಈ ಎಲ್ಲರೂ ಸೇರಿ ಮೂರು ದಿನಗಳಲ್ಲಿ ತೀರ್ಮಾನ ಮಾಡಲು ವಸಿಯ್ಯತ್ ಮಾಡಿದರು. ಸುಹೈಬ್‌ರನ್ನು ಇಮಾಮುಸ್ಸಲಾತ್ ಆಗಿ ನಿಶ್ಚಯಿಸಿದರು. ಸಮಾಲೋಚನೆಯ ಮೇಲ್ನೋಟವನ್ನು ಮಿಖ್‌ದಾದ್ ಬಿನ್ ಅಸ್‌ವದ್‌ರಿಗೆ ಒಪ್ಪಿಸಿದರು. ಈ ಎಲ್ಲರೂ ಸೇರಿಕೊಂಡು ತೀರ್ಮಾನವಾಡುವಂತೆ ಒತ್ತಾಯಪಡಿಸಬೇಕೆಂದು ಅವರಿಗೆ ನಿರ್ದೇಶನ ಕೊಟ್ಟಿದ್ದರು. ಅವರು ಹೀಗೆ ಸ್ವತಃ ಖಡ್ಗವನ್ನು ಹಿಡಿದುಕೊಂಡು ಕಾವಲು ನಿಂತಿದ್ದರು. ಹಝ್ರತ್ ಉಮರ್(ರ) ಹೇಳಿದರು: ಯಾರಿಗೆ ಹೆಚ್ಚಿನ ಮತಗಳು ಸಿಗುವುದೋ ಅವರನ್ನು ಬೈಅತ್ ಮಾಡಿರಿ. ಯಾರಾದರೂ ನಿರಾಕರಿಸಿದರೆ, ಅವರನ್ನು ಕೊಲ್ಲಿರಿ. ಆದರೆ ಎರಡೂ ಕಡೆ ಮೂರು ಮೂರು ಎಂದಾದರೆ, ಅಬ್ದುಲ್ಲಾಹ್ ಬಿನ್ ಉಮರ್ ಯಾರನ್ನು ಆಯ್ಕೆ ಮಾಡುವರೋ ಅವರನ್ನು ಖಲೀಫರನ್ನಾಗಿ ಮಾಡಿರಿ. ಈ ತೀರ್ಮಾನವನ್ನು ಅವರು ಒಪ್ಪದಿದ್ದರೆ, ಅಬ್ದುರ್ರಹ್ಮಾನ್ ಬಿನ್ ಔಫ್ ಯಾರ ಕಡೆಯಿರುವರೋ ಅವರನ್ನು ಆಯ್ಕೆ ಮಾಡಿರಿ. ಐವರು ಸಹಾಬಿಯರು ಸಮಾಲೋಚನೆ ನಡೆಸಿದರು. ಏಕೆಂದರೆ ತಲ್‌ಹ ಆ ಸಮಯದಲ್ಲಿ ಮದೀನದಲ್ಲಿ ಇದ್ದಿರಲಿಲ್ಲ. ಆದರೆ ಯಾವುದೇ ತೀರ್ಮಾನ ಮಾಡಲಾಗಲಿಲ್ಲ. ದೀರ್ಘವಾದ ಚರ್ಚೆಯ ನಂತರ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಹೇಳಿದರು: ನಿಮ್ಮಲ್ಲಿ ಯಾರಾದರೂ ತಮ್ಮ ಹೆಸರನ್ನು ವಾಪಾಸ್ಸು ಮಾಡಲು ಇಚ್ಛಿಸುವರಾದರೆ ಅವರ ಹೇಳಲಿ. ಎಲ್ಲರೂ ಮೌನವಾಗಿದ್ದಾಗ, ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಹೇಳಿದರು: ಮೊತ್ತಮೊದಲು ನಾನು ನನ್ನ ಹೆಸರನ್ನು ವಾಪಾಸ್ಸು ಮಾಡುತ್ತೇನೆ. ಅನಂತರ ಹಝ್ರತ್ ಉಸ್ಮಾನ್(ರ) ಹೇಳಿದರು: ನಾನು ಸಹ ವಾಪಸ್ಸು ಮಾಡುತ್ತೇನೆ. ಅನಂತರ ಉಳಿದ ಇಬ್ಬರೂ ಸಹ ಹೀಗೆಯೇ ಹೇಳಿದರು. ಹಝ್ರತ್ ಅಲಿ(ರ) ಸುಮ್ಮನಿದ್ದರು. ಕೊನೆಗೆ ತೀರ್ಮಾನದಲ್ಲಿ ಯಾವುದೇ ರಿಯಾಯಿತಿ ಮಾಡುವುದಿಲ್ಲವೆಂದು ಅವರು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್‌ರೊಡನೆ ಪ್ರತಿಜ್ಞೆ ಮಾಡಿದರು.ಅವರು ಪ್ರತಿಜ್ಞೆ ಮಾಡಿದರು. ಹೀಗೆ ಎಲ್ಲ ಜವಾಬ್ದಾರಿಗಳು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್‌ರ ಮೇಲೆ ಒಪ್ಪಿಸಲ್ಪಟ್ಟಿತು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಮೂರು ದಿನಗಳು ಮದೀನದ ಪ್ರತಿಯೊಂದು ಮನೆಗೆ ಹೋದರು. ಯಾರ ಖಿಲಾಫತಿನ ಪರವಾಗಿ ಇದ್ದೀರಿ ಎಂದು ಪುರುಷರು ಮತ್ತು ಸ್ತ್ರೀಯರೊಂದಿಗೆ ಕೇಳಿದರು. ನಾವು ಹಝ್ರತ್ ಉಸ್ಮಾನ್‌ರ(ರ) ಖಿಲಾಫತನ್ನು ಒಪ್ಪುತ್ತೇವೆ ಎಂದು ಎಲ್ಲರೂ ಹೇಳಿದರು. ಹೀಗೆ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹಝ್ರತ್ ಉಸ್ಮಾನ್‌ರ ಪರವಾಗಿ ತೀರ್ಮಾನ ಮಾಡಿದರು ಮತ್ತು ಅವರು ಖಲೀಫರಾದರು. (ಖಿಲಾಫತೆ ರಾಶಿದ, ಅನ್ವಾರುಲ್ ಉಲೂಮ್, ಸಂಪುಟ-15, ಪುಟ-484-485)

ಅಲ್ಲಾಮ ಬಿನ್ ಸಅದ್ ಬರೆಯುತ್ತಾರೆ: ಹಿಜರೀ 23, ಝುಲ್‌ಹಜ್ಜ 29ರಂದು, ಸೋಮವಾರ ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್ ಜನರ ಬೈಅತ್ ಪಡೆದರು. ಸಬ್ರ ವರದಿ ಮಾಡುತ್ತಾರೆ: ಹಝ್ರತ್ ಉಸ್ಮಾನ್(ರ) ಖಲೀಫರಾದಾಗ, ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್ ಹೇಳಿದರು: ನಾವು ಬಾಕಿಯುಳಿದ ವ್ಯಕ್ತಿಗಳಲ್ಲಿ ಅತ್ಯಂತ ಉತ್ತಮರಾದ ವ್ಯಕ್ತಿಯನ್ನು ಚುನಾಯಿಸಿದ್ದೇವೆ. ಅವರ ಆಯ್ಕೆಯಲ್ಲಿ ನಾವು ಯಾವುದೇ ತಪ್ಪು ಮಾಡಿಲ್ಲ.

ಹಝ್ರತ್ ಉಸ್ಮಾನ್(ರ) ಖಲೀಫರಾದ ನಂತರ ಮಾಡಿದ ಮೊದಲ ಭಾಷಣದ ಬಗ್ಗೆ ಇಸ್ಮಾಈಲ್ ಬಿನ್ ಇಬ್ರಾಹೀಂ ಬಿನ್ ಅಬ್ದುರ್ರಹ್ಮಾನ್ ಬಿನ್ ಅಬ್ದುಲ್ಲಾಹ್ ಬಿನ್ ಅಬೂರಬೀಆ ಮಖ್ಝೂಮಿ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಉಸ್ಮಾನ್‌ರ ಬೈಅತ್ ಮಾಡಲಾದಾಗ, ಅವರು ಜನರ ಮುಂದೆ ಬಂದು ಅವರನ್ನು ಸಂಬೋಧಿಸಿ ಭಾಷಣ ಮಾಡಿದರು. ಅವರು ಅಲ್ಲಾಹನ ಸ್ತುತಿ ಮತ್ತು ಪರಿಶುದ್ಧಿಯನ್ನು ಕೊಂಡಾಡಿದರು. ಅವರು ಹೇಳಿದರು: ಹೇ ಜನರೇ, ಆರಂಭದಲ್ಲಿ ಮಾಡಲಾಗುವ ಕೆಲಸ ಕಷ್ಟವಾಗಿರುತ್ತದೆ. ಇಂದಿನ ನಂತರ ಇನ್ನೂ ದಿನಗಳು ಬರುವುವು. ನಾನು ಜೀವಂತವಾಗಿರುವನಾದರೆ, ನಿಮ್ಮ ಮುಂದೆ ಅನುಯೋಜ್ಯವಾದ ಭಾಷಣ ಮಾಡುವೆನು. ಇನ್‌ಶಾ ಅಲ್ಲಾಹ್. ಇಂದು ಸಂಕ್ಷೇಪವಾಗಿ ಹೇಳುತ್ತಿದ್ದೇನೆ. ನಾನು ಭಾಷಣಗಾರನೇನೂ ಅಲ್ಲ. ಆದರೆ ಅಲ್ಲಾಹನು ನನಗೆ ಕಲಿಸಿಕೊಡುವನು. ಭಾಷಣ ಮಾಡುವ ರೀತಿಯನ್ನು ಸಹ ಅಲ್ಲಾಹನು ಕಲಿಸುವನು. (ಅತ್ತಬಖಾತುಲ್

ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–35, ದಾರ್ ಅಹ್ಯಾಉತ್ತುರಾಸುಲ್ ಅರಬಿ 1996)

ಬದ್ರ್ ಬಿನ್ ಉಸ್ಮಾನ್ ತನ್ನ ಚಿಕ್ಕಪ್ಪರಿಂದ ವರದಿ ಮಾಡುತ್ತಾರೆ: ಸಮಾಲೋಚನೆ ಸಮಿತಿ ಹಝ್ರತ್ ಉಸ್ಮಾನ್‌ರ(ರ) ಬೈಅತ್ ಮಾಡಿದಾಗ, ಹಝ್ರತ್ ಉಸ್ಮಾನ್(ರ) ಎಲ್ಲರಿಗಿಂತ ದುಃಖಿತರಾದ ಅವಸ್ಥೆಯಲ್ಲಿ ಹೊರಗೆ ಬಂದರು. ಅನಂತರ ಅವರು ಹಝ್ರತ್ ಪೈಗಂಬರರ(ಸ) ಮಿಂಬರ್ ಮೇಲೆ ನಿಂತು ಜನರನ್ನು ಸಂಬೋಧಿಸಿದರು. ಅವರು ಅಲ್ಲಾಹನ ಸ್ತುತಿ ಮತ್ತು ಪರಿಶುದ್ಧಿಯನ್ನು ಕೊಂಡಾಡಿದರು. ಹಝ್ರತ್ ಪೈಗಂಬರರ(ಸ) ಮೇಲೆ ದುರೂದ್ ಪ್ರಾರ್ಥನೆ ಮಾಡಿದರು. ಅನಂತರ ಹೇಳಿದರು: ಖಂಡಿತವಾಗಿಯೂ ನೀವು ಬಿಟ್ಟುಹೋಗಲೇ ಬೇಕಾದ ಒಂದು ಮನೆಯಲ್ಲಿ, ಎಂದರೆ ಇಹಲೋಕದಲ್ಲಿ ಇದ್ದೀರಿ ಮತ್ತು ನೀವು ಆಯುಸ್ಸಿನ ಕೊನೆಯ ಹಂತಗಳಲ್ಲಿ ಇದ್ದೀರಿ. ಆದ್ದರಿಂದ ಮರಣಕ್ಕೆ ಮುಂಚಿತವಾಗಿ ಮಾಡಲು ಸಾಧ್ಯವಾದಷ್ಟು ಒಳಿತುಗಳನ್ನು ಮಾಡಿರಿ. ಖಂಡಿತವಾಗಿಯೂ ನೀವು ಮರಣದ ಹಿಡಿತದಲ್ಲಿ ಇದ್ದೀರಿ. ಈ ಶತ್ರು ಬೆಳಿಗ್ಗೆ ಅಥವಾ ಸಂಜೆ ನಿಮ್ಮ ಮೇಲೆ ಹಲ್ಲೆ ನಡೆಸುವನು. ಕೇಳಿರಿ, ಖಂಡಿತವಾಗಿಯೂ ಲೋಕವು ಮೋಸ ಮತ್ತು ವಂಚನೆಯಿಂದ ಅಲಂಕರಿಸಲ್ಪಟ್ಟಿದೆ. ಆದ್ದರಿಂದ ನಿಮ್ಮನ್ನು ಲೌಕಿಕವಾದ ಜೀವಿತ ಮೋಸಗೊಳಿಸದಿರಲಿ. ಅಲ್ಲಾಹನ ಕುರಿತು ಅತ್ಯಂತ ಮೋಸಗಾರನಾದ ಶೈತಾನನು ನಿಮ್ಮನ್ನು ಮೋಸಗೊಳಿಸದಿರಲಿ. ಗತಿಸಿಹೋದ ಜನರಿಂದ ಪಾಠ ಕಲಿಯಿರಿ. ಅನಂತರ ಬಹಳವಾಗಿ ಪರಿಶ್ರಮಿಸಿರಿ ಮತ್ತು ಅಜಾಗರೂಕರಾಗದಿರಿ. ಏಕೆಂದರೆ ಅಲ್ಲಾಹನು ನಿಮ್ಮನ್ನು ಗಮನಿಸದವನಲ್ಲ. ಭೂಮಿಯನ್ನು ವಿಶಾಲಗೊಳಿಸಿ ಅದರಲ್ಲಿ ನೆಲೆಸಿಕೊಂಡು ಒಂದು ದೀರ್ಘಕಾಲ ಅದರಿಂದ ಪ್ರಯೋಜನ ಪಡೆಯುತ್ತಿದ್ದ ಲೌಕಿಕರಾದ ಜನರು ಮತ್ತು ಅವರ ಸಹೋದರರು ಎಲ್ಲಿದ್ದಾರೆ? ಅಲ್ಲಾಹನು ಅವರನ್ನು ಕಿತ್ತೆಗೆದು ಹೊರಗೆ ಎಸೆಯಲಿಲ್ಲವೇ? ಆದ್ದರಿಂದ ನೀವು ಸಹ ಲೋಕವನ್ನು, ಅಲ್ಲಾಹನು ಎಸೆದ ಜಾಗದಲ್ಲಿ ಎಸೆಯಿರಿ ಮತ್ತು ಪರಲೋಕವನ್ನು ಬಯಸಿರಿ, ಪರಲೋಕವನ್ನು ಬೇಡಿರಿ. ಏಕೆಂದರೆ ಅಲ್ಲಾಹನು ಪರಲೋಕ ಮತ್ತು ಅದರ ಅತ್ಯುತ್ತಮ ವಸ್ತುಗಳ ಉದಾಹರಣೆ ಕೊಡುತ್ತಾ ಅಲ್ಲಾಹನು ಹೀಗೆ ಹೇಳಿದ್ದಾನೆ: **ವಝ್ರಿಬ್ ಲಹುಮ್ ಮಸಲಲ್ ಹಯಾತಿದ್ದುನಿಯಾ ಕಮಾಇಂ ಅನ್‌ಝಲ್‌ನಾಹು ಮಿನಸ್ಸಮಾಇ ಫಖ್‌ತಲತ ಬಿಹೀ ನಬಾತುಲ್ ಅರ್‌ಝಿ ಫಸ್‌ಬಹ ಹಶೀಮನ್ ತಝ್‌ರೂರುಹುರ್ರಿಯಾಹು ವಕಾನಲ್ಲಾಹು ಅಲಾ ಕುಲ್ಲಿ ಶೈಇಮ್ಮುಖ್ತದಿರನ್. ಅಲ್‌ಮಾಲು ವಲ್‌ಬನೂನ ಝೀನತುಲ್ ಹಯಾತಿದ್ದುನ್‌ಯಾ ವಲ್‌ಬಾಖಿಯಾತುಸ್ಸಾಲಿಹಾತು ಖೈರುನ್ ಇಂದ ರಬ್ಬಿಕ ಸವಾಬವ್ವ ಖೈರುನ್ ಅಮಲ** (ಅಲ್‌ಕಹಫ್:46–47)

ಎಂದರೆ: ಇಹಲೋಕ ಜೀವನದ ಹೋಲಿಕೆಯನ್ನು ನೀನು ಅವರಿಗೆ ವಿವರಿಸಿಕೊಡು. ಅದು ನಾವು ಆಕಾಶದಿಂದ ಸುರಿಸುವ ಮಳೆಯಂತಾಗಿದೆ. ಅದರೊಂದಿಗೆ ಭೂಮಿಯ ಸಸ್ಯಗಳು ಬೆರೆತು ಬೆಳೆಯುತ್ತವೆ. ಅನಂತರ ಅವು ಒಣಗಿ ಚೂರು ಚೂರಾಗಿ ಗಾಳಿಯಲ್ಲೆಲ್ಲ ಚೆಲ್ಲಾಪಿಲ್ಲಿಯಾಗುತ್ತವೆ. ಅಲ್ಲಾಹನು ಎಲ್ಲ ಕಾರ್ಯದಲ್ಲೂ ಸರ್ವಶಕ್ತನಾಗಿದ್ದಾನೆ.

ಸಂಪತ್ತು ಮತ್ತು ಸಂತಾನಗಳು ಇಹಲೋಕ ಜೀವನದ ಸೊಬಗು. ಆದರೆ ಬಾಳಿಕೆ ಬರುವ ಪುಣ್ಯಕರ್ಮಗಳೇ ನಿನ್ನ ಪ್ರಭುವಿನ ಬಳಿ ಪ್ರತಿಫಲದ ದೃಷ್ಟಿಯಲ್ಲಿ ಅತ್ಯುತ್ತಮವಾಗಿವೆ. ಹಾಗೂ ನಿರೀಕ್ಷೆಯ ದೃಷ್ಟಿಯಲ್ಲೂ ಉತ್ತಮವಾಗಿವೆ. ಅನಂತರ ಜನರು ಅವರ ಕೈಯಲ್ಲಿ ಬೈಅತ್ ಮಾಡಲು ಬೇಗನೇ ಮುಂದೆ ಬಂದರು.

(ತಾರೀಖ್ ಅತ್ತಿಬರಿ, ಸಂಪುಟ–5, ಪುಟ–87, ದಾರುಲ್ ಫಿಕರ್ ಬೈರೂತ್ 2002)

ಹಝ್ರತ್ ಉಸ್ಮಾನ್‌ರ(ರ) ಖಿಲಾಫತ್ ಕಾಲದಲ್ಲಿ ಈ ಕೆಳಗಿನ ಪ್ರದೇಶಗಳಲ್ಲಿ ಅಲ್ಲಾಹನು ಮುಸ್ಲಿಮರಿಗೆ ವಿಜಯಗಳನ್ನು ದಯಪಾಲಿಸಿದನು. ಆಫ್ರಿಕದ ಮೇಲಿನ ವಿಜಯ, ಇದು ಅಲ್‌ಜೀರಿಯ ಮತ್ತು ಮರಾಕಿಶಿನ ಪ್ರದೇಶವಾಗಿದೆ. ಹಿಜರೀ 27ರಲ್ಲಿ, ಫತ್‌ಹೇ ಉಂದ್ಲುಸ್ ಎಂದರೆ ಸ್ಪೇನಿನ ಮೇಲಿನ ವಿಜಯ, ಹಿಜರೀ 28ರಲ್ಲಿ ಫತ್‌ಹೇ ಖುಬ್ರಸ್, ಎಂದರೆ ಸೈಪ್ರಸ್ಸಿನ ಮೇಲಿನ ವಿಜಯ, ಹಿಜರೀ 30ರಲ್ಲಿ ತಬರಿಸ್ತಾನದ ಮೇಲಿನ ವಿಜಯ, ಹಿಜರೀ 31ರಲಿ ಫತ್‌ಹೇ ಸವಾರಿ, ಫತ್‌ಹೇ ಅರ್‌ಮೇನಿಯ, ಫತ್‌ಹೇ ಖುರಾಸಾನ್, ರೋಮ್ ನಗರದ ಕಡೆಗೆ ಮುಂದಾಗುವಿಕೆ, ತಾಲಿಖಾನ್, ಖುರ್‌ಯಾಬ್, ಜೂರ್ಝಾ ಜಾನ್ ಮತ್ತು ತಖಾರಿಸ್ತಾನಿನ ಮೇಲಿನ ವಿಜಯ ಮತ್ತು ಹಿಜರೀ 32ರಲ್ಲಿ ಬಲಖ್‌ನ ಮೇಲಿನ ಕಾರ್ಯಸಾಧನೆ. ಇದಲ್ಲದೆ, ಹಝ್ರತ್ ಉಸ್ಮಾನ್‌ರ(ರ) ಕಾಲದಲ್ಲಿ ಭಾರತದಲ್ಲಿ ಇಸ್ಲಾಂ ಪ್ರವೇಶಿಸಿತ್ತು ಎಂಬ ಪ್ರಸ್ತಾಪ ಸಹ ಇದೆ. (ಸೀರತುಸ್ಸಹಾಬ, ಸಂಪುಟ–1, ಪುಟ–165–168, ದಾರುಲ್ ಇಶಾಅತ್ ಕರಾಚಿ 2004) (ತಾರೀಖ್ ಅತ್ತಿಬರಿ, ಸಂಪುಟ–2, ಪುಟ–625, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1987) (ಬರ್ರೆ ಸಗೀರ್ ಮೆ ಇಸ್ಲಾಮ್ ಕೆ ಅವ್ವಲೀನ್ ನಖೂಶ್, ಪುಟ–63,65)

ಈ ವಿಜಯಗಳ ಸಂಕ್ಷಿಪ್ತವಾದ ವಿವರಣೆ ಹೀಗಿವೆ:

ಹಿಜರೀ 27ರಲ್ಲಿ ಹಝ್ರತ್ ಉಸ್ಮಾನ್(ರ) ಹಝ್ರತ್ ಅಬ್ದುಲ್ಲಾಹ್ ಬಿನ್ ಅಬೀ ಸರಹ್‌ರನ್ನು 10,000 ಸಾವಿರದಷ್ಟು ಸೈನಿಕರನ್ನು ಒಳಗೊಂಡ ಸೈನ್ಯವನ್ನು ಅಫ್ರೀಕದ ಕಡೆಗೆ ಕಳುಹಿಸಿದರು. ಅಫ್ರಿಕ ಎಂದರೆ ಮರಾಖಿಶ್ ಮತ್ತು ಅಲ್‌ಜಝಾಇರ್‌ನ ಪ್ರದೇಶವಾಗಿದೆ. ಅಲ್ಲಾಹನು ಮುಸ್ಲಿಮರಿಗೆ ವಿಜಯವನ್ನು ನೀಡಿದನು.

ಹಿಜರೀ 27ರಲ್ಲಿ ಸ್ಪೇನ್ ವಿಜಯ. ಹಝ್ರತ್ ಉಸ್ಮಾನ್(ರ) ಅಬ್ದುಲ್ಲಾಹ್ ಬಿನ್ ನಾಫೀ ಬಿನ್ ಹುಸೈನ್ ಫಹರೀ ಮತ್ತು ಅಬ್ದುಲ್ಲಾಹ್ ಬಿನ್ ನಾಫೀ ಬಿನ್ ಅಬ್ದು ಖೈಸ್ ಫಹರಿಯನ್ನು ಅಫ್ರೀಕಿಯದಿಂದ ಸ್ಪೇನ್ ಕಡೆಗೆ ಹೋಗಲು ಆದೇಶಿಸಿದರು. ಹೀಗೆ ಅವರು ಸ್ಪೇನೆ ಕಡೆಗೆ ಹೋದರು. ಮುಸ್ಲಿಮರಿಗೆ ಅಲ್ಲಾಹನು ವಿಜಯವನ್ನು ನೀಡಿದನು. (ಅಲ್‌ಬಿದಾಯ ವನ್ನಿಹಾಯ ಲಿಇಬ್ನೆ ಕಸೀರ್, ಭಾಗ–7, ಪುಟ–147–148, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಿಜರೀ 28ರಲ್ಲಿ ಖುಬ್ರಸ್ ವಿಜಯ. ಅಬೂ ಮಹ್‌ಶರರ ಹೇಳಿಕೆ ಪ್ರಕಾರ ಹಿಜರೀ 33ರಲ್ಲಿ ಖುಬ್ರಸ್ ಮೇಲೆ ವಿಜಯ ಸಾಧಿಸಲಾಗಿತ್ತು. ಕೆಲವರ ಪ್ರಕಾರ ಹಿಜರೀ 27ರಲ್ಲಿ ಖುಬ್ರಸ್ ಯುದ್ಧ ನಡೆದಿತ್ತು ಎಂದಿದೆ. ತಾರೀಕೆ ತಬರೀ ಮತ್ತು ಬದಾಯತುಲ್ ನಿಹಾಯ ಎರಡೂ ಇದನ್ನು ಹಿಜರೀ 28ರ ಘಟನೆಯೆಂದು ಹೇಳುತ್ತದೆ. ಈ ಯುದ್ಧದಲ್ಲಿ ಸಹಾಬರಲ್ಲಿ ಹಝ್ರತ್ ಅಬೂಧರ್ ಗಿಫ್ಫಾರಿ, ಹಝ್ರತ್ ಉಬಾದ ಬಿನ್ ಸಾಮತ್ ಮತ್ತು ಅವರ ಪತ್ನಿಯಾದ ಹಝ್ರತ್ ಉಮ್ಮೇ ಹರಾಂ ಬಿನ್ತ್ ಮಲ್‌ಹಾನ್, ಹಝ್ರತ್ ಮಿಖ್‌ದಾದ್, ಹಝ್ರತ್ ಅಬೂದರ್‌ದಾ, ಹಝ್ರತ್ ಶಿದಾದ್ ಬಿನ್ ಔಫ್ ಭಾಗಿಯಾಗಿದ್ದರು.

ಸಿರಿಯ ದೇಶದ ಪಶ್ಚಿಮ ದಿಕ್ಕಿನಲ್ಲಿ ಇರುವ ಒಂದೇ ಒಂದು ದ್ವೀಪ ಖುಬ್ರಸ್ ಆಗಿದೆ. ಇದರಲ್ಲಿ ಅನೇಕ ತೋಟಗಳು ಮತ್ತು ಗಣಿಗಳಿದ್ದುವು. ಹಝ್ರತ್ ಉಸ್ಮಾನ್‌ರ(ರ) ಅನುಮತಿ ಪ್ರಕಾರ ಅಮೀರ್ ಮುಆವಿಯ ಕೈಯಿಂದ ಖುಬ್ರಸ್ ಮೇಲೆ ವಿಜಯ ಸಾಧಿಸಲಾಗಿತ್ತು. ಈ ಯುದ್ಧದಲ್ಲಿ ಹಝ್ರತ್ ಉಮ್ಮೇ ಹರಾಂ ಬಿನ್ತ್ ಮಲ್‌ಹಾನ್ ಸಹ ಭಾಗಿಯಾಗಿದ್ದರು. ಅವರ ಶಹಾದತಿನ ಭವಿಷ್ಯವಾಣಿ ಹಝ್ರತ್ ಪೈಗಂಬರ್(ಸ) ಮುಂಚಿತವಾಗಿಯೇ ನೀಡಿದ್ದರು. ಈ ಯುದ್ಧದಿಂದ ಮರಳುವಾಗ ಅವರಿಗೆ ಸವಾರಿಮಾಡಲಿಕ್ಕಾಗಿ ಸವಾರಿಮೃಗವನ್ನು ತರಲಾಗಿತ್ತು. ಅವರು ಅದರಲ್ಲಿ ಸವಾರರಾದರು. ಆದರೆ ಅವರು ಅದರಿಂದ ಕೆಳಗೆ ಬಿದ್ದು ಅವರ ಕುತ್ತಿಗೆಯ ಮೂಳೆ ಮುರಿದುಹೋಯಿತು. ಇದರಿಂದ ಅವರು ಶಹೀದ್ ಆದರು. (ತಾರೀಖ್ ಅತ್ತಿಬರಿ, ಸಂಪುಟ–5, ಪುಟ–96, ದಾರುಲ್ ಫಿಕರ್ 2002) (ಅಲ್‌ಬಿದಾಯ ವನ್ನಹಾಯ ಲಿಇಬ್ನೆ ಕಸೀರ್ ಭಾಗ–7, ಪುಟ–148–149, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಮುಂದಿನ ಬಾರಿಯೂ ಹಝ್ರತ್ ಉಸ್ಮಾನ್‌ರ(ರ) ಬಗ್ಗೆಗಿನ ಪ್ರಸ್ತಾಪ ನಡೆಯುವುದು. ಇನ್‌ಶಾ ಅಲ್ಲಾಹ್.ಇಂದು ಸಹ ನಾನು ದುಆದ ಕಡೆಗೆ ಗಮನವನ್ನು ಸೆಳೆಯುತ್ತೇನೆ. ಪಾಕಿಸ್ತಾನದ ಅಹ್ಮದಿಯರಿಗಾಗಿ ದುಆ ಮಾಡುತ್ತಿರಿ. ಅಲ್ಲಾಹನು ಅವರು ಸ್ಥಿತಿಗತಿಗಳನ್ನು ಸುಧಾರಿಸಲಿ. ಅವರಿಗೂ ದುಆ ಮಾಡುವ ಸೌಭಾಗ್ಯ ಲಭಿಸಲಿ. ತಮ್ಮ ಸುಧಾರಣೆ ಮಾಡಿಕೊಳ್ಳಲು ಅಲ್ಲಾಹನು ಸೌಭಾಗ್ಯ ನೀಡಲಿ. ಅಲ್ಲಾಹನೊಂದಿಗೆ ಸಂಬಂಧವನ್ನು ವರ್ಧಿಸಲು ಸೌಭಾಗ್ಯವನ್ನು ನೀಡಲಿ. ಅಲ್ಲಾಹನು ಬೇಗನೇ ಈ ಅಂಧಕಾರದ ದಿನಗಳನ್ನು ಪ್ರಕಾಶವನ್ನಾಗಿ ಪರಿವರ್ತಿಸಲಿ ಮತ್ತು ಅಲ್ಲಿಯ ಅಹ್ಮದಿಯರು ಸಹ ಸ್ವತಂತ್ರವಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸುವುದನ್ನು ನಾವು ಕಾಣುವಂತಾಗಲಿ.

*************************

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಅದರ ಆಳದ ಬಗ್ಗೆ ಏನು ತಿಳಿದೀತು. ಇವರು ಇನ್ನೂರು ಮುನ್ನೂರು ಕವನ ಸಾಲುಗಳೇ ಇರಲಿ ಎಂದಾದರೂ ಪ್ರಕಟಿಸಿದ್ದುದು ನೋಡಿರುವವರೇ ಅಥವಾ ಒಂದು ಸಾಲಿನಷ್ಟಾದರೂ ಸಾಹಿತ್ಯ ರೂಪದಲ್ಲಿ ಅರಬಿಯಲ್ಲಿ ಬರೆದಿದ್ದದ್ದು ತಿಳಿದಿರುವರೆ, ಹೌದು ಉರ್ದುವಿನಲ್ಲಿ ಪ್ರಭುತ್ವ ಅವಶ್ಯವಾಗಿದೆ." (ಪುಟ 64)

ಇದೀಗ ನಾವು ಕೆಳಗೆ ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲ್ವಿ ಅವರ "ಪಾಂಡಿತ್ಯ" ಕುರಿತು ಒಂದು ಘಟನೆ ಹಜ್‌ರತ್ ಮಸೀಹ್ ಮೌಊದ್(ಅ) ರವರ ಗ್ರಂಥ ರಾಝೆ ಹಕೀಖತ್ "ರೂಹಾನಿ ಖಝಾಯನ್ ಸಂಪುಟ 14 ರಿಂದ ಪ್ರಸ್ತುತಪಡಿಸುತ್ತೇವೆ.

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) 21 ನವೆಂಬರ್ 1898 ರಂದು ಒಂದು ಜಾಹೀರಾತು ಪ್ರಕಟಪಡಿಸಿದ್ದರು. ಅದರಲ್ಲಿ ಮುಹಮ್ಮದ್ ಹುಸೇನ್ ಬಟಾಲ್ವಿ ಅವರನ್ನು ಸಂಬೋಧಿಸಿ ಬರೆದಿದ್ದರು. ಇದೀಗ ನೀವು ಚರ್ಚೆಗಳ ಮೂಲಕ ಯಾವುದೇ ಮಾತಿಗೆ ಸಮ್ಮತಿಸುವರೇ ಎಂಬ ಭರವಸೆ ಕಳೆದುಕೊಂಡಿದ್ದೇನೆ. ನಾವು ಸಹ ನಿಮ್ಮ ಆಧಾರರಹಿತ ಮಾತುಗಳನ್ನು ಮಾನ್ಯ ಮಾಡಲು ಸಾಧ್ಯವಿಲ್ಲ. ಆದುದರಿಂದ ಬಟೌಲ್ವಿ ಮುಬಾಹಲ ಒಪ್ಪಲಿಲ್ಲ. ಅದಕ್ಕೆ ಒಡ್ಡಿದ ನೆಪವೆಂದರೆ ಮುಬಾಹಲ ನಿರ್ಣಯದ ಅವಧಿ ಮೂರು ದಿನಗಳದ್ದಾಗಬೇಕು. ಅದರ ನಂತರ ಪ್ರಕಟವಾಗುವ ಯಾವುದೇ ದೃಷ್ಟಾಂತವನ್ನು ಮುಬಾಹಲಕ್ಕೆ ಸಂಬಂಧಿಸಿದ್ದು ಎಂದು ಹೇಲಲಾಗದು.

ಸಯ್ಯದನಾ ಹಜ್‌ರತ್ ಮಸೀಹ್ ಮೌಊದ್(ಅ) ಬರೆದರು. ಮುಹಮ್ಮದ್ ಹುಸೇನ್ ನೇರವಾಗಿ ಮುಬಾಹಲ ಮೈದಾನಕ್ಕೆ ಆಗಮಿಸುವ ಬದಲು ಒಂದು ತೀರ ಅಶ್ಲೀಲ ಬೈಗ್ಗುಳಗಳಿಂದ ತುಂಬಿದ ಒಂದು ಜಾಹೀರಾತು ಬರೆದು ಮುಹಮ್ಮದ್ ಬಕ್ಷ್ ಜಾಫರ್ ಝಟುಂಗಿ ಮತ್ತು ಅಬ್ದುಲ್ ಹಸನ್ ತಿಬ್ಬತಿ ಅವರುಗಳ ಹೆಸರಿನಿಂದ ಮುದ್ರಿಸಿದನು. ಅವರು(ಅ) ಹೇಳಿದರು. ಈ ಸಮಯ ಆ ಜಾಹೀರಾತು ನನ್ನ ಮುಂದೆ ಇದೆ. ಮತ್ತು ನಾನು ಅಲ್ಲಾಹನೊಡನೆ ಪ್ರಾರ್ಥಿಸಿದ್ದೇನೆ. ಅವನು ನನ್ನ ಮತ್ತು ಮುಹಮ್ಮದ್ ಹುಸೇನ್ ನಡುವೆ ತನ್ನ ತೀರ್ಪು ಪ್ರಕಟಿಸಲಿ. ಆ ಮಾಡಿದ ಪ್ರಾರ್ಥನೆಯು ಹೀಗಿದೆ. "ಓ ನನ್ನ ಪ್ರತಾಪಶಾಲಿ ಅಲ್ಲಾಹನೇ, ನಾನು ನಿನ್ನ ದೃಷ್ಟಿಯಲ್ಲಿ ಮುಹಮ್ಮದ್ ಹುಸೇನ್ ಪದೇ ಪದೇ ತನ್ನ ಜಾಹೀರಾತಿನಲ್ಲಿ ಪ್ರಕಟಿಸಿದಂತೆ ಅವಮಾನಿತನಾಗಿದ್ದಲ್ಲಿ ನನ್ನನ್ನು ಅವಮಾನಿಸು, ಮತ್ತು ಅವರ ಮಾನ ಪ್ರತಿಷ್ಠೆ ಪ್ರಕಟಪಡಿಸು, ಆದರೆ ಓ ನನ್ನ ಒಡೆಯ, ನನ್ನ ಪರಿಪಾಲಕನೇ, ನಿನ್ನ ಸಾನಿಧ್ಯದಲ್ಲಿ ನನ್ನ ಏನಾದರೂ ಮರ್ಯಾದೆಯಿದ್ದರೆ ನಾನು ವಿನಮ್ರವಾಗಿ ಪ್ರಾರ್ಥಿಸುತ್ತೇನೆ. ಶೇಖ್ ಮುಹಮ್ಮದ್ ಹುಸೇನ್ ಮತ್ತು ಜಾಫರ್ ಝಟುಂಗಿ ಮತ್ತು ತಿಬ್ಬತಿ ಅವರುಗಳು ನನ್ನ ಬಗ್ಗೆ

ನನ್ನನ್ನು ಅವಮಾನಿಸಲು ಏನೆಲ್ಲ ಈ ಜಾಹೀರಾತಿನಲ್ಲಿ ಬರೆದಿರುವರು ಅವರನ್ನು ಅವಮಾನಿಸು, ಲೋಕದಲ್ಲಿ ಅವರ ನೀಚತನ ಜಾಹಿರುಪಡಿಸಲು. ಈ ಪ್ರಾರ್ಥನೆಯ ಉತ್ತರವಾಗಿ ಅಲ್ಲಾಹನಿಂದ ಅವರಿಗೆ ಈ ದೇವವಾಣಿಯಾಯಿತು. ನಾನು ದುಷ್ಕರ್ಮಿಗಳನ್ನು ಅವಮಾನಿಸುವೆನು. ಅಪಮಾನಿಸುವೆನು, ಮತ್ತು ಅವನು ತನ್ನ ಕೈಗಳಿಂದ ತುಂಡರಿಸುವೆನು. ಈ ಉರ್ದು ದೇವವಾಣಿಯ ಜೊತೆಯಲ್ಲಿ ಆದ ಅರಬಿ ದೇವವಾಣಿಗಳನ್ನು ಸಹ ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಬರೆದರು. ಅದರಲ್ಲಿ ಒಂದು ತುಣುಕು ದೇವವಾಣಿ ಇದಾಗಿತ್ತು. "ತಜಲು ಲಿಲಿಮರಿ.' ಹುಝೂರ್(ಅ) ಹೇಳಿದರು. ಇದೀಗ ಅಲ್ಲಾಹನು ತೀರ್ಪನ್ನು ತನ್ನ ಕೈಗೆತ್ತಿಕೊಂಡಿದ್ದಾನೆ. ಅದರ ಫಲ ಇಷ್ಟೇ. ಉಭಯತ್ರರಲ್ಲಿ ಯಾರು ಸುಳ್ಳುಗಾರರೋ ಅವರು ಅಪಮಾನಿತರಾಗುವರು.

ನೋಡಿರಿ ಅಲ್ಲಾಹನ ಮಹಿಮೆ, ಅವರು ಮುಬಾಹಲವನ್ನು ಒಂದು ವರ್ಷದ ಅವಧಿಗೆ ಬೇಡ ಬದಲು ಮೂರು ದಿನಗಳಲ್ಲಿ ಆಗಬೇಕೆಂದು ಬಯಸಿ ತಳ್ಳಿ ಹಾಕಿದರು. ಯಾವ ರೀತಿ ಅಲ್ಲಾಹನು ಅವರನ್ನು ತಕ್ಷಣದಿಂದ ಅವಮಾನಿತನಾಗುವ ಸಾಮಗ್ರಿಗಳನ್ನು ಒದಗಿಸಿದನು. ಅವರ ಪಾಂಡಿತ್ಯವನ್ನು ಯಾವ ರೀತಿ ಬಟ್ಟ ಬಯಲು ಮಾಡಿದನೆಂದರೆ ಒಬ್ಬ ಸಜ್ಜನನಾದ ಮನುಷ್ಯನು ನಾಚಿಕೆಗೆ ಒಳಪಟ್ಟು ಸಾಯಬೇಕು. ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ಜಾಹೀರಾತು ಮೌಲ್ವಿ ಮುಹಮ್ಮದ್ ಹುಸೆನ್ ಬಟೌಲ್ವಿ ಅವರ ಮುಂದೆ ಬಂದಾಗ ಓದಿ. ಆ ದೇವವಾಣಿಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದನು. ಅದು "ಅತಜಲು ಲಿಲಿಮರಿ" ಎಂಬ ಪದಗುಚ್ಛ ತಪ್ಪಾಗಿದೆ. ಅದು ಅತಜಬು ಮಿನ್ ಆಮರಿ" ಎಂದಾಗಬೇಕು ಎಂದರು. ಅದುದರಿಂದ ಇದು ದೇವವಾಣಿ ಮತ್ತು ದೇವನ ಮಾತಾಗಿರಲು ಸಾಧ್ಯವಿಲ್ಲ ಎಂದರು. ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಅದರ ಉತ್ತರವಾಗಿ ಹೇಳಿದರು.

"ಮುಹಮ್ಮದ್ ಹುಸೇನ್ ನನ್ನ ಅರಬಿ ದೇವವಾಣಿಯ ಮೇಲೆ ಆಕ್ಷೇಪ ಮಾಡಿ 21 ನವೆಂಬರ್ 1898 ರ ಜಾಹೀರಾತಿನಲ್ಲಿ ಪ್ರಕಟಿಸಿದ್ದಾನೆ. ಅಂದರೆ **ಅತಜಬು ಲಿಅಮರಿ** ಎಂಬ ಪದಗುಚ್ಛವಿದೆ. ಅದರ ಬಗ್ಗೆ ಆಕ್ಷೇಪವೆತ್ತಿ ಸ್ವಯಂ ತನ್ನ ಕೈಗಳಿಂದ ತನ್ನ ತಕ್ಷಣದ ಅಪಮಾನದ ಅಭಿಲಾಷೆ ಪೂರ್ಣವಾದಂತಾಯಿತು. ಅಲ್ಲದೇ ತಕ್ಷಣದ ಅಪಮಾನದ ಮಾತು 15 ಡಿಸೆಂಬರ್ 1898 ರಿಂದಲೇ ಪೂರ್ಣಗೊಂಡಿತ್ತು ಎನ್ನಬಹುದು. ಅವರು ಅದಕ್ಕಿಂತ ಮುಂಚೆಯೇ ಅಪಮಾನಕ್ಕೆ ಗುರಿಯಾಗಿದ್ದಾರೆ. ಅದನ್ನು ತಕ್ಷಣದ ಅಪಮಾನ ಅಲ್ಲ. ಮುಂಗಡ ಅಪಮಾನ ಎನ್ನಬಹುದು. ಅದು ಯಾವುದೆಂದರೆ ಶೇಖ್ ಸಾಹಿಬರು ನನ್ನ ದೇವವಾಣಿಯನ್ನು ನೋಡಿ ಒಂದು ಸಂದರ್ಭದಲ್ಲಿ ಶೇಖ್ ಗುಲಾಂ ಮುಸ್ತಫಾ ಸಾಹಿಬ್‌ರವರ ಮುಂದೆ ಅವರು ಅದೇ ನಗರದ ನಿವಾಸಿಯಾಗಿದ್ದಾರೆ. ಈ ಆಕ್ಷೇಪ ಮುಂದಿಟ್ಟರು. ಈ ಜಾಹೀರಾತಿನಲ್ಲಿರುವ ದೇವವಾಣಿಯ ವಾಕ್ಯವು ಅತಜಬು ಅಮರಿ ಅದು ವ್ಯಾಕರಣ ದೃಷ್ಟಿಯಿಂದ ತಪ್ಪಾಗಿದೆ. ಅದು ಅಲ್ಲಾಹನ ಮಾತಾಗಿರಲು ಸಾಧ್ಯವಿಲ್ಲ. ಬದಲು ಅತಜಬು ಮಿನ್ ಆಮರಿ ಎಂದಾಗಬೇಕಾಗಿದೆ. ಈ ಆಕ್ಷೇಪದಿಂದ ಅನಿವಾರ್ಯವಾಗಿ ಶೇಖ್ ಸಾಹಿಬರಿಗೆ ಅವಮಾನ ಉಂಟಾಯಿತು. ಏಕೆಂದರೆ ಅರಬರ ಹೆಸರಾಂತ ಕವಿಗಳು ಅಲ್ಲದೇ ಅಂಧಕಾರಮಯ ಕಾಲದ ಶ್ರೇಷ್ಠ ಕವಿಗಳ ಸಾಹಿತ್ಯವು ಸಾಬೀತುಪಡಿಸಿದೆ. ಅಜಬ್, ತಾಂ ಅಕ್ಷರದಿಂದಲೂ ಬರಬಹುದಾಗಿದೆ. ಇದೀಗ ಅದು ಸ್ಪಷ್ಟಗೊಂಡಿದೆ. ಶೇಖ್ ಸಾಹಿಬರು ಈ ತಪ್ಪು ಆಕ್ಷೇಪವನ್ನು ಎತ್ತಿ ಹಿಡಿದು, ಅದು ಅವರ ಅಜ್ಞತೆಯಾಗಿದೆ, ವಿದ್ವಾಂಸರ ಮುಂದೆ ಅವರು ತಾವಾಗಿ ಬೆತ್ತಲೆಗೊಂಡರು. ಮತ್ತು ಪ್ರತಿಯೊಬ್ಬ ಶತ್ರು ಮಿತ್ರರೆಡೆ ಸಾಬೀತುಪಡಿಸಿದರು. ಅವರು ಕೇವಲ ನಾಮಧಾರಿ ಮೌಲ್ವಿಯಾಗಿದ್ದಾರೆಯೇ ಹೊರತು ಅರಬಿ ವಿದ್ಯೆಯಿಂದ ಕಿಂಚಿತ್ತೂ ಸಂಬಂಧವಿಲ್ಲ. ಮೌಲ್ವಿಯೆಂದು ಕರೆಯಿಸಿಕೊಳ್ಳುವ ಇಂತಹ ವ್ಯಕ್ತಿಗೆ ಇದಕ್ಕಿಂತ ಹೆಚ್ಚು ಅಪಮಾನ ಇನ್ನೇನು ಬೇಕು ನಿಜವಾಗಿಯೂ ಅವರು ಮೌಲ್ವಿ ಗುಣಗಳಿಂದ ವಂಚಿತರಾಗಿದ್ದಾರೆ. ಅಕಟಾಕಟ! ಈ ವ್ಯಕ್ತಿಗೆ ಇಲ್ಲಿಯವರೆಗೂ ತಿಳಿದಿಲ್ಲ. ಈ ಕರ್ಮಪದ ಅಂದರೆ ಅಜಬ್ ಜೊತೆಯಲ್ಲಿ ಮಿನ್ ಪದವು ಬರಬಹುದು. "ಲಾಂ" ಪದವು ಬರಬಹುದು. ಪ್ರಾಥಮಿಕ ವ್ಯಾಕರಣ ತಿಳಿಯದ ಒಂದು ಮಗು ಸಹ ತಿಳಿದಿರುತ್ತಾನೆ. ವ್ಯಾಕರಣಗಾರರು "ಲಾಂ" ಬರುವುದನ್ನು ವಿವರಿಸಿದ್ದಾರೆ. ಯಾವ ರೀತಿಯಲ್ಲಿ "ಮಿನ್ ಎಂದು ಬರುತ್ತದೆ."

ಮುಹಮ್ಮದ್ ಹುಸೇನ್ ಬಟೌಲ್ವಿ ಜೀವನಪೂರ್ತಿ ಹಝ್ರತ್ ಮಸೀಹ್ ಮೌಊದ್(ಅ) ರವರ ವಿರೋಧ ಕಟ್ಟಿಕೊಂಡು ಅಪಮಾನಗಳಿಗೆ ಒಳಗಾದರು. ಅವುಗಳಲ್ಲಿ ಕೆಲವು ಅಪಮಾನಗಳು ಹೀಗಿದ್ದವು. ಅದರಿಂದ ಒಬ್ಬ ಸಜ್ಜನ ಪುರುಷನು ನಾಚಿಕೆಯಿಂದ ಸತ್ತುಹೋಗುತ್ತಿದ್ದನು.

ಮುಂದೆ ಇನ್‌ಶಾಅಲ್ಲಾಹ್ ನಾವು ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥ್ವಾನ ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್‌ಸೂರ್ ಅಹ್ಮದ್ ಮಸ್‌ರೂರ್)**

*(ಪುಟ ಸಂಖ್ಯೆ 16ರ ಉಳಿದ ಭಾಗ)*

ಅಂತ್ಯಗೊಂಡ ನಂತರ ದೀರ್ಘ ಸಮಯದವರೆಗೆ ಶಾಂತಿ ನೆಮ್ಮದಿ ಇದ್ದಿತು. ಮತ್ತೆ 1991 ರಲ್ಲಿ ಇರಾಕ್ ಯುದ್ಧ ಪ್ರಾರಂಭವಾಯಿತು. ಕುವೈತ್‌ನಲ್ಲಿ ಆಕ್ರಮಣ ಮಾಡಲಾಯಿತು. ಅದರ ಪರಿಣಾಮವಾಗಿ ಇರಾಕಿನ ಮೇಲೆ ಅಮೇರಿಕಾ ಆಕ್ರಮಣ ಮಾಡಿಸಿತು. ಈ ಯುದ್ಧದಲ್ಲಿ ಅಮೇರಿಕಾದ ಬಹು ದೊಡ್ಡ ಪಾತ್ರವಿದೆ. ಮತ್ತೆ ಲೋಕದಲ್ಲಿ ಶಾಂತಿಯ ಕುರಿತು ಯಾವ ಮಟ್ಟದ ನಷ್ಟ ಉಂಟಾಗಿದೆಯೇ ಅದು ಎಲ್ಲರ ಮುಂದಿದೆ.

ಯೂರೋಪ್ ಮತ್ತು ಜರ್ಮನಿಯಲ್ಲಿ ಒಂದು ಕಾಲದವರೆಗೆ ಎಲ್ಲವೂ ಸರಿಯಿತ್ತು. ಇಲ್ಲಿ ಸಣ್ಣ ಸಣ್ಣ ಹೋರಾಟಗಳು ಮುಸಲ್ಮಾನರ ವಿರುದ್ಧ ನಡೆದವು. ಆದರೆ ದೊಡ್ಡ ಪಾತ್ರವೇನಿರಲಿಲ್ಲ. ಮತ್ತೇ 2008 ರಲ್ಲಿ ಅರ್ಥ ವ್ಯವಸ್ಥೆ ಹದಗೆಟ್ಟಿತ್ತು. ಮತ್ತು ಪರಿಸ್ಥಿತಿಗಳು ತೀರ ಬಿಗಡಾಯಿಸಿದವು ಆ ಹದಗೆಟ್ಟ ಅರ್ಥ ವ್ಯವಸ್ಥೆಯು ಎಲ್ಲರ ದಿಕ್ಕು ಇನ್ನೊಬ್ಬರ ಅರ್ಥವ್ಯವಸ್ಥೆಯ ಮೇಲೆ ಆಕ್ರಮಿಸುವಂತೆ ಮಾಡಿತು. ಮತ್ತೆ ಅದೇ ಅರ್ಥ ವ್ಯವಸ್ಥೆ ಕುಸಿತದ ಕಾಲದ ನಡುವೆ ಯೂರೋಪಿಯನ್ ಮತ್ತು ಯೂರೋಪಿಯನ್ನರ ಪ್ರಶ್ನೆಗಳು ಎದ್ದಾಗ ಪರಿಸ್ಥಿತಿಗಳು ಹಾಳಾದವು. ಅದರಲ್ಲಿ ಮಾಧ್ಯಮದ ಪಾತ್ರವು ಬರುತ್ತಿದ್ದದ್ದು ಮಾಧ್ಯವು ಈ ಅರ್ಥವ್ಯವಸ್ಥೆಯ ಕುಸಿತವನ್ನು ಎಷ್ಟರಮಟ್ಟಿಗೆ ಪ್ರಚಾರ ನೀಡಿದೆ ಎಂದರೆ ಒಂದು ಭಯದ ವಾತಾವರಣ ನಿರ್ಮಾಣವಾಯಿತು. ಅದಕ್ಕೆ ಇನ್ನಷ್ಟು ಪುಷ್ಟಿ ದೊರೆಯಿತು.

ಹುಝೂರ್ ಹೇಳಿದರು. ಯೂರೋಪಿಗೆ ಆದ ರೀತಿಯಲ್ಲಿ ಕಾರ್ಯಕ್ರಮ ಏಷ್ಯಾದಿಂದ ಅಥವಾ ಆಫ್ರಿಕಾದಿಂದ ದೊರೆಯುತ್ತಿದೆ. ಯೂರೋಪಿನ ಪಂಗಡಗಳು ಎಷ್ಟೇ ನ್ಯಾಯಪ್ರಿಯವಾದರೂ ವಲಸೆಗಳಿಂದ ಕೆಲಸ ಪಡೆದವರಿಗೆ ಕಡಿಮೆ ಸಂಭಾವನೆ ನೀಡಲಾಗುತ್ತಿದೆ. ಇದೆಲ್ಲ ಸ್ಪಷ್ಟವಾಗಿ ಗೋಚರಿಸುತ್ತದೆ.

ಹುಝೂರ್ ಹೇಳಿದರು. ಈ ಆರ್ಥಿಕ ಸಂಕಷ್ಟ ಎದುರಾದಾಗ ಯೂರೋಪ್, ಅಮೇರಿಕಾ, ಕೆನಡ ಎಲ್ಲ ಕಡೆ ಅದಕ್ಕೆ ಅವರೆ. ಕಾರಣ ಎಂದು ಸಾರಲಾಯಿತು. ಎಲ್ಲ ಕಡೆ ಮುಸ್ಲಿಮರ ಮೇಲೆ ಹೆಚ್ಚು ಅಪವಾಧಗಳನ್ನು ಹಚ್ಚತೊಡಗಿದರು. ಅದರ ಉತ್ತರವಾಗಿ ಮುಸ್ಲಿಮರು ಸಹ ಇತರರ ಮೇಲೆ ಆರೋಪ ಹಚ್ಚಲು ಪ್ರಾರಂಭಿಸಿದರು. ಈ ಸ್ಥಿತಿಯು ಪರಿಸ್ಥಿತಿಗಳನ್ನು ಇನ್ನಷ್ಟು ಬಿಗಡಾಯಿಸಿತು. ಹಿಂದಿನ ನಾಲ್ಕು ವರ್ಷಗಳಿಂದ ಅರಬಿಯಲ್ಲಿ Spring ಸಮಸ್ಯೆ ಎದುರಾಗಿದೆ. ಈಗ ಬುದ್ಧಿವಂತರ ವರ್ಗ ಅದರಲ್ಲಿ ಬ್ರಹತ್ ಶಕ್ತಿಗಳ ಕೈವಾಡವಿದೆ ಎಂದು ಅಪಾದಿಸಲು ಪ್ರಾರಂಭಿಸಿದರು. ಅದು ತಪ್ಪು ಸರಿಯೋ, ಬೇರೆ ವಿಷಯ ಆದರೆ Rift ಹೆಚ್ಚಾಗತೊಡಗಿತು.

ಮೊದಲಿಗೆ ಅವರು ಇರಾಕನ್ನು ಹಾಳುಗೆಡಹಿದರು. ಅವರ ಬಲಿ ಕೆಮಿಕಲ್ ಆಯುಧಗಳಿವೆ ಎಂದು ಅಪಾದಿಸಲಾಯಿತು. ಈಗ ಅದೇ ರಾಜಕಾರಣಿಗಳು, ಅಮೇರಿಕದ ರಾಜಕಾರಣಿಗಳು ಆ ಅಪಾದನೆಗಳು ತಪ್ಪಾಗಿದ್ದವು ಎಂಬ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಅವರ ಬಳಿ ರಾಸಾಯನಿಕ ಆಯುಧಗಳು ಇರಲಿಲ್ಲ ಎನ್ನುತ್ತಾರೆ.

ಮತ್ತೆ ಈಜಿಪ್ಟ್ ವಿರುದ್ಧ ಅವರು ಕ್ರಮಕೈಗೊಂಡರು. ಹುಝೂರ್ ಹೇಳಿದರು. ಅಮೇರಿಕಾದ ಒಬ್ಬ ಪತ್ರಿಕಾ ಪ್ರತಿನಿಧಿ ಈಜಿಪ್ಟ್ ಕುರಿತು ನನಗೆ ಒಂದು ಪ್ರಶ್ನೆ ಕೇಳಿದಾಗ ನಾನು ಹೇಳಿದ್ದೆ. ಯಾವ ಸರಕಾರವನ್ನು ಈ ಜನರು ತಂದಿದ್ದಾರೆ. ಅದು ವರ್ಷ, ಒಂದೂವರೆ ವರ್ಷದಲ್ಲಿ ಅಂತ್ಯಗೊಳ್ಳುವುದು, ಹಾಗೆಯೇ ಆಯಿತು. ಅದೇ ನಾಮಧಾರಿ ಇಸ್ಲಾಮಿ ಸರಕಾರವನ್ನು ಯಾವ ಜನರು ಮೇಲೆ ತಂದಿದ್ದರೋ ಅವರನ್ನೇ ಕಣ್ಣು ತೋರಿಸುವಾಗ ಅದೇ ಸೈನಿಕರನ್ನು ಬಳಸಿ ಉಲ್ಟಾ ಮಾಡಿದರು ಈಗ ನೋಡಿ ಯಾವ ಸರಕಾರವನ್ನು ಪ್ರಜಾಪ್ರಭುತ್ವ ಸ್ಥಾಪನೆಗೊಂಡು ತಂದಿದ್ದರೋ ಅದರ ವಿರುದ್ಧವೇ ಸೈನ್ಯಕ್ಕೆ ಬೆಂಬಲ ನೀಡಿದರು ಮತ್ತು ಸೈನಿಕರ ಬೆಂಬಲದಿಂದ ಅದನ್ನು ಅಂತ್ಯಗೊಳಿಸಿದರು.

ಮತ್ತು ಲಿಬಿಯಾದೊಂದಿಗೆ ಏನು ಮಾಡಲಾಗಿದೆ. ಅದು ನಿಮ್ಮ ಮುಂದಿದೆ. ಲಿಬಿಯಾದಲ್ಲಿ ಗಡಾಫಿ ಸರಕಾರವನ್ನು ಅಂತ್ಯಗೊಳಿಸಿ ಪ್ರಜಾರಾಜ್ಯ ಸ್ಥಾಪನೆ ಮಾಡುವ ಉದ್ದೇಶವಿತ್ತು. ಆದರೆ ಈಗ ಪ್ರಜಾಪ್ರಭುತ್ವ ಎಲ್ಲಿದೆ. ಪ್ರತಿಯೊಂದು ವರ್ಗವು ತನ್ನದೇ ಆದ ಸರಕಾರ ರಚಿಸಿಕೊಂಡಿದೆ. ಆಗ ಇದ್ದ ಶಾಂತಿ ನಾಶಗೊಂಡಿತು ಮತ್ತು ಪ್ರಜಾಪ್ರಭುತ್ವ ಸ್ಥಾಪನೆಯಾಗಲಿಲ್ಲ.

ಈ ರೀತಿಯ ಪರಿಸ್ಥಿತಿಗಳು ಇನ್ನಿತರ ಅರಬ್ ರಾಷ್ಟ್ರಗಳದ್ದಾಗಿದೆ. ಈಗ ಯೂರೋಪ್ ಜನರು ಹೇಳುತ್ತಾರೆ. ಅವರಿಗೆ ಅರಬ್ ದೇಶಗಳ ಹದಗೆಟ್ಟ ಪರಿಸ್ಥಿತಿಗಳಿಂದ ಮತ್ತು ಉಗ್ರವಾದ ಸಂಘಟನೆಗಳಿಂದ ಭಯವಾಗತೊಡಗಿದೆ ಎಂದು.

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE**

**1800-103-2131**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 18,25 March 2021, Issue No. 11-12

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 08ರ ವರದಿಯ ಉಳಿದ ಭಾಗ)**

### ಕುಟುಂಬಗಳ ಹಾಗೂ ವೈಯಕ್ತಿಕ ಭೇಟಿಗಳು

ಕಾರ್ಯಕ್ರಮದನ್ವಯ 6:30 ಗಂಟೆಗೆ ಹುಝೂರ್ ತಮ್ಮ ಕಚೇರಿಗೆ ಆಗಮಿಸಿದರು. ಕುಟುಂಬಗಳ ಭೇಟಿ ಕಾರ್ಯಕ್ರಮ ಪ್ರಾರಂಬವಾಯಿತು. ಸಂಜೆಯ ಅಧಿವೇಶನದಲ್ಲಿ 48 ಕುಟುಂಬಗಳ 221 ಜನರು ತಮ್ಮ ಪ್ರೀತಿಯ ಇಮಾಮರನ್ನು ಭೇಟಿಯಾಗುವ ಭಾಗ್ಯ ಪಡೆದರು. ಆ ಎಲ್ಲ ಕುಟುಂಬಗಳು ಹುಝೂರರ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

ಭೇಟಿ ಮಾಡಲು ಬಂದ ಈ ಕುಟುಂಬಗಳು ಜರ್ಮನಿಯ ವಿವಿಧ ಜಮಾಅತುಗಳಿಂದ ಮತ್ತು ಕ್ಷೇತ್ರಗಳಿಂದ ಬಹು ದೀರ್ಘವಾದ ಪ್ರಯಾಣ ಬೆಳೆಸಿ ಬಂದಿದ್ದರು. ESNARUCK ನಿಂದ 330 ಕಿ.ಮೀ ಹೋಂಬರ್ಗ್‌ನಿಂದ 500 ಕಿ.ಮೀ ಮತ್ತು ಬರ್ಲಿನ್ ನಿಂದ ಬಂದ ಕುಟುಬಗಳು 500 ಕಿ.ಮೀ ಗಳ ದೀರ್ಘವಾದ ದೂರ ಕ್ರಮಿಸಿ ಬಂದು ತಲುಪಿದ್ದರು.

ಜರ್ಮನಿಯ ಜಮಾಅತುಗಳಿಂದಲ್ಲದೇ ವಿದೇಶಗಳಿಂದ ಪಾಕಿಸ್ತಾನ, ಅಮೇರಿಕಾ, ಕೆನಡಾ, ಮಾಲಿಯಿಂದ ಬಂದ ಜಮಾಅತ್ ಬಾಂಧವರು ತಮ್ಮ ಪ್ರೀತಿಯ ಇಮಾಮರೊಂದಿಗೆ ಭೇಟಿಯಾಗುವ ಭಾಗ್ಯ ಪಡೆದರು.

ಭೇಟಿಗಳ ನಡುವೆ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ತಮ್ಮ ನೇತಾರರಿಂದ ಲೇಖನಿ ಪಡೆದರು. ಮತ್ತು ಹುಝೂರ್ ಪ್ರೀತಿಪೂರ್ವಕವಾಗಿ ಬಾಲಕ ಬಾಲಕಿಯರಿಗೆ ಚಾಕ್ಲೇಟ್‌ಗಳನ್ನು ನೀಡಿದರು.

### ಆಮೀನ್ ಸಮಾರಂಭ

ಭೇಟಿಗಳ ಈ ಕಾರ್ಯಕ್ರಮ 9 ಗಂಟೆ 20 ನಿಮಿಷದವರೆಗೆ ನಡೆಯಿತು. ಅನಂತರ ಹುಝೂರ್ ಮಸೀದಿಯ ಪುರುಷರ ಸಭಾಂಗಣಕ್ಕೆ ಆಗಮಿಸಿದರು. ಅಲ್ಲಿ ಕಾರ್ಯಕ್ರಮದನ್ವಯ ಆಮೀನ್ ಸಮಾರಂಭ ಏರ್ಪಡಿಸಲಾಗಿತ್ತು.

ಹುಝೂರ್ ಕೆಳಗೆ ನಮೂದಿತ 29 ಬಾಲಕ ಬಾಲಕಿಯರಿಂದ ಪವಿತ್ರ ಖುರ್‌ಆನ್‌ನ ಒಂದೊಂದು ವಚನ ಆಲಿಸಿದರು. ಕೊನೆಯಲ್ಲಿ ದುಆ ಮಾಡಿಸಿದರು. ಕೆಳಗೆ ನಮೂದಿತ ಅದೃಷ್ಟಶಾಲಿ ಬಾಲಕ ಬಾಲಕಿಯರು ಆಮೀನ್ ಸಮಾರಂಭದಲ್ಲಿ ಶಾಮೀಲಾಗಿದ್ದರು.

ಅಮ್ಮಾರ್ ಫಝುಲ್ ಉಮರ್ ಬರ್ಕಲೇ, ದಾನಿಯಾಲ್ ಮಸ್‌ಊದ್, ಅಬ್ದುಲ್ಲಾ ಅಹ್ಮದ್, ಮುದಸ್ಸಿರ್ ಅಹ್ಮದ್, ಜಾಝಿಬ್ ಅಹ್ಮದ್, ಫಾತಿಹ್ ಅಹ್ಮದ್, ಮಲಕ್ ವಖಾರ್, ಅತಾಉಲ್ಲಾಹ್ ನಾಸಿರ್, ಫಾರಾನ್ ಅಹ್ಮದ್, ಈಶಾನ್ ಮಲಿಕ್, ಝೀಶಾನ್ ಃಆಶಿರ್.

ಮಲಾಯಿಕ ಬರ್ಕಲೇ, ಖೌಲ ಸಬಾಹತ್ ಭಟ್ಟಿ, ಆಲಿಯಾ ಭಟ್ಟಿ, ಅತಿಯತುಲ್ ಹೈ ಭಟ್ಟಿ, ಸಬೀಕ ಆಮಿರ್, ಸಾರಿಯಾ ಅಹ್ಮದ್, ದಾನಿಯಾ ಝಾಹಿದ್, ಗಝಾಲ ಅಹ್ಮದ್, ಆಲಿಯಾ ಮಸ್‌ಊದ್, ಅತೀಖ ಖಾನ್, ಸಬೀಖ ಮಹ್ಮೂದ್ ಖಾನ್ ಸಿಂಧು, ಹದೀಖ ಫಾರೋಝ್, ಶಾಹೀನ್ ಜಾವೇದ್, ಆಯಿಝಾ ಕಲೀಮ್, ಅತಿಯತುಲ್ ವಕೀಲ್ ಬಿಲಾಲ್, ಬಾಸಿಮ ಅರಮ್ ಖಾನ್, ಅದೀಬ ಮಹ್ಮೂದ, ಅತಿಯತುಲ್ ವಕೀಲ್ ಈಮಾನ್.

ಆಮೀನ್ ಸಮಾರಂಭದ ನಂತರ ಹುಝೂರ್ ಮಗ್ರಿಬ್ ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು.

ನಮಾಝುಗಳ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿ ನಿಲಯಕ್ಕೆ ತೆರಳಿದರು. ಇಂದು ಮುಕರ್ರಮ್ ಮಾಸ್ತರ್ ಅಬ್ದುಲ್ ಖುದ್ದೂಸ್ ಸಾಹಿಬ್ ಶಹೀದ್‌ರವರ ಕುಟುಂಬ ಹಾಲೆಂಡ್‌ನಿಂದ ಜರ್ಮನಿ ತಲುಪಿದ್ದರು. ಈ ಕುಟುಂಬವು ತಮ್ಮ ಪ್ರೀತಿಯ ನೇತಾರರ ದರ್ಶನ ಪಡೆಯಲು ಮೆಟ್ಟಿಲುಗಳ ಬಳಿ ನಿಂತಿದ್ದರು. ಹುಝೂರ್ ಪ್ರೀತಿಪೂರ್ವಕವಾಗಿ ಆ ಕುಟುಂಬಗಳ ಜೊತೆ ನಿಂತರು ಮತ್ತು ಭೇಟಿಯಾಗುವ ಭಾಗ್ಯ ನೀಡಿದರು ಮತ್ತು ಶಹೀದ್ ದಿವಂಗತರ ಪತ್ನಿ ಮಕ್ಕಳೊಂದಿಗೆ ಮಾತನಾಡಿದರು. ಶಹೀದ್ ದಿವಂಗತರ ಕುಟುಂಬದವರ ಇದು ಪ್ರಥಮ ಭೇಟಿಯಾಗಿತ್ತು. ಅದು ಅವರಿಗೆ ಅಸಾಮಾನ್ಯ ರೀತಿಯಲ್ಲಿ ಮನಃಶಾಂತಿಗೆ ಕಾರಣವಾಯಿತು. ಅವರ ದು:ಖವು ಮಾಯವಾಯಿತು. ಎಲ್ಲ ಕಷ್ಟ ಆತಂಕಗಳು ಸುಖ ನೆಮ್ಮದಿಯಲ್ಲಿ ಪರಿವರ್ತಿತವಾಯಿತು.

ಹುಝೂರ್ ಪ್ರೀತಿಪೂರ್ವಕವಾಗಿ ಅವರೊಡನೆ ಮತುಕತೆ ನಡೆಸಿದರು. ಅವರ ಯೋಗಕ್ಷೇಮವನ್ನು ವಿಚಾರಿಸುವ ಅವರ ವಸತಿಗೋಸ್ಕರ ವ್ಯವಸ್ಥಾಪಕರಿಗೆ ನಿರ್ದೇಶನ ನೀಡಿ ಹುಝೂರ್ ತಮ್ಮ ವಸತಿ ನಿಲಯಕ್ಕೆ ತೆರಳಿದರು.

*****************

### 4 ಜೂನ್ 2015 ಗುರುವಾರ

ಹುಝೂರ್(ಅಬಅ) ನಾಲ್ಕೂವರೆ ಗಂಟೆಗೆ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ಫಜರ್ ನಂತರ ಹುಝೂರ್ ತಮ್ಮ ವಸತಿ ನಿಲಯಕ್ಕೆ ತೆರಳಿದರು.

ಮುಂಜಾನೆ ಹುಝೂರ್ ಕಚೇರಿಯ ಅಂಚೆಗಳನ್ನು ಮತ್ತು ವರದಿಗಳನ್ನು ಪರಿಶೀಲಿಸಿದರು ಮತ್ತು ನಿರ್ದೇಶನಗಳನ್ನು ನೀಡಿದರು. ಹೀಗೆ ವಿವಿಧ ಕಚೇರಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು.

ಎರಡು ಗಂಟೆಗೆ ಹುಝೂರ್ ಆಗಮಿಸಿ ಝುಹರ್ ಅಸರ್ ನಮಾಝುಗಳನ್ನು ಜಮಾ ಮಡಿ ನಿರ್ವಹಿಸಿಕೊಟ್ಟರು. ನಮಾಝುಗಳ ನಿರ್ವಹಣೆಯ ನಂತರ ತಮ್ಮ ವಸತಿ ನಿಲಯಕ್ಕೆ ತೆರಳಿದರು.

### ಜರ್ಮನ್ ರಾಜಕಾರಣಿ Dr. Gysi ರವರ ಹುಝೂರೊಡನೆ ಭೇಟಿ

ಕಾರ್ಯಕ್ರಮದನ್ವಯ ನಾಲ್ಕೂವರೆ ಗಂಟೆಗೆ ಹುಝೂರ್ ತಮ್ಮ ಕಚೇರಿಗೆ ಆಗಮಿಸಿದರು. ಎರಡು ಪಾರ್ಟಿಯ ಸಂಸದಿಯ ನಾಯಕರಾದ Dr Gysi ಹುಝೂರರೊಡನೆ ಭೇಟಿ ಮಾಡಲು ಬಂದಿದ್ದರು. ಹುಝೂರ್ ಹೇಳಿದರು. ನನಗೆ ನಿಮ್ಮನ್ನು ಭೇಟಿಯಾಗಿ ತುಂಬ ಸಂತೋಷವಾಯಿತು. ಅದಕ್ಕೆ ಅವರು ಸಹ ಸಂತಸದ ಪ್ರತಿಕ್ರಿಯೆ ನೀಡಿದರು.

ಅನಂತರ Dr. Gysi ಹೇಳಿದರು. ಪ್ರಸಕ್ತ ಕಾಲದ ಪರಿಸ್ಥಿತಿಗಳನ್ನು ನೋಡಿ ನನಗೆ ತುಂಬ ಗಾಬರಿಯಾಗುತ್ತದೆ ಆದರೆ ನಾನು ನಿರಾಸೆಗೊಂಡಿರಲಿಲ್ಲ. cold war ಅಂತ್ಯಗೊಂಡಿದ್ದಾಗ ಆ ಸಮಯ ಯಾವುದೋ World order ಇತ್ತು. ಆದರೆ ಈಗ ಯಾವ World order ಇಲ್ಲವಾಗಿದೆ. ಎಲ್ಲ ಕಡೆ ಅಸಮಾಧಾನವಿದೆ. ಮುಸ್ಲಿಂ ರಾಷ್ಟ್ರಗಳ ಮತ್ತು ಪಶ್ಚಿಮ ರಾಷ್ಟ್ರಗಳ ಮಧ್ಯೆ ಒಂದು ಸಾಂಸ್ಕೃತಿಕ ವಿರೋಧ ಪ್ರಾರಂಭವಾಗಿದೆ. ಅದು ಅಪಾಯಕಾರಿಯಾಗಿದೆ. Middle East (ಮಧ್ಯ ಪ್ರಾಂಚ್ಯದಲ್ಲಿ) ಶಕ್ತಿ ಮತ್ತು ಆಡಳಿತದ ಯುದ್ಧ ಜಾರಿಯಲ್ಲಿದೆ. ಜರ್ಮನಿಯಲ್ಲೂ ಸಹ ಮುಸಲ್ಮಾನರ ಪೈಕಿ ಒಂದು ಭಯ ಕಾಣಬಹುದಾಗಿದೆ. ಬರ್ಲಿನ್‌ನಲ್ಲಿ ಜಮಾಅತಿನ ಮಸೀದಿಯ ನಿರ್ಮಾಣ ಸಮಯದಲ್ಲಿ ಒಂದು ಜರ್ಮನ್ ವರ್ಗದಿಂದ ಧ್ವನಿ ಎತ್ತಲಾಗಿತ್ತು. ಮತ್ತು ವಿರೋಧ ವ್ಯಕ್ತವಾಗಿತ್ತು. ಇದು ನಮ್ಮ ಅದೃಷ್ಟವಾಗಿತ್ತು. ಆ ಸಮಯ ನಮ್ಮದೆ ಪಕ್ಷದವರು ಅಲ್ಲಿಯ ಮೇಯರ್ ಆಗಿದ್ದರು ಅವರು ವಿರೋಧದ ನಡುವೆಯೂ ತಮ್ಮ ಮಾತಿನ ಮೇಲೆ ಸ್ಥಿರವಾಗಿದ್ದರು. ಈಗ ಅಲ್ಲಿ ಮಸೀದಿ ಇದೆ. ಎಲ್ಲವು ಅನುಕೂಲ ಸ್ಥಿತಿಗೆ ಬಂದಿದೆ. ಮತ್ತು ಪರಿಸರ ಶಾಂತವಾಗಿದೆ. ಈಗ ಜನರಿಗೆ ಮನವರಿಕೆಯಾಗಿದೆ. ನಮ್ಮ ಭಯ ಅನಗತ್ಯವಾಗಿತ್ತು ಎಂಬುದು.

ಅವರು ಹೇಳಿದರು. ಜರ್ಮನಿಯಲ್ಲಿ ಒಂದು ಮಾತ್ರ ಕಾಣಬಹುದಾಗಿದೆ. ಯಾವ ಕ್ಷೇತ್ರಗಳಲ್ಲಿ ಮುಸ್ಲಿಂ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಅಲ್ಲಿ ಬಲಪಂಥೀಯ ಪಕ್ಷಗಳಿಗೆ ಮತ ಕೊಡಲಾಗುವುದಿಲ್ಲ. ಮತ್ತು ಯಾವ ಕ್ಷೇತ್ರಗಳಲ್ಲಿ ಮುಸ್ಲಿಮರ ಸಂಖ್ಯೆ ಕಡಿಮೆ ಇದೆಯೇ ಅಲ್ಲಿ ಬಲಪಂಥೀಯ ಪಕ್ಷಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮತ ಹಾಕುತ್ತಾರೆ. ಈ ಸ್ಥಿತಿಯಲ್ಲಿ ತಮ್ಮ ಪಾತ್ರ ನಿರ್ವಹಿಸುತ್ತಿದೆ. ಮಧ್ಯ ಪ್ರಾಚ್ಯದ ವಿವಿಧ ರಾಷ್ಟ್ರಗಳು ಲುಬ್ನಾನ್, ಸೀರಿಯಾ, ಇರಾಕ್, ಲಿಬಿಯಾ ಮುಂತಾದ ಕಡೆ ನಾನು ಹೋಗಿದ್ದೆ. ನನಗೆ ತುಂಬ ಹಿತವೆನಿಸಿತು. ಅವರ ಸ್ಥಿತಿಯೂ ಚೆನ್ನಾಗಿತ್ತು.

ಅವರು ಹೇಳಿದರು. ನನಗೆ ತುಂಬ ಸಂತೋಷವಾಗುವುದು ಹುಝೂರ್ ಲೋಕದ ಈ ಪ್ರಸಕ್ತ ಪರಿಸ್ಥಿತಿಗಳ ಬಗ್ಗೆ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದರೆ, ನಾನೊಬ್ಬ ವಿಶೇಷ ರೀತಿಯ ಮನುಷ್ಯನಾಗಿದ್ದೇನೆ. ನಾನು ಯಾವುದೇ ಧರ್ಮಕ್ಕೆ ಸಂಬಂಧಿಸಿದವನಲ್ಲ.

ಅವರ ಈ ಮಾತುಗಳಿಗೆ ಹುಝೂರ್ ಹೇಳಿದರು. ಒಬ್ಬ ಮನುಷ್ಯನು ಮಾನವೀಯತೆಯ ಮೇಲೆ ವಿಶ್ವಾಸ ಹೊಂದಿದರೆ ಅವನು ಪ್ರಜೆಗಳ ಹಕ್ಕುಗಳನ್ನು ಪಾಲಿಸಬಹುದಾಗಿದೆ.

ಇಂದಿನ ಲೋಕದ ಪ್ರಸಕ್ತ ಸ್ಥಿತಿ ಏನಿದೆಯೋ ಅದು Cold ಎಂದು

*(ಪುಟ ಸಂಖೆ 15 ರಲ್ಲಿ ಮುಂದುವರಿಸಲಾಗಿದೆ)*

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.